## ಇತಿಹಾಸ ವಿಭಾಗ

## ಅಧ್ಯಾಯ–1

## ಆಧಾರಗಳು

**ಆಧಾರಗಳು ಎಂದರೇನು?**

ಆಧಾರ ಎಂದರೆ, ಚರಿತ್ರೆಯ ರಚನೆ ಬೇಕಾಗುವ ಮೂಲ ಸಾಮಾಗ್ರಿಗಳು

**ಚರಿತ್ರೆ ರಚನೆಗೆ ಆಧಾರಗಳು ಏಕೆ ಬೇಕು?**

- ಇವು ಆ ಕಾಲದ ವಿವರಗಳನ್ನು ನೀಡುತ್ತವೆ.
- ಗತಿಸಿದ ಸಂಗತಿಗಳ ಕ್ರಮಬದ್ಧವಾಗಿ ಹೇಳುವುದಕ್ಕೆ
- ಇತಿಹಾಸದ ರಚನೆಗೆ ಆಧಾರಗಳೇ ಅಗತ್ಯ
- ಆಧಾರಗಳಿಲ್ಲದೆ ಇತಿಹಾಸವಿಲ್ಲ
- ಇತಿಹಾಸಕಾರನೆಂಬ ನ್ಯಾಯಾವಾದಿಗೆ ಆಧಾರಗಳೇ ಸಾಕ್ಷಿ–ಪುರಾವೆ
- ಇತಿಹಾಸಕಾರ ವಾದ ಮಂಡಿಸಲು ಆಧಾರಗಳೇ ಅಗತ್ಯ
- ದೇಹಕ್ಕೆ ಅಸ್ಥಿಪಂಜರವಿದ್ದಂತೆ ಇತಿಹಾಸಕ್ಕೆ ಆಧಾರಗಳು.
- ಇತಿಹಾಸ ವಿವರಿಸಲ್ಪಡುವ ಸಂಗತಿ & ಘಟನೆಗಳಿಗೆ ನಿರ್ದಿಷ್ಟ ಆಧಾರಗಳು ಬೇಕು ಎನ್ನುವುದು ಜನಜನಿತ.

**ಇತಿಹಾಸದ ಆಕರಗಳೆಂದು ಏನನ್ನು ಪರಿಗಣಿಸಬಹುದು?**

- ವ್ಯವಸಾಯದ ಪರಿಕರಗಳು
- ದೇವಾಲಯಗಳು
- ಧಾರ್ಮಿಕ ಕಟ್ಟಡಗಳು
- ಕೋಟೆಗಳು
- ಶಾಸನಗಳು
- ನಾಣ್ಯಗಳು
- ಆಯುಧಗಳು
- ಲಿಖಿತ(ಸಾಹಿತ್ಯ) ದಾಖಲೆಗಳು

### ಇತಿಹಾಸದ ಆಧಾರಗಳನ್ನು ವಿಂಗಡಿಸಿ ಬರೆಯಿರಿ.

**ಆಧಾರಗಳನ್ನು ಎರಡು ವಿಧಗಳಾಗಿ ವಿಂಗಡಣೆ:–**

1. **ಸಾಹಿತ್ಯ ಆಧಾರಗಳು**
2. **ಪ್ರಾಕ್ತನ ಆಧಾರಗಳು**

| ಸಾಹಿತ್ಯ ಆಧಾರಗಳು | ಪ್ರಾಕ್ತನ ಆಧಾರಗಳು |
|---|---|
| 1. ದೇಶಿಯ ಸಾಹಿತ್ಯ | ಎ) ಶಾಸನಗಳು |
| 2. ವಿದೇಶೀಯ ಸಾಹಿತ್ಯ | ಬಿ) ನಾಣ್ಯಗಳು |
| 3. ಮೌಖಿಕ ಸಾಹಿತ್ಯ | ಸಿ) ಸ್ಮಾರಕಗಳು |
| | ಡಿ) ಅವಶೇಷಗಳು |

**ದೇಶೀಯ ಸಾಹಿತ್ಯವು ಹೇಗೆ ಇತಿಹಾಸ ರಚನೆಗೆ ಸಹಾಯ ಮಾಡುತ್ತವೆ?**

- ಭಾರತೀಯರಿಂದಲೇ **ದೇಶಿಯ ಭಾಷೆಗಳಲ್ಲಿ** ರಚನೆ
- **ಸಂಸ್ಕೃತ, ಪ್ರಾಕೃತ, ಕನ್ನಡ, ತೆಲುಗು, ತಮಿಳು** & **ಹಿಂದಿ**
- ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ, ಆಡಳಿತ ಚಿತ್ರಣ

**ಪ್ರಮುಖ ದೇಶೀಯ ಕೃತಿಗಳು:–**

| ಕ್ರ.ಸಂ | ಕೃತಿಕಾರರ ಹೆಸರು | ಗ್ರಂಥಗಳು |
|---|---|---|
| 01 | ಕೌಟಿಲ್ಯ | ಅರ್ಥಶಾಸ್ತ್ರ |
| 02 | ಅಶ್ವಘೋಷ | ಬುದ್ಧಚರಿತ |
| 03 | ಹಾಲರಾಜ | ಗಾಥಾಸಪ್ತಸತಿ |
| 04 | ವಿಶಾಖದತ್ತ | ಮುದ್ರಾರಾಕ್ಷಸ |
| 05 | ಕಲ್ಹಣ | ರಾಜತರಂಗಿಣಿ |
| 06 | ಬಾಣಭಟ್ಟ | ಹರ್ಷಚರಿತೆ |
| 07 | ಚಾಂದ್‌ಬರ್ದಾಯಿ | ಪೃಥ್ವರಾಜ ರಾಸೋ |
| 08 | ಪಂಪ | ವಿಕ್ರಮಾರ್ಜುನ ವಿಜಯ |
| 09 | ಶ್ರೀವಿಜಯ | ಕವಿರಾಜಮಾರ್ಗ |
| 10 | ಬೌದ್ಧ ಸಾಹಿತ್ಯಗಳಾದ ತ್ರಿಪಿಟಕಗಳು | |

**ವಿದೇಶಿಯ ಸಾಹಿತ್ಯವನ್ನು ವಿವರಿಸಿ.**

- ಭಾರತಕ್ಕೆ ಬಂದ ವಿದೇಶಿ **ಪ್ರವಾಸಿಗರ, ವಿದ್ವಾಂಸರ, ಬರಹಗಾರರ, ರಾಯಬಾರಿಗಳ, ವ್ಯಾಪಾರಿಗಳ, ಮಿಶನರಿಗಳ** ಅನುಭವದ ಬರವಣಿಗೆ
- ಅಂದಿನ **ಸಾಮಾಜಿಕ, ಸಾಂಸ್ಕೃತಿ, ರಾಜಕೀಯ, ಆರ್ಥಿಕ** ಚಿತ್ರಣ
- **ಸ್ಥಳೀಯ ಜ್ಞಾನದ ಕೊರತೆಯಿಂದ** ತಪ್ಪುಗ್ರಹಿಕೆಗಳು ಕಾಣುತ್ತೇವೆ.
- ಇವು ಲಿಖಿತ ಸಾಹಿತ್ಯದ ನ್ಯೂನ್ಯತೆಗಳಾಗಿವೆ.
- ಈ ನ್ಯೂನ್ಯತೆಗಳನ್ನು ಗಮನಿಸಿ ಇತಿಹಾಸ ರಚನೆ ಮಾಡಬೇಕು.

**ಪ್ರಮುಖ ವಿದೇಶೀ ಕೃತಿಗಳು**

| ಕ್ರ.ಸಂ | ಕೃತಿಕಾರರ ಹೆಸರು | ಗ್ರಂಥಗಳು |
|---|---|---|
| 01 | ಮೆಗಸ್ತಾನೀಸ್ | ಇಂಡಿಕಾ |
| 02 | ಫಾಹಿಯಾನ | ಫೋ–ಕೋ–ಕಿ |
| 03 | ಹ್ಯೂಯೆನ್‌ತ್ಸಾಂಗ್ | ಸಿ–ಯು–ಕಿ |
| 04 | ಟಾಲೆಮಿ | ಜಿಯೋಗ್ರಾಫಿ |
| 05 | ಬದೌನಿ | ತಾರೀಖ್–ಎ–ಫಿರೋಜ್ ಷಾಹಿ |
| 06 | ಬಾಬರ್ | ತುಜ್–ಕಿ–ಬಾಬರಿ |
| 07 | ಫರಿಶ್ತಾ | ತಾರೀಖ್–ಎ–ಫರಿಶ್ತಾ |
| 08 | ಸಿಲೋನಿನ | ದೀಪವಂಶ & ಮಹಾವಂಶ |
| 09 | ವಿಜಯನಗರ ರಾಜ್ಯಕ್ಕೆ ಭೇಟಿ ನೀಡಿದ ಫರ್ನಿಯೊ ನ್ಯೂನಿಜ್, ಬಾರ್ಬೋಸ, ನಿಕೋಲೊ ಕಾಂಟಿ ಬರವಣಿಗೆಗಳು | |



RAMALINGAPPA L Asst. Teacher

**ಮೌಖಿಕ ಸಾಹಿತ್ಯ:–**

- **ಭಾರತದ ಬಹುಮುಖ ಪರಂಪರೆಯನ್ನು** ಅರ್ಥೈಸಿಕೊಳ್ಳಲು ಬಳಕೆ
- **ಒಬ್ಬರಿಂದ ಒಬ್ಬರಿಗೆ ಬಾಯಿಮಾತಿನ ಮೂಲಕ ಹರಿದು ಬಂದಿರುವ ಕಥೆ, ಲಾವಣಿ, ಐತಿಹ್ಯ, ಜಾನಪದ ಗೀತೆ.**
- ಇವು ಅನಾದಿ ಕಾಲದ ಮಾನವರ ಅನುಭವದ ನೆನಪುಗಳು
- ಹಾಡು, ಕಥೆ, ಲಾವಣಿ ರೂಪದಲ್ಲಿ ಮೌಖಿಕವಾಗಿ ವರ್ಗಾವಣೆ
- ಜನಪದರು ಸ್ಥಳೀಯ ವೀರರ ಬಗ್ಗೆ ಲಾವಣಿ ಕಟ್ಟಿ ಹಾಡಿದ್ದಾರೆ.
- ಲಿಖಿತ ಪರಂಪರೆ ಆರಂಭವಾಗುವ ಮೊದಲೇ ಇದ್ದ ಸಂಪ್ರದಾಯ
- ಭಾರತೀಯ ಇತಿಹಾಸ ಆರಂಭ ಮೌಖಿಕ ಪರಂಪರೆ ಮೂಲಕ
- ವೇದಗಳು ಲಿಖಿತ ಸ್ವರೂಪವನ್ನು ಪಡೆದುಕೊಳ್ಳುವ ಮುನ್ನ ಹಲವು ವರ್ಷಗಳ ಕಾಲ ಮೌಖಿಕ ಪರಂಪರೆಯಾಗಿತ್ತು.
- ಉದಾ:– **ಕುಮಾರರಾಮನ ಕಥೆ, ಸಂಗೊಳ್ಳಿರಾಯಣ್ಣನ ಲಾವಣಿ**

**ಐತಿಹ್ಯಗಳು:–**

- ಐತಿಹ್ಯ ಎಂದರೆ, **ಸ್ಥಳಪುರಾಣಗಳು**
- ಭಾರತದ ಬಹುತೇಕ ಪ್ರದೇಶಗಳು ವ್ಯಕ್ತಿ, ಘಟನೆ, ಪರಪಂಪರೆಗಳ ಕುರಿತಾದ ಐತಿಹ್ಯಗಳಿವೆ
- ಚರಿತ್ರೆಯ ರಚನೆಗೆ ಇವು **ನೇರ ಪುರಾವೆಗಳನ್ನು** ನೀಡುವುದಿಲ್ಲ
- ಇವು ಸಮಾಜದ ನಂಬಿಕೆಯನ್ನು ತಿಳಿಸುತ್ತವೆ.
- **ವ್ಯಕ್ತಿಯ ವೈಭವವನ್ನು & ಸ್ಥಳದ ಮಹಿಮೆಯನ್ನು** ತಿಳಿಸುತ್ತವೆ
- ನಾವು ಸಾಮಾನ್ಯವಾಗಿ **ಧಾರ್ಮಿಕ ಸ್ಥಳಗಳ ಕುರಿತು ಸ್ಥಳ ಪುರಾಣಗಳನ್ನು** ಕಾಣಬಹುದು.
- ಪ್ರತಿ ಊರಿಗೂ ಅದರದೇ ಆದ ಸ್ಥಳಪುರಾಣಗಳು ಇರುತ್ತವೆ.
- ಉದಾ:– **ಶ್ರವಣಬೆಳಗೊಳ & ಬೆಂಗಳೂರು**

## ಪ್ರಾಕ್ತನ ಆಧಾರಗಳು

- ಸಂಶೋಧನೆ ಮತ್ತು ಉತ್ಖನನಗಳಿಂದ ದೊರೆತಿರುವ ಶಾಸನಗಳು, ನಾಣ್ಯಗಳು, ಸ್ಮಾರಗಳು, ಮಡಿಕೆ–ಕುಡಿಕೆ ಹಾಗೂ ಇನ್ನಿತರ ಪಳೆಯುಳಿಕೆಗಳನ್ನು **"ಪ್ರಾಕ್ತನ ಆಧಾರಗಳು"** ಎನ್ನುವರು.

**ಶಾಸನಗಳ ಅಧ್ಯಯನ:–**

- ಶಾಸನ ಎಂದರೆ, **ಕೊರೆಯಲ್ಪಟ್ಟಿರುವ** ಎಂದರ್ಥ
- ಇವು ಆಯಾ ಕಾಲಮಾನದ **ಜೀವಂತ ಮಾಹಿತಿಗಳು.**
- **ಕಲ್ಲು, ಬಂಡೆ, ಲೋಹ, ದಂತ, ಸುಟ್ಟಹಲಗೆ** ಮೇಲೆ ರಚನೆ
- **ಅಂದಿನ ಘಟನೆಗಳ ಜೊತೆ ನೇರ ಸಂಬಂಧ** ಹೊಂದಿವೆ
- ಆದ್ದರಿಂದ **ಶಾಸನಗಳು ಹೆಚ್ಚು ವಿಶ್ವಾಸಾರ್ಹ** ಆಧಾರ
- ನಮ್ಮ ದೇಶದಲ್ಲಿ ದೊರೆತ ಅತ್ಯಂತ ಪ್ರಾಚೀನ ಶಾಸನ – **ಮೌರ್ಯ ಚಕ್ರವರ್ತಿ ಅಶೋಕನ ಶಾಸನಗಳು.**
- ಇವರು **ಕಲ್ಲಹಾಸಿನ ಮೇಲೆ & ಕಲ್ಲಿನ ಕಂಬಗಳ** ಮೇಲೆ ಶಾಸನ ಕೆತ್ತಿಸಿದ್ದಾನೆ.
- ಇವು ಬಹುತೇಕ **ಬ್ರಾಹ್ಮಿಲಿಪಿ ಹಾಗೂ ಪ್ರಾಕೃತ ಭಾಷೆಗಳಲ್ಲಿವೆ.**
- ಕೆಲವು **ಗ್ರೀಕ್, ಅರಮಿಕ್ & ಖರೋಷ್ಠಿ ಲಿಪಿಯಲ್ಲಿವೆ**
- ಅಶೋಕನ ಶಾಸನಗಳು **ಕರ್ನಾಟಕದ ಮಸ್ಕಿ & ಬ್ರಹ್ಮಗಿರಿಗಳಲ್ಲಿ** ದೊರೆತಿವೆ.
- ಕನ್ನದ ಮೊದಲ ಶಾಸನ **ಹಲ್ಮಿಡಿ ಶಾಸನ**
- ಇದು ಕದಂಬರ ದೊರೆ **ಕಾಕುತ್ಸವರ್ಮನ** ಕಾಲಕ್ಕೆ ಸೇರಿದೆ.
- **ಪ್ರಾಕೃತ, ಕನ್ನಡ, ತಮಿಳು, ತೆಲುಗು, ಸಂಸ್ಕೃತ ಭಾಷೆಗಳಲ್ಲಿ** ರಚನೆ
- ಇವು **ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಧಾರ್ಮಿಕ** ಸಂಗತಿಗಳನ್ನು ತಿಳಿಸುತ್ತವೆ.
- ಉದಾಹರಣೆಗಳು:–
  1) **ಅಶೋಕನ ಶಿಲಾಶಾಸನಗಳು**
  2) **ಅಲಹಾಬಾದಿನ ಸ್ಥಂಭಶಾಸನ – ಸಮುದ್ರಗುಪ್ತ**
  3) **ಐಹೊಳೆ ಶಾಸನ – 2ನೇ ಪುಲಿಕೇಶಿ**
  4) **ಹಾಥಿಗುಂಪ ಶಾಸನ – ಖಾರವೇಲ**
  5) **ಉತ್ತರ ಮೇರೂರು ಶಾಸನ – ಚೋಳರ ಗ್ರಾಮಾಡಳಿತ**

**ನಾಣ್ಯಗಳ ಅಧ್ಯಯನ:–**

- ನಾಣ್ಯಗಳ ಸ್ವರೂಪ, ವಿಕಾಸ ಹಾಗೂ ಬೆಳವಣಿಗೆಯ ಬಗ್ಗೆ ತಿಳಿಸಿಕೊಡುವ ಅಧ್ಯಯನವೇ **'ನಾಣ್ಯ ಅಧ್ಯಯನ'**
- ವಿವಿಧ ಲೋಹಗಳನ್ನು ಬಳಸಿ ನಾಣ್ಯ ಟಂಕಿಸಿದ್ದಾರೆ.
- ಚರಿತ್ರೆಯ ರಚನೆಯಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತವೆ.
- ಇವು ಅಂದಿನ **ಪ್ರದೇಶದ ವ್ಯಾಪ್ತಿ, ಆಡಳಿತ ಭಾಷೆ, ರಾಜನ ಬಿರುದು** ತಿಳಿಸುತ್ತವೆ.
- ರಾಜನ **ಮತ, ರಾಜ್ಯದ ಆರ್ಥಿಕ ಸ್ಥಿತಿ, ಲೋಹ ಜ್ಞಾನ** ತಿಳಿಸುತ್ತವೆ.
- ಸಮುದ್ರಗುಪ್ತನು **ಸಂಗೀತ ಪ್ರಿಯ & ಅಶ್ವಮೇದಯಾಗ ಆಚರಣೆ** ಬಗ್ಗೆ ತಿಳಿಸುತ್ತದೆ.
- **ಗೌತಮಿಪುತ್ರ ಶಾತಕರ್ಣಿ ನಹಪಾಣನ** ಹೆಸರು ಅಳಿಸಿಹಾಕಿ ತನ್ನ ಹೆಸರಿನಲ್ಲಿ ಅಚ್ಚು ಹಾಕಲಾಗಿದೆ.
- **ಬೆಂಗಳೂರಿನಲ್ಲಿ ರೋಮ್ ನಾಣ್ಯಗಳು** ದೊರೆತಿವೆ.
- ಇವು 2000 ವರ್ಷಗಳ ಹಿಂದಿನ ರೋಮ್ ವ್ಯಾಪಾರ ಸಂಪರ್ಕ ತಿಳಿಸುತ್ತದೆ.

RAMALINGAPPA L Asst. Teacher

**ಸ್ಮಾರಕಗಳು:–**

- ಚರಿತ್ರೆಯನ್ನು ಬರೆಯಲು ಬಹುಮುಖ್ಯ ಸಾಕ್ಷಿ
- **ಸ್ತೂಪಗಳು, ಬಸದಿಗಳು, ಅರಮನೆ, ದೇವಾಲಯ, ಕೋಟೆ, ಸ್ತಂಭಗಳು** ಇತ್ಯಾದಿ.
- ಪ್ರಾಚೀನ ಭಾರತದ **ನಾಗರಿಕತೆ, ತಂತ್ರಜ್ಞಾನ, ಸಾಮಾಜಿಕ** & **ಆರ್ಥಿಕ ಸ್ಥಿತಿ**ಯನ್ನು ತಿಳಿಸುತ್ತವೆ.
- ಇವು ರಾಜರ ಸಾಧನೆಯನ್ನು ಪ್ರತಿಬಿಂಬಿಸುತ್ತವೆ.
- ಇವು ಧಾರ್ಮಿಕತೆ, ತಾಂತ್ರಿಕತೆ, ವೈಜ್ಞಾನಿಕತೆ, ಸೃಜನಶೀಲತೆಯ ಕುರುಹುಗಳು.
- ಭಾರತದ ಪ್ರಮುಖ ಸ್ಮಾರಕಗಳು:–
  - **ಅಶೋಕನ ಸ್ತಂಭಗಳು**
  - **ಮೊಹರೂಲಿಯಾ ಸ್ತಂಭ**
  - **ವಿಜಯಪುರದ ಗೋಲಗುಮ್ಮಟ**
  - **ತಾಜ್‌ಮಹಲ್ – ಷಹಜಹಾನನ ಪ್ರೇಮಕಥೆ**
  - **ಚಿತ್ತೋಡಿನ ವಿಜಯಸ್ತಂಭ – ರಾಣಕುಂಬನ ವಿಜಯಯಾತ್ರೆ**
  - **ಅಜಂತ, ಎಲ್ಲೋರ, ಎಲಿಫೆಂಟಾ ಗುಹೆಗಳು**
  - **ನಳಂದ ವಿ.ವಿ & ಬೀದರ್‌ನ ಗವಾನನ ಮದರಸ**
  - **ಶ್ರೀರಂಗಪಟ್ಟಣದ ಕೋಟೆ ರಕ್ಷಣಾ ತಂತ್ರಜ್ಞಾನ ಕೌಶಲ್ಯ**

**ಅವಶೇಷಗಳು:–**

- ಉತ್ಖನನದಲ್ಲಿ ದೊರೆತ **ಮಡಿಕೆಚೂರು, ಮಣಿ, ಮುದ್ರೆ, ಲೋಹದ ತುಣುಕು**
- ಇವು **ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಧಾರ್ಮಿಕ ಜೀವನ** ತಿಳಿಯಲು
- **ವ್ಯಾಪಾರ, ವ್ಯವಹಾರ, ಆಹಾರ ಪದ್ಧತಿ** ಬಗ್ಗೆ ತಿಳಿಸುತ್ತದೆ.
- **ಜೈವಿಕ ಸತ್ವಪ್ರಾಣಿ, ಪಕ್ಷಿ–ಮರಗಿಡಗಳ ಅವಶೇಷ**ಗಳನ್ನು ಕಾಣಬಹುದು
- **ಇಂಗಾಲ–14 (ಸಿ–14)** ವಿಧಾನದಿಂದ ಅಧ್ಯಯನ
- **ಕಲಬುರಗಿಯ ಸನ್ನತಿ, ದೊಡ್ಡಬಳ್ಳಾಪುರದ ರಾಜಘಟ್ಟ**
- ಇವು ಕಾಲಾನಂತರದಲ್ಲಿ ಅದೃಶ್ಯಗೊಂಡ ಸಂಗತಿಗಳನ್ನು ತಿಳಿಸುತ್ತವೆ.

## ಅಧ್ಯಾಯ–2
## ಭರತವರ್ಷ

- ಜಗತ್ತಿನ ರಾಷ್ಟ್ರ & ಜನಸಮುದಾಯಗಳ ಮೇಲೆ ಭೌಗೋಳಿಕ ಪರಿಸರದ ಪ್ರಭಾವವಿದೆ.
- ಮಾನವನ ಜೀವನ ಹಾಗೂ ಪರಿಸರಕ್ಕೂ ನಿಕಟ ಸಂಬಂಧವಿದೆ.
- ಇದರಿಂದ **ಮಾನವ ಚರಿತೆ ತಿಳಿಯಲು ಭೌಗೋಳಿಕ ಪರಿಸರ ಅಗತ್ಯ.**

**ಭೌಗೋಳಿಕವಾಗಿ ಭಾರತದ ಸ್ಥಾನ:–**

- ಏಷ್ಯಾ ಖಂಡದ ದಕ್ಷಿಣ ಭಾಗದಲ್ಲಿರುವ ಭಾರತವು ಒಂದು **ಉಪಖಂಡ**
- ಮೂರು ಕಡೆ ನೀರಿನಿಂದಲೂ ಮತ್ತು ಒಂದು ಕಡೆ ಭೂಭಾಗದಿಂದಲೂ ಆವೃತ್ತವಾಗಿರುವುದಿರಿಂದ ಭಾರತವನ್ನು **'ಪರ್ಯಾಯ ದ್ವೀಪ'** ಎನ್ನುವರು
- ಭಾರತದ ನೆರೆಹೊರೆಯ ದೇಶಗಳು:– **ಪಾಕಿಸ್ತಾನ, ಆಫ್ಘಾನಿಸ್ತಾನ, ಚೀನಾ, ನೇಪಾಳ, ಭೂತಾನ್, ಬಾಂಗ್ಲಾ ಮತ್ತು ಮಯನ್ಮಾರ್.**
- ಹಿಂದೆ ಈ ಎಲ್ಲಾ ಪ್ರದೇಶಗಳನ್ನು ಒಟ್ಟಾಗಿ **"ಭರತವರ್ಷ"** ಎನ್ನುತ್ತಿದ್ದರು.
- ಇದನ್ನು **ಭರತ ಖಂಡ, ಸಿಂಧೂ ದ್ವೀಪ, ಬೃಹತ್ ಭಾರತ, ಅಖಂಡ ಭಾರತ** ಎನ್ನುತ್ತಿದ್ದರು
- ಭಾರತ **15,200 ಕಿ.ಮೀ ಭೂಗಡಿ** ಹೊಂದಿದೆ
- ಭಾರತವು **6100 ಕಿ.ಮೀ ಕರಾವಳಿ ಪ್ರದೇಶ** ಹೊಂದಿದೆ
- 28 ರಾಜ್ಯಗಳು & 9 ಕೇಂದ್ರಾಡಳಿತ ಪ್ರದೇಶಗಳು ಹೊಂದಿದೆ.
- ಒಂದು **ರಾಷ್ಟ್ರ ರಾಜಧಾನಿ(ದೆಹಲಿ)** ಪ್ರದೇಶವಿದೆ.

**ಭಾರತದ ಭೌಗೋಳಿಕ ಲಕ್ಷಣಗಳು:–**

1) ಉತ್ತರದ ಪರ್ವತ ಪ್ರದೇಶಗಳು (ಹಿಮಾಲಾಯ ಪರ್ವತ ಶ್ರೇಣಿ)
2) ಉತ್ತರದ ಮಹಾ ಮೈದಾನಗಳು (ಸಿಂಧೂ–ಗಂಗಾ ಬಯಲು ಪ್ರದೇಶ)
3) ಪರ್ಯಾಯ ಪ್ರಸ್ಥಭೂಮಿ (ದಖ್ಖನ್ ಪ್ರಸ್ಥಭೂಮಿ)
4) ಕರಾವಳಿ ತೀರ ಪ್ರದೇಶಗಳು

**ಉತ್ತರದ ಪರ್ವತ ಪ್ರದೇಶಗಳು (ಹಿಮಾಲಯದ ಮಹತ್ವ):–**

- ಜಗತ್ತಿನಲ್ಲೆ ಅತಿ ಎತ್ತರದ ಶಿಖರಗಳನ್ನು ಹೊಂದಿದೆ
- ಭಾರತದ ಸುರಕ್ಷತೆ ಹಾಗೂ ಭದ್ರತೆ ಕಾಪಾಡುತ್ತದೆ.
- ಪ್ರಾಚೀನ ಭಾರತದ ಮೇಲೆ ಅತಿಕ್ರಮಣಗಳು ವಿರಳ
- ವಾಯುವ್ಯ ಭಾರತದಲ್ಲಿನ **ಬೋಲಾನ್ ಮತ್ತು ಖೈಬರ್ ಕಣಿವೆಮಾರ್ಗ**ಗಳ ಮೂಲಕ ದಾಳಿಗಳು ಸಂಭವಿಸಿವೆ.
- ಅಪಾರ ನೈಸರ್ಗಿಕ ಸಂಪತ್ತು ಹೊಂದಿದೆ.
- ಹಲವಾರು ನದಿಗಳಿಗೆ ಉಗಮಸ್ಥಾನ

RAMALINGAPPA L Asst. Teacher

- ದೇಶದ ಆರ್ಥಿಕ ಅಭಿವೃದ್ಧಿಗೆ ಸಹಾಯ

**ಸಿಂಧೂ–ಗಂಗಾ ಬಯಲು ಪ್ರದೇಶ:–**

- ಇದು **ಅತ್ಯಂತ ಫಲವತ್ತಾದ ಪ್ರದೇಶ**
- ಇಲ್ಲಿ **ಸಿಂಧೂ** & **ವೇದಕಾಲದ ನಾಗರಿಕತೆ** ಜನ್ಮ ಪಡೆದಿದೆ.
- ಇಲ್ಲಿನ ಫಲವತ್ತಾದ ಪ್ರದೇಶಗಳ ಮೇಲೆ ಹಿಡಿತ ಸಾಧಿಸಿಲು ಕದನಗಳು ನಡೆದಿವೆ.
- ಇದರ ಮೇಲೆ ಹಿಡಿತ ಸಾಧಿಸಿದವರೇ ಚಕ್ರಾಧಿಪತಿಗಳಾಗುತ್ತಿದ್ದರು
- ಹಲವಾರು ರಾಜಮನೆತಗಳು ಆಳ್ವಿಕೆ ಮಾಡಿವೆ
- ಹಲವಾರು ಧಾರ್ಮಿಕ ಕೇಂದ್ರಗಳಿವೆ
- ಕೃಷಿ & ಕೈಗಾರಿಕೆ ಪ್ರಗತಿ
- ಸಾರಿಗೆ & ಸಂಪರ್ಕ ಅಭಿವೃದ್ಧಿ

**ಪರ್ಯಾಯ ಪ್ರಸ್ಥಭೂಮಿ:–**

- ನರ್ಮದಾ ನದಿಯು ಭಾರತವನ್ನು ಎರಡು ಭಾಗ ಮಾಡಿದೆ.
  1. **ಮಾಳ್ವ ಪ್ರಸ್ಥಭೂಮಿ ಅಥವಾ ಉತ್ತರದ ಎತ್ತರದ ಪ್ರದೇಶ**
  2. **ದಖನ್ ಪ್ರಸ್ಥಭೂಮಿ**
- ಮೌರ್ಯರು & ಗುಪ್ತರು ಈ ಎರಡು ಭಾಗಗಳನ್ನು ಆಳಿದರು.
- ಉತ್ತರ ಮತ್ತು ದಕ್ಷಿಣ ಭಾರತವೆಂಬ ವಿಭಜನೆ ಸಾಂಸ್ಕೃತಿಕ ಪ್ರಭೇದಗಳಿಗೆ ಕಾರಣ.

**ಕರಾವಳಿ ಪ್ರದೇಶ:–**

- ಭಾರತದ ಕರಾವಳಿಯು **6100** ಕಿ.ಮೀ ಹಬ್ಬಿದೆ
- ಭಾರತದ ಕರಾವಳಿಯನ್ನು ಎರಡು ಭಾಗವಾಗಿ ವಿಂಗಡಣೆ
  1. **ಪಶ್ಚಿಮ ಕರಾವಳಿ**
  2. **ಪೂರ್ವ ಕರಾವಳಿ**
- ಪಶ್ಚಿಮ ಕರಾವಳಿ:– **ಕೊಂಕಣ ತೀರ** & **ಮಲಬಾರ್ ತೀರ**
- ಪೂರ್ವ ಕರಾವಳಿ:– **ಕೋರಮಂಡಲ ತೀರ** & **ಉತ್ಕಲ ತೀರ**
- ಪ್ರಾಚೀನ ಕಾಲದಿಂದ ಇಲ್ಲಿನ **ರೇವು ಪಟ್ಟಣ(ಬಂದರು)**ಗಳು ರೋಮನ್ನರನ್ನು ಆಕರ್ಷಿಸಿವೆ.
- ವಿದೇಶಿ ವ್ಯಾಪಾರವು **ಸಮುದ್ರದ ಮೂಲಕವೇ** ನಡೆಯುತ್ತಿತ್ತು.
- ಈ ರೇವು ಪಟ್ಟಣಗಳು ಅಭಿವೃದ್ಧಿಯಾಗಿ ದಕ್ಷಿಣ ಭಾರತದ ಪ್ರಬಲ **ಪಾಂಡ್ಯ, ಚೇರ** & **ಚೋಳ ರಾಜ್ಯ ಮನೆತನಗಳ** ಉದಯಕ್ಕೆ ಕಾರಣ.
- ಹಲವಾರು ರಾಜಮನೆತನಗಳು ವ್ಯಾಪಾರ ಸಂಬಂಧ ಹೊಂದಿವೆ
- ಇಲ್ಲಿನ ವೈವಿಧ್ಯತೆಯ ಭೌಗೋಳಿಕ ಪರಿಸರವು ಜನಾಂಗಗಳ ಮೇಲೆ ಪ್ರಭಾವ ಬೀರಿದೆ.
- ಇಲ್ಲಿ ಭಾವನಾತ್ಮಕವಾಗಿ ಬೆಸೆದುಹೋದ ಸಂಸ್ಕೃತಿಯು ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡಿವೆ
- **ವೈವಿಧ್ಯತೆಯಲ್ಲಿನ ಏಕತೆಯೇ** ಇದರ ಜೀವಾಳ.

## ಪ್ರಾಗೈತಿಹಾಸಿಕ ಕಾಲ

**ಚರಿತ್ರೆ ಪೂರ್ವ ಮಾನವನ ಜೀವನದ ಕಾಲಘಟ್ಟಗಳು**

1) ಹಳೆ ಶಿಲಾಯುಗ:–
   - **ಆದಿ ಹಳೆ ಶಿಲಾಯುಗ**
   - **ಮಧ್ಯ ಹಳೆ ಶಿಲಾಯುಗ**
   - **ಅಂತ್ಯ ಹಳೆ ಶಿಲಾಯುಗ**
2) ಮಧ್ಯ(ಸೂಕ್ಷ್ಮ) ಶಿಲಾಯುಗ
3) ನವ ಶಿಲಾಯುಗ

- ಮಾನವರು ಲೇಖನ ಕಲೆಯನ್ನು ಕಂಡು ಹಿಡಿಯುವುದಕ್ಕೆ ಮೊದಲ ಕಾಲವನ್ನು **'ಪ್ರಾಗೈತಿಹಾಸಿಕ ಕಾಲ'** ಎನ್ನುವರು
- ಈ ಕಾಲದಲ್ಲಿ ಭಾಷೆಯ ಬೆಳವಣಿಗೆ ಹಾಗೂ ಲಿಪಿಯ ಬಳಕೆಯ ಬಗ್ಗೆ ನಮಗೆ ಆಧಾರಗಳು ಸಿಗದೆ ಇರುವುದರಿಂದ ಇದನ್ನು **'ಚರಿತ್ರೆ ಪೂರ್ವ ಕಾಲ'** ಎನ್ನುವರು.
- ಮನುಷ್ಯನ ಯಾವುದೇ ಲಿಖಿತ ದಾಖಲೆಗಳು ಚರಿತ್ರೆಯ ಅಧ್ಯಯನಕ್ಕೆ ದೊರಕುವುದಿಲ್ಲ.
- ಆದ್ದರಿಂದ ಇವರ ಬದುಕು ತಿಳಿಯಲು ಈ ಕಾಲಘಟ್ಟವನ್ನು ಅಧ್ಯಯನ ಮಾಡುವ ತಜ್ಞರಿಗೆ **'ಪ್ರಾಕ್ತನ ಅಥವಾ ಪ್ರಾಚ್ಯವಸ್ತು ಅಧ್ಯಯನಕಾರ'** ರೆಂದು ಕರೆಯುವರು.
- ಹಳೆಶಿಲಾಯುಗದ ಕಾಲವು 2 ಮಿಲಿಯನ್ ವರ್ಷದಷ್ಟು ಹಳೆಯದು.
- ಇದು 12000 ವರ್ಷದವರೆಗೂ ವಿಸ್ತರಿಸಿದೆ.
- ಇದನ್ನು ಆದಿ, ಮಧ್ಯ & ಅಂತ್ಯ ಹಳೆಶಿಲಾಯುಗ ಎಂದು ಮೂರು ಭಾಗವಾಗಿ ವಿಂಗಡಿಸಿದೆ.

## ಹಳೆಶಿಲಾಯುಗ

**ಲಕ್ಷಣಗಳು:–**

- ಅಲೆಮಾರಿಯಾಗಿ ಬದುಕುತ್ತಿದ್ದನು
- ಬೇಟೆ ಮತ್ತು ಆಹಾರ ಸಂಗ್ರಹಣೆ ತೊಡಗಿದ್ದನು.
- ಇವರು ಬಳಸುವ ಪರಿಕರಗಳು ದೊರೆತಿವೆ.
- ಶಿಲೆ, ಕಟ್ಟಿಗೆ, ಎಲುಬಿನ ಆಯುಧಗಳು ದೊರೆತಿವೆ.
- ಶಿಲೆಯಲ್ಲಿ ತಯಾರಿಸಿದ ಪರಿಕರಗಳು ದೊರೆತಿವೆ

**ಆಯುಧಗಳ ಬಳಕೆ:–**

RAMALINGAPPA L Asst. Teacher

- ಪ್ರಾಣಿಗಳ ಮಾಂಸ, ಮೂಳೆಗಳನ್ನು ಕತ್ತರಿಸಲು
- ಮರದ ತೊಗಟೆ ಮತ್ತು ಪ್ರಾಣಿ ಚರ್ಮ ಸುಲಿಯಲು
- ಹಣ್ಣು–ಬೇರುಗಳನ್ನು ಕತ್ತರಿಸಲು
- ಮರಗಳನ್ನು ಕಡಿಯಲು
- ಎಲುಬು & ಕಟ್ಟಿಗೆಗಳನ್ನು ಕೈಹಿಡಿಯಾಗಿ ಬಳಕೆ
- ಭರ್ಜಿ & ಕೊಡಲಿಗಳನ್ನಾಗಿಸಿ ಭೇಟೆಯಾಡುತ್ತಿದ್ದರು
- ಮರಗಳನ್ನು ಕಡಿದು ಸೌದೆಯಾಗಿ ಬಳಸಲು ಶಿಲೆಯನ್ನು ಕೊಡಲಿಯಾಗಿ ಮಾಡಿಕೊಂಡರು.
- ಗುಡಿಸಲನ್ನು ಕಟ್ಟಲು ಮರಗಳನ್ನು ಬಳಸಿರಬಹುದು.
- ಮರವನ್ನು ಆಯುಧಗಳ ಹಿಡಿಯಾಗಿ ಬಳಕೆಗೆ ಬಳಕೆ.

**ನೆಲೆಗಳು:–**

1) ಬಿಂಬೆಟ್ಕ, ಹುಣಸಗಿ, ಕರ್ನೂಲ್‌ಗಳಲ್ಲಿ ನೆಲೆಗಳು ಲಭ್ಯ
2) ಈ ನೆಲೆಗಳು ನದಿ & ಕೆರೆ ದಂಡೆಯಲ್ಲಿ ಸಿಕ್ಕಿವೆ
3) ಕಲ್ಲು ದೊರೆಯುವ ಸ್ಥಳ ವಾಸಕ್ಕೆ ಆಯ್ಕೆ ಮಾಡಿಕೊಂಡರು ಕಾರಣ **ತಮ್ಮ ಅಳಿವು–ಉಳಿವಿಗೆ ಶಿಲಾಪರಿಕರಗಳು ಅನಿವಾರ್ಯ**.
4) ಇವುಗಳನ್ನು **'ಆರಂಭಿಕ ಕೈಗಾರಿಕೆ ನೆಲೆ'** ಗಳೆಂದು ಭಾವಿಸಲಾಗಿದೆ
5) ಬಂಡಗಳು ಕಂಡುಬರುವ ಪ್ರದೇಶದಲ್ಲಿ ಕಲ್ಲಿನ ಪರಿಕರಗಳು ದೊರೆತಿವೆ.
6) ಕಲ್ಲಿನ ಚಕ್ಕೆಗಳ ರಾಶಿಗಳು ಕಂಡುಬಂದಿವೆ.
7) ಇಂತಹ ನೆಲೆಗಳಿಗೆ **ವಾಸ ಹಾಗೂ ಕೈಗಾರಿಕೆಯ ನೆಲೆ**ಗಳೆಂದು ಕರೆಯಲಾಗಿದೆ.

**ಬೆಂಕಿಯ ಬಗೆಗಿನ ಸುಳಿವು:–**

- **ಕರ್ನೂಲಿನ ಗವಿ**ಗಳಲ್ಲಿ **ಬೂದಿಯ ಕುರುಹು** ದೊರೆತಿವೆ.
- ಇದು ಅವರ ಬೆಂಕಿಯ ತಿಳುವಳಿಕೆ & ಬಳಕೆ ತೋರಿಸುತ್ತದೆ.
- ಬೆಂಕಿಯನ್ನು ಆಹಾರ ಬೆಯಿಸಲು ಬೆಳಕು ಪಡೆಯಲು ಪ್ರಾಣಿಗಳನ್ನು ಬೆದರಿಸಲು ಬಳಕೆ

**ಗುಹಾಲಯಗಳಲ್ಲಿ ಕಂಡುಬರುವ ರೇಖಾಚಿತ್ರಗಳು:–**

- ಶಿಲಾಯುಗದ ಮಾನವ ನೆಲೆಸಿರುವ ಗುಹೆಗಳಲ್ಲಿ ರೇಖಾಚಿತ್ರಗಳು ಕಂಡುಬಂದಿವೆ.
- **ಗವಿಯ ಗೋಡೆ–ಬಂಡೆಗಳ** ಮೇಲೆ ಚಿತ್ರಿಸಿದ್ದಾರೆ.
- ಇವುಗಳನ್ನು **ಮಧ್ಯಪ್ರದೇಶ, ಉತ್ತರಪ್ರದೇಶ, ಕರ್ನಾಟಕ**ದಲ್ಲಿ ಕಾಣಬಹುದು
- **ಕಾಡು ಮೃಗಗಳು & ಬೇಟೆಯ ಚಿತ್ರ**ಗಳನ್ನು ಕಾಣಬಹುದು

**ಬದಲಾಗುತ್ತಿರುವ ಪರಿಸರ:–**

- 12000 ವರ್ಷಗಳ ಹಿಂದೆ ಜಗತ್ತಿನ ಪರಿಸರದಲ್ಲಿ ಬದಲಾವಣೆವಾಯಿತು.
- ಭೂಮಂಡಲದ ತಾಪಮಾನವು ಹೆಚ್ಚಿತು.
- ಇದು ಹುಲ್ಲುಗಾವಲಿನ ಬೆಳವಣಿಗೆಗೆ ಕಾರಣ
- ಪ್ರಾಣಿ–ಪಕ್ಷಿಗಳಲ್ಲಿ ಸಂತನೋತ್ಪತ್ತಿ ಹೆಚ್ಚಿತು
- **ಜಿಂಕೆ, ಕಡವೆ, ಮೇಕೆ, ಕುರಿ** & ಇತರೆ ಪ್ರಾಣಿಗಳು ಹುಲ್ಲುಗಾವಲು ಪ್ರದೇಶದಲ್ಲಿ ಬೆಳೆದವು
- ಮಾನವರು ಇವುಗಳ **ಸ್ವಭಾವ, ಆಹಾರ ರೀತಿ, ಸಂತತಿ ವೃದ್ಧಿಯ** ಬಗ್ಗೆ ತಿಳಿದರು
- ಕ್ರಮೇಣ ಮಾನವ **ಕೆಲ ಪ್ರಾಣಿಗಳನ್ನು ಹಿಡಿದು ಪೋಷಿಸಿದನು.**
- ಹೀಗೆ **ಪಶುಸಂಗೋಪನೆ & ಹೈನುಗಾರಿಕೆ ಆರಂಭವಾಯಿತು.**
- ಹೊಳೆ, ಕೆರೆಗಳಲ್ಲಿ ಮೀನು ಹಿಡಿಯುವುದನ್ನು ಕಲಿತನು.
- ದವಸಧಾನ್ಯಗಳನ್ನು ಬಿಡುವ ಗರಿಕೆಗಳು ಸ್ವಾಭಾವಿಕವಾಗಿ ಬೆಳೆದವು.
- ಇಲ್ಲಿ ದೊರೆತ **ಅಕ್ಕಿ, ಗೋಧಿ & ಬಾರ್ಲಿ**ಯಂತಹ ದವಸ–ಧಾನ್ಯಗಳನ್ನು ಆಹಾರಕ್ಕಾಗಿ ಬಳಸಿದರು.
- ಈ ಸಸ್ಯಗಳನ್ನು ಬೆಳೆಯುವ ವಿಧಾನ ಕಲಿತನು.

**ಮಧ್ಯ ಶಿಲಾಯುಗ:–**

- 12000 ವರ್ಷಗಳಿಂದ 10000 ವರ್ಷಗಳವರೆಗಿನ ಕಾಲ.
- ಇದನ್ನು **'ಸ್ಥಿತ್ಯಂತರ ಸೂಕ್ಷ್ಮ ಶಿಲಾಯುಗ'** ಎನ್ನುವರು
- ಇಲ್ಲಿನ **ಪರಿಕರಗಳು ಅತಿ ಚಿಕ್ಕದಿದ್ದವು** ಆದ್ದರಿಂದ
- ಇವುಗಳನ್ನು **'ಸೂಕ್ಷ್ಮ ಶಿಲಾಪರಿಕರಗಳು'** ಎನ್ನುವರು
- ಸೂಕ್ಷ್ಮ ಶಿಲೆಗಳಿಂದ ಮಾಡಿದ ಆಯುಧಗಳಿಗೆ ಎಲುಬು–ಕಟ್ಟಿಗೆ ಅಲಂಕಾರಿಕ ಕೈಹಿಡಿಗಳನ್ನು ಅಳವಡಿಸಿದ್ದರು.
- ಅವುಗಳನ್ನು ಕೈಗೊಡಲಿ & ಗರಗಸಗಳಾಗಿ ಬಳಸುತ್ತಿದ್ದರು
- ಜೊತೆ ಜೊತೆಯಲ್ಲಿ ಹಳೆ ಮಾದರಿ ಆಯುಧಗಳು ಮುಂದುವರೆದವು

**ನವಶಿಲಾಯುಗ:–**

- ಇದು 10000 ವರ್ಷಗಳ ನಂತರದ್ದು.
- ಕಲ್ಲಿನ ಆಯುಧಗಳು ಮೊದಲಿಗಿಂತಲು ಭಿನ್ನವಾಗಿದ್ದವು.
- ಈ ಆಯುಧಗಳು **ಹೊಳಪಿನಿಂದ** ಕೂಡಿದ್ದವು.
- ಹರಿತವಾದ ಅಲಗನ್ನು ಹೊಂದಿದ್ದವು



RAMALINGAPPA L Asst Teacher

- ಗಿಡ ಮೂಲಿಕೆಗಳನ್ನು ಅರಿಯಲು, ದವಸ–ಧಾನ್ಯಗಳನ್ನು ಪುಡಿಮಾಡಲು **ಬೀಸುಕಲ್ಲನ್ನು** ಬಳಸುತ್ತಿದ್ದರು
- ಈ ಕಾಲದ ಅಲಂಕರಿಸಲ್ಪಟ್ಟ ಮಡಿಕೆ–ಕುಡಿಕೆಗಳು ದೊರೆತಿವೆ.
- ಮಡಿಕೆಗಳನ್ನು **ಧಾನ್ಯಗಳ ಶೇಖರಣೆಗೆ** ಬಳಕೆ
- ಅಕ್ಕಿ, ಗೋಧಿ ಇತ್ಯಾದಿ **ಧಾನ್ಯಗಳನ್ನು ಬೇಯಿಸುತ್ತಿದ್ದರು.**
- ಈ ಮಾನವರು **ಬಟ್ಟೆಯನ್ನು ನೇಯುವುದನ್ನು** ಕಲಿತ್ತಿದ್ದರು.

## ಅಧ್ಯಾಯ–3
## ಭಾರತದ ಪ್ರಾಚೀನ ನಾಗರಿಕತೆಗಳು

### ವಲಸೆಯ ಬದುಕು ಸ್ಥಿರಗೊಂಡಾಗ:–

- ಋಗ್ವೇದ ಪ್ರಪಂಚದ ಅತ್ಯಂತ ಪ್ರಾಚೀನ ವಾಙ್ಮಯ.
- ವೇದಗಳಲ್ಲಿ ಭಕ್ತಿ, ಆಧ್ಯಾತ್ಮ ವಿಚಾರ & ರಾಷ್ಟ್ರದ ಇತಿಹಾಸ
- ವೇದಗಳಲ್ಲಿ ಸಿಗುವ ನದಿ, ಸಮುದ್ರ, ಬೆಟ್ಟ, ಭೂಮಿ, ಸಸ್ಯ, ಪ್ರಾಣಿ, ಜನಜೀವನದ ವಿವರಗಳಿಂದ ಇತಿಹಾಸ ರಚನೆ.

ಸರಸ್ವತಿ ನದಿ:–

- ವೇದಗಳಲ್ಲಿ ಬರುವ ನದಿಗಳಲ್ಲಿ ಮುಖ್ಯ ನದಿ ಸರಸ್ವತಿ ನದಿ
- ಆಗ ತುಂಬಿ ಹರಿಯುತ್ತದ್ದ ಬಹುದೊಡ್ಡ ನದಿ.
- ಪ್ರಾಕೃತಿಕ ಕಾರಣಗಳಿಂದ ಸಾ.ಶ.ಪೂ.2000ರ ಹೊತ್ತಿಗೆ ಬತ್ತಿತಿ.
- ಇದರ ಆಧಾರದ ಮೇಲೆ ಋಗ್ವೇದದ ಕಾಲ ಸಾ.ಶ.ಪೂ.3000 ಕ್ಕೂ ಹಿಂದಕ್ಕೆ ಹೊಯಿತು.
- ಅಂದರೆ ಇಂದಿಗೆ 5000 ವರ್ಷಗಳಿಗೂ ಮುನ್ನ.
- ಸರಸ್ವತಿ ನದಿ ಹರಿವಿನಲ್ಲಿ ಇಂದು ನೂರಾರು ಪ್ರಾಚೀನ ತಾಣಗಳು, ನಗರಗಳು ಉತ್ಖನನದಿಂದ ದೊರೆತಿವೆ.
- ದೊರೆತ ಮೊದಲ ನಗರಗಳು – ಹರಪ್ಪ & ಮೊಹೆಂಜೋದಾರೋ
- ಹರಪ್ಪಾದಲ್ಲಿ ನಾಗರಿಕತೆಯ ಮೊದಲ ಕುರುಹುಗಳು ದೊರೆತಿದ್ದರಿಂದ 'ಹರಪ್ಪಾ ನಗಾರಿಕತೆ' ಎಂದು ಕರೆದರು.
- ಆದರೆ ಇದನ್ನು 'ಸಿಂಧೂ–ಸರಸ್ವತಿ ನಾಗರಿಕತೆ' ಎಂದು ಕರೆಯುವುದ ಸೂಕ್ತ.
- ಈ ನಾಗರಿಕತೆಯ ತಾಯ್ನೆಲ ಸಪ್ತಸಿಂಧೂ ಪ್ರದೇಶ.
- ಸಪ್ತಸಿಂಧೂ ಪ್ರದೇಶದ ನದಿಗಳು:–

| ಕ್ರ.ಸಂ | ಮೊದಲ ಹೆಸರು | ಈಗಿನ ಹೆಸರು |
|---|---|---|
| 01 | ಸಿಂಧೂ | |
| 02 | ವಿತಸ್ತಾ | ಝೀಲಂ |
| 03 | ಅಸಿಕ್ನೀ | ಚೇನಾಬ್ |
| 04 | ಪರುಷ್ಣಿ | ರಾವಿ |
| 05 | ವಿಪಾಶಾ | ಬಿಯಾಸ್ |
| 06 | ಶುತುದ್ರಿ | ಸಟ್ಲೇಜ್ |
| 07 | ಸರಸ್ವತಿ | |

- ಅಲ್ಲದೆ ಗಂಗಾ & ಯಮುನಾ ನದಿಗಳ ಬಯಲು (ಆರ್ಯಾವರ್ತ), ಗುಜರಾತ್, ಬಲೂಚಿಸ್ತಾನ ಪ್ರಾಂತ್ಯಗಳು ಅಧ್ಯಯನಕ್ಕೆ ಮುಖ್ಯ.
- ಸಿಂಧೂ–ಸರಸ್ವತಿ ನಾಗರಿಕತೆಯ ಕಾಲವನ್ನು "ಉತ್ತರ ವೇದಯುಗ" ಎಂದು ವಿದ್ವಾಂಸರು ಹೆಸರಿಸಿದ್ದಾರೆ.
- ಆ ಹೊತ್ತಿಗೆ ನಾಲ್ಕು ವೇದಗಳು ರೂಪತಾಳಿದ್ದವು.
- ಅಥರ್ವವೇದದಲ್ಲಿ ಸಿಗುವ ಸಾಂಸ್ಕೃತಿಕ ಅಂಶಗಳಿಗೂ & ಹರಪ್ಪ ನಗರಗಳ ವಸ್ತುಗಳಿಗೂ ಹೊಂದಿಕೆಯಿದೆ.
- ಪ್ರಾಚೀನ ನಗರಗಳು ಪತ್ತೆಯಾದ ಪರಿ:–
- 1921ರಲ್ಲಿ ಪಂಜಾಬಿನ ಸಿಂಧೂಕಣಿವೆಯಲ್ಲಿ ರೈಲಿನ ಹಳಿಗಳು ಜೋಡಿಸುವಾಗ ತಂತ್ರಜ್ಞರು ಹರಪ್ಪದ ಪ್ರಾಚೀನ ನೆಲೆ ಕಂಡರು.
- ಇದು ಅತ್ಯುತ್ತಮ ಇಟ್ಟಿಗೆಗಳಿಂದ ಕೂಡಿದ ದಿಣ್ಣೆಯಂತೆ ಕಂಡಿತು
- ಇಲ್ಲಿನ ಇಟ್ಟಿಗಳನ್ನು ರೈಲುಹಳಿಯ ನಿರ್ಮಾಣದಲ್ಲಿ ಬಳಸಿದರು.
- ಸಂಶೋಧನೆ ಕೈಗೊಂಡಾಗ ಅದು ಪ್ರಾಚೀನ ನಗರ ಎಂದರು.
- ಇದನ್ನು ಹರಪ್ಪ ನಾಗರಿಕತೆ ಎಂದು ಕರೆದರು
- 1917ರಲ್ಲಿ ಕಾಲಿಬಂಗನ್ ಎಂಬ ಪ್ರಾಚೀನ ನಗರ ಪತ್ತೆಯಾಗಿತ್ತು.
- ಇದು 4600 ವರ್ಷಗಳಷ್ಟು ಪುರಾತನ ಕಾಲದ್ದೆಂದು ಭಾವಿಸಲಾಗಿದೆ.

### ನಗರ ನಿರ್ಮಾಣ:–

- ಹರಪ್ಪಾ ನಗರ:–
- ಹರಪ್ಪಾದಲ್ಲಿ ಎರಡು ಭಾಗವನ್ನು ಕಾಣಬಹುದು
- ಪಶ್ಚಿಮದ ಭಾಗವು ಕಿರಿದಾಗಿದ್ದು ಎತ್ತರದಲ್ಲಿದೆ.
- ಇದನ್ನು ಪ್ರಾಕ್ತನಶಾಸ್ತ್ರಜ್ಞರು ಕೋಟೆ ಎಂದಿದ್ದಾರೆ.
- ಪೂರ್ವದ ಭಾಗವು ವಿಶಾಲವಾಗಿದ್ದು ತಗ್ಗು ಪ್ರದೇಶದಲ್ಲಿದೆ.
- ಇದನ್ನು ಕೆಳಗಿನ ಗ್ರಾಮವೆಂದಿದ್ದಾರೆ.
- ಗೋಡೆಗಳನ್ನು ಸುಟ್ಟ ಇಟ್ಟಿಗೆಗಳಿಂದ ನಿರ್ಮಾಣ ಮಾಡಲಾಗಿದೆ.
- ಗೋಡೆಯು ಹೆಚ್ಚು ಭದ್ರವಾಗಿದೆ. ಕಾರಣ ಇಟ್ಟಿಗೆಗಳನ್ನು ಪರಸ್ಪರ ಬೆಸೆದುಕೊಳ್ಳುವಂತೆ ಅಳವಡಿಸಿದ್ದಾರೆ.
- ಸುಟ್ಟ ಇಟ್ಟಿಗೆಗಳ ಬಳಕೆ ಆ ಸಂಸ್ಕೃತಿಯ ಉನ್ನತಿಯನ್ನು ಸೂಚಿಸುತ್ತದೆ.
- ಮೆಹೆಂಜೋದಾರೋ ನಗರ:–



RAMALINGAPPA L Asst. Teacher

- ಬೃಹತ್ ಸ್ನಾನದ ಗೃಹ ಮೊಹೆಂಜೊದಾರ್‌ನಲ್ಲಿ ಕಂಡುಬಂದಿದೆ.

**ಬೃಹತ್ ಸ್ನಾನದ ಗೃಹ:–**

- ಇದು ಮೊಹೆಂಜೊದಾರೊನಲ್ಲಿ ಸಿಕ್ಕಿದೆ.
- ವಿದ್ವಾಂಸರು ಇದನ್ನು ಸ್ನಾನದ ಕೊಳ ಎಂದಿದ್ದಾರೆ.
- ಇದನ್ನು ಸುಟ್ಟ ಇಟ್ಟಿಗೆಗಳಿಂದ ಕಟ್ಟಲಾಗಿದೆ.
- ನೀರು ಸೋರಿಕೆ ಆಗದಂತೆ ನಿರ್ಮಾಣ ಮಾಡಲಾಗಿದೆ.
- ಎರಡೂ ಕಡೆಗೂ ಇಳಿಯಲು ಮೆಟ್ಟಿಲುಗಳಿದ್ದವು
- ಸುತ್ತಲು ಕೊಠಡಿಗಳಿದ್ದವು
- ನೀರಿನ ಪೂರೈಕೆ ಬಾವಿಯಿಂದ ಆಗುತಿತ್ತು.
- ಬಳಕೆಯ ನೀರು ಹೊರಗೆ ಬಿಡಲಾಗುತ್ತಿತ್ತು.
- ಇಲ್ಲಿ ಮುಖ್ಯ ವ್ಯಕ್ತಿಗಳು ವಿಶೇಷ ಸಂದರ್ಭದಲ್ಲಿ ಸ್ನಾನ ಮಾಡುತ್ತಿದ್ದರು.

**ವಿಶೇಷತೆಗಳು**

- ಕಾಲಿಬಂಗನ್ & ಲೋಥಾಲ್‌ಗಳಲ್ಲಿ **ಬೆಂಕಿಯ ಒಲೆಗಳು** ಕಂಡುಬಂದಿವೆ.
- ಮೊಹೆಂಜೋದಾರೊ, ಹರಪ್ಪ & ಲೋಥಾಲ್‌ಗಳಲ್ಲಿ **ಸಂಗ್ರಹಣೆಯ ಕೊಠಡಿಗಳಿವೆ**

**ನಗರ ಯೋಜನೆ:–**

- ಕ್ರಮಬದ್ಧ ಮನೆಗಳು ಮತ್ತು ರಸ್ತೆಗಳು ನಿರ್ಮಾಣ
- ಉತ್ತಮ ಒಳಚರಂಡಿ ವ್ಯವಸ್ಥೆ ಇತ್ತು.
- ಚರಂಡಿಯನ್ನು ಚಪ್ಪಡಿಗಳಿಂದ ಮುಚ್ಚಲಾಗಿತ್ತು.
- ಒಂದು ಅಥವಾ ಎರಡು ಅಂತಸ್ತಿನ ಮನೆಗಳಿದ್ದವು
- ಮನಗಳು ಇಟ್ಟಿಗೆಗಳಿಂದ ನಿರ್ಮಿಸಿದ್ದರು
- ಮನೆಯ ಮುಖ್ಯ ದ್ವಾರ ರಸ್ತೆಯ ಪಕ್ಕ ಇದ್ದವು
- ಯಾವ ಕೀಟಕಿಗಳು ರಸ್ತೆಗೆ ಮುಖ ಮಾಡಿರಲಿಲ್ಲ
- ಸ್ನಾನದ ಕೊಠಡಿಗಳನ್ನು ಹೊಂದಿದ್ದವು
- ಕಲುಶಿತ ನೀರು ಹರಿಯಲು ಒಳಚರಂಡಿ ವ್ಯವಸ್ಥೆಯಿತ್ತು.
- ಇದನ್ನು ಗಮನಿಸಲು ಪ್ರತ್ಯೇಕ ಅಧಿಕಾರಿಗಳ ನೇಮಕ
- ಇಂತಹ ನಗರ ಯೋಜನೆ ಈಜಿಪ್ಟ್, ಮೆಸಪೊಟೇಮಿಯಾ ನಾಗರಿಕತೆಗಳಲ್ಲೂ ಕಂಡುಬರುವುದಿಲ್ಲ
- ವಿಸ್ತೀರ್ಣದ ದೃಷ್ಟಿಯಿಂದಲೂ ಮುಂದುವರೆದಿತ್ತು.

**ಗ್ರಾಮ ಯೋಜನೆ:–**

- ಇಲ್ಲಿ ಕ್ರಮಬದ್ಧ ಮನೆ, ರಸ್ತೆ & ಚರಂಡಿಗಳನ್ನು ಕಾಣಬಹುದು.
- ಒಂದು/ಎರಡು ಅಂತಸ್ತಿನ ಮನೆಗಳನ್ನು ಹೊಂದಿದ್ದರು
- ಮನೆಗಳು ಇಟ್ಟಿಗೆಗಳಿಂದ ಕಟ್ಟಲ್ಪಟ್ಟು ಗೋಡೆಗಳು ಭದ್ರವಾಗಿವೆ
- ಒಳಾಂಗಣದ ಸುತ್ತ ಕೊಠಡಿಗಳಿದ್ದವು.
- ಮನೆಯ ಬಾಗಿಲುಗಳು ರಸ್ತೆಯ ಮಗ್ಗುಲಿನಲ್ಲಿದ್ದವು.
- ಕಿಟಕಿಯೂ ರಸ್ತೆಗೆ ಮುಖ ಮಾಡಿರಲಿಲ್ಲ.
- ಮನೆಗಳು ಸ್ನಾನದ ಕೊಠಡಿಗಳು ಹೊಂದಿದ್ದವು.
- ಬಾವಿಗಳಿಂದ ನೀರು ಪೂರೈಕೆಯಾಗುತ್ತಿತ್ತು.
- ಪ್ರತಿ ಮನೆಯಲ್ಲಿ ಸ್ನಾನದ ಕೊಠಡಿಗಳಿದ್ದದ್ದು ಆಗಿನ ಕಾಲಕ್ಕೆ ಬಹು ದೊಡ್ಡ ವಿಷಯವಾಗಿತ್ತು.
- ಸಿಂಧೂ–ಸರಸ್ವತಿ ನಾಗರಿಕತೆ ಜನರು ಸುಭಿಕ್ಷ ಜೀವನ ನಡೆಸುತ್ತಿದ್ದರು.

**ಸಾಂಸ್ಕೃತಿಕ ವಿವರಗಳು:–**

- ಲೋಹ & ಬೆಲೆಬಾಳುವ ಹರಳುಗಳನ್ನು ಕಾಣಬಹುದು
- ಮಣಿಗಳು & ಮುದ್ರೆಗಳು ಅತಿ ಹೆಚ್ಚಾಗಿ ಕಂಡುಬಂದಿವೆ.
- ಹರಪ್ಪ ಮಣಿಗಳಿಗೆ ಮೆಸೊಪೊಟೇಮಿಯಾದಲ್ಲಿ ಹೆಚ್ಚಿನ ಬೇಡಿಕೆ.
- ಮಣಿಗಳಲ್ಲಿ ಉದ್ದ ರಂಧ್ರವನ್ನು ಕೊರೆಯುವ ವಿಧಾನ ತಿಳಿದಿದ್ದರು
- ಚಿತ್ತಾಕಾರದ ಮಡಿಕೆಗಳು ದೊರೆತಿವೆ.
- ಲೋಹ & ಶಂಖಗಳಿಂದ ತಯಾರಾದ ಬಳೆಗಳು ದೊರೆತಿವೆ.
- ಬಳೆಗಳನ್ನು ತೊಟ್ಟ ಸ್ತ್ರೀಯರ ಮೂರ್ತಿಗಳು ದೊರೆತಿವೆ.
- ಶಂಖದ ಬಳೆಗಳನ್ನು ತೊಡುವುದು ಪವಿತ್ರ ಎಂದು ಇಂದಿಗೂ ಎಲ್ಲಾ ವರ್ಗದ ಮಹಿಳೆಯರು ತೊಡುತ್ತಾರೆ.
- ಬಳೆಗಳ ನಿರ್ಮಾಣಕ್ಕೆ ಸಣ್ಣ ಸಣ್ಣ ನಗರಗಳಿದ್ದವು.
- ನಗರವ್ಯವಸ್ಥೆ ಆಡಳತ ವರ್ಗವನ್ನು ಸೂಚಿಸುತ್ತದೆ.
- ಇವರು ಲೋಹ, ಹರಳು & ಆಭರಣಗಳನ್ನು ಬಳಸುತ್ತಿದ್ದರು.
- ಮಣಿಗಳನ್ನು ಸಾಮಾನ್ಯ ಜನರು ಬಳಸುತ್ತಿದ್ದರು.
- ಹೆಣ್ಣು ಮಕ್ಕಳು ಸಿಂದೂರವನ್ನು ಹಚ್ಚಿಕೊಳ್ಳುತ್ತಿದ್ದರು.
- ಮುದ್ರೆಗಳ ಮೇಲೆ ಲಿಪಿಯ ಬರಹ ಕಾಣಬಹುದು.
- ಮುದ್ರೆಗಳ ಮೇಲೆ ಮೂಡಿಸಿದ ಚಿತ್ರಗಳ ಪೈಕಿ ವೃಷಭ ಪ್ರಮುಖ. ಮತ್ತೊಂದು ಚಿತ್ರ ಅಶ್ವತ್ಥ ಎಲೆಗಳು
- ಯೋಗದ ಆಸನ, ನಮಸ್ಕಾರ ಮುದ್ರೆ ಮೂರ್ತಿಗಳು ಇವೆ.

RAMALINGAPPA L Asst. Teacher

- ಹತ್ತಿ & ರೇಷ್ಮೆ ಬಳಕೆ ತಿಳಿದಿತ್ತು.
- ಕಲ್ಲು & ದಂತಗಳ ಮೇಲೆ ಕೆತ್ತನ ಮಾಡುವ ಕಲಾವಿದರಿದ್ದರು
- ಕಂಬಳಿಗಳು & ಮರದ ಪೀಠೋಪಕರಣಗಳ ಬಳಕೆ
- ತಾಮ್ರವು ಬಲೂಚಿಸ್ತಾನ, ರಾಜಸ್ಥಾನಗಳಲ್ಲಿ ದೊರೆಯುತ್ತಿತ್ತು.
- ಉಳಿ, ಕೊಡಲಿ & ಕನ್ನಡಿಗಳ ತಯಾರಿಕೆ ಕಂಚು ಬಳಕೆ
- ಇಲ್ಲಿನ ತೂಕ & ಅಳತೆಗಳು ಕೌಟಿಲ್ಯನ ಅರ್ಥಶಾಸ್ತ್ರದ ವಿವರಿಗಳಿಗೆ ಹೊಂದಿಕೆ.
- ಸಾಹಿತ್ಯ, ಸಂಗೀತ, ನೃತ್ಯ, ಚಿತ್ರ, ಶಿಲ್ಪಕಲೆ ತಿಳಿದಿತ್ತು.
- ಆಧಾರ:– ಉತ್ಖನನದಿಂದ ಸಿಕ್ಕ ನೃತ್ಯಭಂಗಿ ಸ್ತ್ರೀವಿಗ್ರಹ, ಡೋಲು, ತಂತಿವಾದ್ಯ, ಮುಖವಾಡಗಳು ಖಚಿತಪಡಿಸಿವೆ.
- ಮಕ್ಕಳ ಆಟಿಕೆಗಳ ಪೈಕಿ ಬಂಡಿಗಳು, ಬುಗುರಿಗಳು, ಶಿಳ್ಳೆಗಳು

**ವಿಶೇಷತೆಗಳು**

- ✓ ಶಿವನ ವಾಹನ, ಧರ್ಮದ ಪ್ರತೀಕ – ವೃಷಭ
- ✓ ಯಜ್ಞವೃಕ್ಷ, ಜಗತ್‌ವೃಕ್ಷ ಎಂದು ಪ್ರಸಿದ್ಧಿ – ಅಶ್ವತ್ಥದ ಎಲೆ
- ✓ ವೈದಿಕ ದರ್ಶನಗಳಲ್ಲಿ ಒಂದು – ಯೋಗ
- ✓ ಪ್ರಾಚೀನ ನಾಗರಿಕತೆಯ ಮುಖ್ಯ ಲೋಹ – ಕಂಚು
- ✓ ಅಗ್ನಿಪೂಜೆಗೆ ಮೀಸಲಾದ ದೇವಾಲಯ – ಹರಿಯಾಣದ ಬನವಾಲಿಯಲ್ಲಿ
- ✓ ಲೋಥಾಲ್ & ಕಾಲಿಬಂಗನ್‌ಗಳಲ್ಲಿ ಪೂಜಾವೇದಿಕೆಗಳಿವೆ.
- ✓ ದೋಲಾವಿರಾ ನಗರದ ಉದ್ದಳತೆಗಳು ವೈದಿಕ ಯಾಗಗಳ 'ಮಹಾವೇದಿಗಳ' ಅನುಪಾತಕ್ಕೆ ಅನುಗುಣವಾಗಿವೆ.
- ✓ ಈ ಅನುಪಾತವು ಶತಪಥಬ್ರಾಹ್ಮಣ, ಶುಲ್ಬಸೂತ್ರ & ಬೃಹತ್ಸಂಹಿತೆ(ವಿಶ್ವಕೋಶ)ಗಳಲ್ಲಿ ಕಂಡುಬರುತ್ತವೆ.
- ✓ ಮೊಹೆಂಜೋದಾರೋವಿನಲ್ಲಿ ದೊರೆತ ನೃತ್ಯಭಂಗಿ ಸ್ತ್ರೀವಿಗ್ರಹವು ತನ್ನ ಭಂಗಿಯಿಂದ, ಬಳೆಗಳಿಂದ ಭಾರತೀಯ ಮಹಿಳೆಯರ ಮಾತೃಕೆಯೇ ಎಂದು ವಿದ್ವಾಂಸರ ಅಭಿಮತ.
- ✓ ಗುಜರಾತಿನ ಲೋಥಾಲ್‌ನಲ್ಲಿ ಹಡಗುಕಟ್ಟೆ (ಡಾಕ್‌ಯಾರ್ಡ್) ಪತ್ತೆ.
- ✓ ಲೋಥಾಲ್ ಸಮುದ್ರವಾಣಿಜ್ಯದ ಪ್ರಮುಖ ಕೇಂದ್ರ.
- ✓ ದೋಲಾವೀರಾದಲ್ಲಿ ಮಳೆಯ ನೀರನ್ನು ಸಂಗ್ರಹಿಸುವ ವ್ಯವಸ್ಥೆಯಿತ್ತು.

**ಕೃಷಿ ಮತ್ತು ವ್ಯಾಪಾರ:–**

- ಇವರು ಕೃಷಿ & ವ್ಯಾಪಾರವನ್ನು ಅವಲಂಬಿಸಿದ್ದರು.
- ಮುಖ್ಯ ಬೆಳೆಗಳು:– **ಗೋಧಿ, ಬಾರ್ಲಿ & ಕಾಳುಗಳು**
- ಅಂದಿನ ಎತ್ತಿನ ಬಂಡಿ ಇಂದೂ ನಮ್ಮಲ್ಲಿ ಕಾಣಬಹುದು.
- ಬೇಟೆ ಮತ್ತು ಮೀನುಗಾರಿಕೆಗಳು ವ್ಯಾಪಕವಾಗಿದ್ದವು.
- ಹತ್ತಿ ಬೆಳೆದು ಉಡುಪು ತಯಾರಿಸುತ್ತಿದ್ದರು.
- ನಗರಗಳು ನದಿ ದಂಡೆಯ ಮೇಲಿದ್ದರಿಂದ ನೀರಾವರಿ ತಿಳಿದಿದ್ದರು.
- **ಡುಬ್ಬದ ಗೂಳಿ, ದನ, ಎಮ್ಮೆ, ಕುರಿ, ಮೇಕೆ & ಕೋಳಿಗಳ** ಸಂಗೋಪನೆಯಲ್ಲಿ ತೊಡಗಿದ್ದರು.
- **ಎತ್ತುಗಳನ್ನು** ಹೊರೆ ಒಯ್ಯಲು ಬಳಕೆ
- ದೇಶಿಯ & ವಿದೇಶಿಯ ವ್ಯಾಪಾರ ರೂಢಿಯಲ್ಲಿತ್ತು.
- ಉದಾ:– **ಬಲೂಚಿಸ್ತಾನ, ಸೌರಾಷ್ಟ್ರ & ದಖನ್ ಪ್ರದೇಶ (ದೇಶಿಯ)**
- ಉದಾ:– **ಮೆಸಪೊಟೇಮಿಯಾ** (ವಿದೇಶಿ)

**ನಗರಗಳ ಅವನತಿ:–**

- ಪ್ರಾಕೃತಿಕ ವಿಕೋಪಗಳು
- ನಗರದ ಪಶ್ಚಿಮ ದ್ವಾರಗಳು ಮುಚ್ಚಲಾಯಿತು.
- ವಿಶಾಲ ಕೋಣೆಗಳು ಕಿರಿದಾದವು
- ಬತ್ತಿಹೋದ ನದಿಗಳು
- ನದಿಗಳ ದಿಕ್ಕು ಬದಲಾವಣೆ
- ಕಾಡುಗಳ ನಾಶ
- ಪ್ರವಾಹಗಳಿಂದ ಜಲಾವೃತಗೊಂಡಿದ್ದು
- ವಲಸೆ
- ಆರ್ಯರ ಆಕ್ರಮಣ

- **ಕಾಶ್ಮೀರದ ಬರ್ಜುಹೋಂನಲ್ಲಿ ನೆಲಮನೆ ಗುರುತಿಸಿದ್ದಾರೆ.**
- **ಭೂಮಿಯ ಒಳಗೆ ರಂಧ್ರದಂತೆ ಗುಂಡಿ ತೋಡಿ ವಾಸ.**
- **ಕಾರಣ:– ಚಳಿ & ಕ್ರೂರಮೃಗಗಳಿಂದ ರಕ್ಷಿಸಿಕೊಳ್ಳಲು**
- **ಇಲ್ಲಿ ಮಣ್ಣಿನ ಮಡಿಕೆಗಳು ದೊರೆತಿವೆ.**
- **ಇರಾನ್ ಸಮೀಪ ಬೊಲನ್‌ಪಾಸಿನ ಫಲವತ್ತಾದ ಮೈದಾನದಲ್ಲಿ ಮೆಹರ್‌ಗರ್ ನೆಲೆಯಿದೆ.**
- **ಮೆಹರ್‌ಗರ್ ಜನರು ಬಾರ್ಲಿ & ಗೋಧಿ ಬೆಳೆಯುತ್ತಿದ್ದರು**
- **ಮೆಹರ್‌ಗರ್ ಜನರು ಕುರಿ & ಮೇಕೆಗಳನ್ನು ಸಾಕುತ್ತಿದ್ದರು.**
- **ನಮಗೆ ದೊರೆತ ಮೊದಲ ಹಳ್ಳಿ ಮೆಹರ್‌ಗರ್.**
- **ಇಲ್ಲಿ ಪ್ರಾಣಿಗಳ ಪಳಿಯುಳಿಕೆ & ಸಮಾಧಿಗಳು ದೊರೆತಿವೆ**


RAMALINGAPPA L Asst. Teacher

**ವೇದ ಸಮಾಜ**

- ಬ್ರಾಹ್ಮಣ, ಕ್ಷತ್ರೀಯ, ವೈಶ್ಯ & ಶೂದ್ರ ಎಂಬ ವರ್ಣಗಳಿದ್ದವು.
- ಬ್ರಾಹ್ಮಣ:– ವಿದ್ಯೆ ಕಲಿಕೆ & ಕಲಿಸುವಿಕೆಯಲ್ಲಿ ಪಾತ್ರ
- ಕ್ಷತ್ರೀಯ:– ಪಾಲನೆ & ರಕ್ಷನೆಗಳ ಬಾಧ್ಯತೆ
- ವೈಶ್ಯರು:– ವ್ಯಾಪಾರ & ವಾಣಿಜ್ಯಗಳಲ್ಲಿ ತೊಡಗಿದ್ದರು.
- ಶೂದ್ರರು:– ಎಲ್ಲಾ ಹಂತಗಳಲ್ಲಿ ದುಡಿಯುವ ವರ್ಗ
- ವಿಶಃ:– ಸಾಮಾನ್ಯ ಜನರನ್ನು ಈಗೆ ಕರೆಯುತ್ತಿದ್ದರು
- ಆಡಳಿತದಲ್ಲಿ ಸಲಹೆ ನೀಡಲು :– ಸಭಾ & ಸಮಿತಿಗಳಿದ್ದವು.
- ರಾಜ್ಯಭಾರದಲ್ಲಿ ನೆರವಾಗುತ್ತಿದ್ದವರು:– ಪುರೋಹಿತ, ಸೇನಾನಿ, ಗ್ರಾಮಣಿ
- ಪುರೋಹಿತರು:– ರಾಜನ ಗುರು & ಮಾರ್ಗದರ್ಶಿಗಳು
- ಸೇನಾನಿಗಳು:– ಆಡಳಿತ & ಸಂಗ್ರಾಮಗಳಲ್ಲಿ ತೊಡಗಿದ್ದರು.
- ಗ್ರಾಮಣಿಗಳು:– ಹಳ್ಳಿಗಳಲ್ಲಿನ ಜನಸಾಮಾನ್ಯರ ಹಿತ ಕಾಪಾಡುವುದು.
- ಇಲ್ಲಿದ್ದ ಬುಡಕಟ್ಟುಗಳು:– ಭರತ, ಪುರು, ಆನು, ದ್ರುಹ್ಯು, ತುರ್ವಷ & ಯದು
- ಗೋವುಗಳ ರಕ್ಷಣೆಗೆ ಹೋರಾಟ
- ಸೆಣಸಾಟಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ಪ್ರಾಣಿ:– ಕುದುರೆ
- ಸುಸಂಸ್ಕೃತರಾದ & ಸಂಭಾವಿತರಾದ ಜನರನ್ನು 'ಆರ್ಯ' ಎನ್ನುತ್ತಿದ್ದರು.
- ಅನೈತಿಕ ಸಂಪತ್ತು ಗಳಿಸಿ ಜೋಪಾನ ಮಾಡುತ್ತಿದ್ದ ವರ್ಗ:– ಪಣಿಗಳು

## ವೇದಗಳ ಕಾಲ

- ವೇದಗಳನ್ನು ಆರ್ಯರು ರಚಿಸಿದರು
- ಇವರು ಯುರೋಪಿಯನ್ ಬುಡಕಟ್ಟಿಗೆ ಸೇರಿದವರು
- ಮಧ್ಯ ಏಷ್ಯಾದಿಂದ ಪಂಜಾಬಿಗೆ ಬಂದರು
- ಇವರ ಜೀವನವನ್ನು ತಿಳಿಯಲು ವೇದಗಳ ಮೊರೆ
- ಕಾಲು ಸಾ.ಶ.ಪೂ 1500 ರಿಂದ 700
- ಆದರೆ ವೇದಗಳು ಬರವಣಿಗೆ ರೂಪದಲ್ಲಿರಲ್ಲಿಲ್ಲ

**ಎರಡು ವಿಧಗಳು:–**

1) ಋಗ್ವೇದ ಕಾಲ – ಸಾ.ಶ.ಪೂ 1500 ರಿಂದ 1000
2) ನಂತರ ವೇದಗಳ ಕಾಲ – ಸಾ.ಶ.ಪೂ 1000 ರಿಂದ 700

**ನಾಲ್ಕು ವೇದಗಳು:–**

1) ಋಗ್ವೇದ – ಪ್ರಕೃತ ಆರಾಧನೆ
2) ಸಾಮವೇದ – ಸಂಗೀತ ವೇದ
3) ಯಜುರ್‌ವೇದ – ಯಾಗ ಯಜ್ಞಾದಿಗಳ ವಿವರಣೆ
4) ಅಥರ್ವಣ ವೇದ – ಮಾಟ ಮಂತ್ರ ವಿದ್ಯೆ

- ಇವುಗಳನ್ನು ಸಂಹಿತೆ ಎಂದು ಕರೆಯುತ್ತಾರೆ.
- ಬ್ರಾಹ್ಮಣಕಗಳು–ಅರಣ್ಯಕಗಳು–ಉಪನಿಷತ್‌ಗಳು

**ಋಗ್ವೇದ ಕಾಲ:–**

- ಋಗ್ವೇದ ಮೊದಲಿನದು
- ಇದರಲ್ಲಿ ಭೌಗೋಳಿ ಸಾಮಾಜಿಕ ಪರಿಸರವನ್ನು ಕಾಣಬಹುದು
- ಇದರಲ್ಲಿ 1028 ಸೋತ್ರಗಳಿವೆ
- ಇದರಲ್ಲಿ 10 ಮಂಡಲಗಳನ್ನು ಕಾಣಬಹುದು
- ಇದು ಒಂದೇ ಕಾಲಘಟ್ಟಗಳಲ್ಲಿ ರಚನೆಯಾಗಿಲ್ಲ
- ಭಾಷೆ–ಇಂಡೋ–ಯುರೋಪಿಯನ್ ಭಾಷಾ ವರ್ಗಕ್ಕೆ ಸೇರಿದೆ.
- ಭೌಗೋಳಿಕ ಎಲ್ಲೆ ಹಿಂದೂಕುಶ್‌ನಿಂದ –ಯಮುನ–ಗಂಗಾ ದೋಅಬ್‌ವರೆಗೆ ಹರಡಿತ್ತು.

**ಸಾಮಾಜಿಕ ವ್ಯವಸ್ಥೆ:–**

**ಸಾಮಾಜಿಕ ವರ್ಗಗಳು:–**

- ಶ್ರೀಮಂತರು
- ಪುರೋಹಿತರು
- ಸಾಮಾನ್ಯ ಜನರು

- ಜಾತಿ ಪ್ರಷ್ನೆ ಮೂಡಿರಲಿಲ್ಲ
- ಋಗ್ವೇದದ 10ನೇ ಮಂಡಲದಲ್ಲಿ ಸಾಮಾಜಿಕ ವ್ಯವಸ್ಥೆ ರೂಪಗೊಂಡಿದೆ.
  1. ಬ್ರಾಹ್ಮಣ – ಆದಿಪುರುಷನ ಬಾಯಿಯಿಂದ ಜನನ
  2. ಕ್ಷತ್ರಿಯ – ಬಾಹುಗಳಿಂದ ಜನನ
  3. ವೈಶ್ಯರು – ತೊಡೆಗಳಿಂದ ಜನನ
  4. ಶೂದ್ರರು – ಪಾದಗಳಿಂದ ಜನನ
- ಶೂದ್ರ ಎಂಬ ಪದ ಋಗ್ವೇದದ ಕೊನೆಯಲ್ಲಿ ಸೇರಿದೆ
- ಶೂದ್ರ ವರ್ಣದಲ್ಲಿ – ದಸ್ಯು, ಪಾಣಿಗಳು, ದಾಸರಿದ್ದರು
- ಆರ್ಯರು ಸ್ಥಳೀಯ ಬುಡಕಟ್ಟುಗಳಾದ ದಾಸ–ದುಸ್ಯರುಗಳ ಮೇಲೆ ವಿಜಯ ಸಾಧಿಸಿದರು
- ಇವರು ಆರ್ಯರ ಗುಲಾಮರಾದರು
- ದುಡಿಮೆ ಆಧಾರದಲ್ಲಿ ಜಾತಿಗಳು ಹುಟ್ಟಿದವು
- ಪಿತೃಪ್ರಧಾನ ಕುಟುಂಬ ಪ್ರಮುಖವಾಗಿತ್ತು.

**ಅರ್ಥ ವ್ಯವಸ್ಥೆ:–**

- ಇವರು ಪಶುಸಂಗೋಪನೆ ಮಾಡುತ್ತಿದ್ದರು
- ಇವರ ಸಂಪತ್ತು– ಕುದುರೆ, ಹಸು, ಒಂಟೆ & ಕುರಿಗಳು
- ಸಾಗುವಳಿ ಭೂಮಿ ಕೂಡ ಸಂಪತ್ತಾಗಿತ್ತು
- ವ್ಯವಸಾಯ ಕೂಡ ಮುಖ್ಯ ಕಸುಬು
- ಭೂಮಿಯ ಉಳುಮೆಗೆ ಪಶುಗಳನ್ನು ಬಳಕೆ ಮಾಡುತ್ತಿದ್ದರು
- ಪಶುಗಳಿಂದ ಹಾಲು–ಮಾಂಸದ ಉಪಯೋಗ
- ಪಶುಸಂಗೋಪನೆಯಿಂದ ಗೋಮಾಳ ಅಸ್ತಿತ್ವಕ್ಕೆ ಬಂದಿತು.
- ಕಬ್ಬಿಣದ ಬಗ್ಗೆ ಇನ್ನು ತಿಳಿದಿರಲಿಲ್ಲ

RAMALINGAPPA L Asst Teacher

- ಲೋಹ ಕರಗಿಸಲು ಮಾಗಿದ & ಸಂಸ್ಕರಿಸಿದ ಗಿಡದ ಇದ್ದಿಲು ಬಳಕೆ
- ಮಿಶ್ರ ಲೋಹ ಕಂಚನ್ನು 'ಆಯಸ್ಸು' ಎನ್ನುತ್ತಿದ್ದರು
- ಮಡಿಕೆ, ಕುಡಿಕೆಗಳ ಉಲ್ಲೇಖವಿದೆ.
- ಆದರೆ ಕುಂಬಾರಿಕೆ ಉಲ್ಲೇಖವಿಲ್ಲ
- ಕುಲ ವೃತ್ತಿಗಳ ಬಗ್ಗೆ ಉಲ್ಲೇಖವಿದೆ.
- ಪಣಿ ಎಂಬ ಪದ ಶ್ರೀಮಂತ ಸ್ಥಳಿಯ ಬುಡಕಟ್ಟು ಜನರಿದ್ದರು.
- ಇವರಿಗೆ ಕೃಷಿಯ ಬಗ್ಗೆ ತಿಳಿದಿರಲಿಲ್ಲ
- ಸಾಗುವಳಿ ಮಾಡಿದ ಗದ್ದೆಯನ್ನು 'ಕ್ಷೇತ್ರ' ಎನ್ನುವರು
- ಉಳಿಮೆ ಮಾಡುವ ಕಾರ್ಯವನ್ನು 'ಕೃಷಿ' ಎನ್ನುವರು
- ಸಾ.ಶ.ಪೂ 4ನೇ ಶತಮಾನದಲ್ಲಿ ಸ್ವಾತ್ ಕಣಿವೆಯ 'ಆಲಿಗ್ರಾಮ' ದಲ್ಲಿ ಉಳುಮೆ ಮಾಡಿದ ಗದ್ದೆ ಪತ್ತೆಯಾಗಿದೆ.
- ಇವರು ನೀರೆತ್ತುವ ಕಲ್ಲಿನ ರಾಟೆ ಚಕ್ರವನ್ನು ಬಳಸುತ್ತಿದ್ದರು
- ನದಿ ಕಾಲುವೆಗಳಿಂದ ನೀರಾವರಿ ಮಾಡುತ್ತಿದ್ದರು

**ರಾಜಕೀಯ ವ್ಯವಸ್ಥೆ:–**

- ಋಗ್ವೇದದಲ್ಲಿ ಗ್ರಾಮದ ಉಲ್ಲೇಖವಿದೆ.
- ಗ್ರಾಮಗಳಲ್ಲಿ ಬುಡಕಟ್ಟುಗಳು ವಾಸಿಸುತ್ತಿದ್ದರು
- ಬುಡಕಟ್ಟಿನ ಮುಖ್ಯಸ್ಥ ರಾಜನ್ ಅಥವಾ ರಾಜ ಎನ್ನುತ್ತಿದ್ದರು
- ರಾಜನ ಸ್ಥಾನ ವಂಶಪಾರಂಪರ್ಯವಾಗಿತ್ತು.
- ಉದಾ:– ಪುರು ವಂಶಾವಳಿಯ ತ್ರಕ್ಷಿ, ಭರತರ ವಂಶಾವಳಿಯ ಸುಧಾಸ
- ಆರ್ಯ & ಆರ್ಯೇತರರ ಸಂಘರ್ಷ ಕಂಡುಬಂದಿದೆ.
- ಸಭೆ ಮತ್ತು ಸಮಿತಿಗಳ ಉಲ್ಲೇಖವಿದೆ.
- ಜನರ ಮೇಲೆ ಅಧಿಕಾರ ನಡೆಸುವವರು ಕ್ಷತ್ರಿಯ ಎನ್ನುತ್ತಿದ್ದರು.
- ಸೈನಿಕರನ್ನು ಯೋಧ ಎನ್ನುವರು
- ಪುರೋಹಿತರಿಗೆ ಅಪಾರ ಕಾಣಿಕೆ ಕೋಡುತ್ತಿದ್ದರು
- ದನಗಳಿಗಾಗಿ ಕದನ ನಡೆಯುತ್ತಿತ್ತು.

**ಧಾರ್ಮಿಕ ವ್ಯವಸ್ಥೆ:–**

- ಯಜ್ಞ–ಯಾಗದಲ್ಲಿ ದೇವತೆಗಳಿಗೆ ಪ್ರಾಣಿ ಬಲಿ ನೀಡುತ್ತಿದ್ದರು
- ಉತ್ತಮ ಮಳೆ–ಬೆಳೆ ಮತ್ತು ದಸ್ಯು ಬುಡಕಟ್ಟನ್ನು ಸಂಹರಿಸಲು ಇಂದ್ರನನ್ನು ಬೇಡುತ್ತಿದ್ದರು
- ಇದರಲ್ಲಿ ಮಂತ್ರ ಉಚ್ಚಾರಣೆ & ಸೋಮಪಾನದ ಉಲ್ಲೇಖ
- ಯಜ್ಞ ನಡೆಸುವ ಪುರೋಹಿತನನ್ನು 'ಹೋತರ್' ಎನ್ನುವರು
- ಇಲ್ಲಿ ಮೂರ್ತಿ ಪೂಜೆ ಇರಲಿಲ್ಲ
- ಬೆಂಕಿ ತುಂಬ ಪ್ರಾಮುಖ್ಯತೆ ಇದ್ದು. ಅಗ್ನಿ ಕುರಿತು ಸ್ಲೋಕಗಳಿವೆ
- ಇಂದ್ರ ಮಳೆ ತರುತ್ತಾನೆ. ಶತ್ರುಗಳನ್ನು ನಾಶಪಡಿಸುತ್ತಾನೆ.
- ಇಲ್ಲಿ ವಿಷ್ಣು ಮಹತ್ವಕ್ಕೆ ಬಂದಿರಲಿಲ್ಲ
- ವಿವಾಹ ಮತ್ತು ಮರಣದ ಉಲ್ಲೇಖಗಳಿವೆ.
- ಬರವಣಿಗೆ ಗೊತ್ತಿರಲಿಲ್ಲ.

## ಉತ್ತರ ವೇದಗಳ ಕಾಲ:–

**ಸಾಮಾಜಿಕ ವ್ಯವಸ್ಥೆ:–**

- ವರ್ಣ ವ್ಯವಸ್ಥೆ ಬದಲಾವಣೆ ಕಂಡಿತು
- ಬ್ರಾಹ್ಮಣ – ಯಜ್ಞ ಆಚರಣೆ, ಕಾಣಿಕೆ ಪಡೆಯುವುದು
- ಕ್ಷತ್ರಿಯ – ಯುದ್ಧ ಮಾಡುವ ರಾಜನ್
- ವೈಶ್ಯ – ಇವರು ಕಾಣಿಕೆಯನ್ನು ಕೊಡುತ್ತಿದ್ದರು
- ಶೂದ್ರ – ಇವರಿಗೆ ಯಾವುದೇ ಹಕ್ಕುಗಳು ಇರಲಿಲ್ಲ

ಶೂದ್ರರು:–

- ವರ್ಣ ವ್ಯವಸ್ಥೆಯ ಕೊನೆಯವರು
- ಶೂದ್ರರನ್ನು ಕೊಲ್ಲಬಹುದಿತ್ತು
- ಯಜ್ಞ ಆಚರನೆ ಮಾಡುವಂತಿರಲಿಲ್ಲ
- ಗುರುವು ಶೂದ್ರರನ್ನು ತ್ಯಜಿಸಬೇಕು/ನೋಡಬಾರದು
- ಇವರಿಗೆ ಶಿಕ್ಷನದ ಹಕ್ಕುಗಳು ಇರಲಿಲ್ಲ

**ಮಹಿಳೆಯ ಸ್ಥಾನ:–**

- ಹೆಣ್ಣನ್ನು ಕೆಳಸ್ಥಾನದಲ್ಲಿ ಇಡಲಾಗಿತ್ತು.
- ಮಹಿಳೆಯನ್ನು ಅಸತ್ಯದ ಮೂರ್ತಿರೂಪ ಎಂದು ಪರಿಗಣಿಸಲಾಗಿತ್ತು.
- ವರದಕ್ಷಿಣೆ ಉಲ್ಲೇಖವಿದೆ.
- ಶ್ರಮಕ್ಕೆ ಪ್ರತಿಫಲವಿರಲಿಲ್ಲ
- ಬಾಲ್ಯವಿವಾಹ ಪದ್ಧತಿ ಇರಲಿಲ್ಲ
- ವಿಧವಾ ಪುನರ್ ವಿವಾಹಕ್ಕೆ ಅವಕಾಶವಿತ್ತು.
- ಶ್ರೀಮಂತರಲ್ಲಿ ಬಹುಪತ್ನತ್ವ ಇತ್ತು.

**ಅರ್ಥ ವ್ಯವಸ್ಥೆ:–**

- ಸಿಂಧೂ ಪ್ರದೇಶದಿಂದ ಗಂಗಾನದಿ ಬಯಲಿಗೆ ಪ್ರಯಾಣ
- ಅರಣ್ಯ ನಾಶ ಮಾಡಿ ಕೃಷಿ ಕಾರ್ಯದಲ್ಲಿ ತೊಡಗಿದರು
- ಮರಕಡಿಯಲು ಕಬ್ಬಿಣದ ಕೊಡಲಿ ಬಳಕೆ
- ಕೃಷಿಗೆ ನೇಗಿಲಿನ ಬಳಕೆ
- ಬೇಟೆ, ಪಶುಪಾಲನೆ, ಕೃಷಿ ಮಹತ್ವಕ್ಕೆ ಬಂದಿತು
- ವಾಣಿಜ್ಯದಲ್ಲಿ ತೊಡಗಿರುವವರನ್ನು 'ವ್ರಾತ್ರರು' ಎನ್ನುತ್ತಿದ್ದರು

RAMALINGAPPA L Asst. Teacher

- ದನಗಳ ಸಂಖ್ಯೆ ಆಧರಿಸಿ ಸಂಪತ್ತು ತಿರ್ಮಾನವಾಗುತ್ತಿತ್ತು.
- ವ್ಯವಸಾಯ ಸರಕು ಸಾಗಾಣಿಕೆಗೆ ದನಗಳ ಬಳಕೆ
- ಹಲವು ಲೋಹಗಳ ಪರಿಚಯ
- ಕಬ್ಬಿಣದ ಪರಿಚಯವಾಯಿತು.

**ರಾಜಕೀಯ ವ್ಯವಸ್ಥೆ:–**

- ಕುರು, ಪಾಂಚಾಲ, ವಶ, ಉಶೀನ್ ಬುಡಕಟ್ಟು.
- ಈ ಬುಡಕಟ್ಟುಗಳು ರಾಜಕೀಯವನ್ನು ನಿಯಂತ್ರಿಸುತ್ತಿತ್ತು.
- ಬಲಿಷ್ಠ ರಾಜಪ್ರಭುತ್ವಗಳ ರೂಪಗೊಂಡವು.

**ರಾಜಸ್ಥಾನ:–**

- ರಾಜ ದೇವರ ಪ್ರತಿನಿಧಿಯಾದನು.
- ಬಲಿ, ತೆರಿಗೆ, ಕಾಣಿಕೆ, ನೀಡಿಕೆ.
- ರಾಜನ ಸುತ್ತ ಸಂಕೀರ್ಣನ ಮತ್ತು ಶ್ರೀಮಂತಿಕೆಸೂಚಿಸುವವ ಆಚರಣೆ ಬೆಳೆದವು.
- ರಾಜನು ಅಧಿಕಾರಕ್ಕೆ ಬರಲು– ರಾಜಸೂಯ, ಅಶ್ವಮೇದ ಯಾಗ ಆಚರಣೆ.

**ಧಾರ್ಮಿಕ ವ್ಯವಸ್ಥೆ:–**

- ಧಾರ್ಮಿಕ ವಿಚಾರಗಳಲ್ಲಿ ಮಹತ್ವದ ಬದಲಾವಣೆ
- ಹಲವು ಧಾರ್ಮಿಕ ಆಚರಣೆಗಳು ಬೆಳೆದವು.
- ವಿಷ್ಣು ಮತ್ತು ರುದ್ರ ದೇವತೆಗಳು ಪ್ರಮುಖ ಸ್ಥಾನ ಪಡೆದರು
- ವಿಷ್ಣುವಿನ ಅವತಾರಗಳ ಬಗ್ಗೆ ಉಲ್ಲೇಖಗಳಿಲ್ಲ
- ರುದ್ರನು ಸ್ಥಳೀಯ ದೇವತೆಯಾಗಿ ಸೇರ್ಪಡೆ
- ಯಜ್ಞದ ಫಲ ಎನ್ನುವ ವಿಧ–ವಿಧಾನಗಳನ್ನು ಪುರಾಣಗಳಲ್ಲಿ ತಂದರು
- ಉಪನಿಷದ್‌ಗಳಲ್ಲಿ ಕರ್ಮ ಮತ್ತು ಆತ್ಮಗಳ ಪುನರ್‌ಜನ್ಮ ಎಂಬ ಹೊಸ ಕಲ್ಪನೆ ಹುಟ್ಟು
- ಹುಟ್ಟಿನಿಂದ ಜಾತಿ ವ್ಯವಸ್ಥೆ ಮುಂದುವರೆಯಿತು.
- ಜಾತಿ ವ್ಯವಸ್ಥೆ ಸಾಂಸ್ಥಿಕ ರೂಪಡೆಯಿತು.

**ವಿಶೇಷತೆಗಳು**

- **ಕಾಶ್ಮೀರದ ಬರ್ಜುಹೋಂ**ನಲ್ಲಿ ನೆಲಮನೆ ದೊರೆತಿದೆ.
- ನೆಲದೊಳಗೆ ಗುಂಡಿತೋಡಿ ಮನೆ ನಿರ್ಮಾಣ ಕಾರಣ **ಚಳಿ** & **ಕಾಡು ಮೃಗಗಳಿಂದ ರಕ್ಷಣೆ**
- ಇರಾನಿ ಮಾರ್ಗ ಬೋಲನ್‌ಪಾಸಿನ ಫಲವತ್ತಾದ ಮೈದಾನದಲ್ಲಿ **'ಮೆಹರ್‌ಗರ್'** ನೆಲೆಯಿದೆ.
- ದೊರೆತಿರುವ ಮೊಟ್ಟ ಮೊದಲ ಹಳ್ಳಿ – **ಮೆಹರ್‌ಗರ್**
- ಇಲ್ಲಿನ ಜನ **ಬಾರ್ಲಿ** & **ಗೋಧಿ** ಬೆಳೆಯುತ್ತಿದ್ದರು
- ಇಲ್ಲಿನ ಜನ **ಕುರಿ** & **ಮೇಕೆ**ಗಳನ್ನು ಸಾಕುತ್ತಿದ್ದರು.
- ಇಲ್ಲಿ **ಸಮಾಧಿ ನೆಲೆ**ಗಳು ದೊರೆತಿವೆ.
- ಮನುಷ್ಯರ ಜೊತೆ ಪ್ರಾಣಿಗಳನ್ನು ಇಲ್ಲಿ ಹೂಳುತ್ತಿದ್ದರು
- ಸಂವಿಧಾನ ಶಿಲ್ಪಿ **ಡಾ. ಬಾಬಾ ಸಾಹೇಬ ಅಂಬೇಡ್ಕರರು "ಆರ್ಯರ ಆಗಮನ ಸಿದ್ಧಾಂತ"**ವನ್ನು ತೀವ್ರವಾಗಿ ಖಂಡಿಸಿದ್ದಾರೆ.

## ಅಧ್ಯಾಯ–4

## ಜಗತ್ತಿನ ಪ್ರಾಚೀನ ನಾಗರಿಕತೆಗಳು

1) ಈಜಿಪ್ಟ್ ನಾಗರಿಕತೆ
2) ಮೆಸಪಟೋಮಿಯ ನಾಗರಿಕತೆ'
3) ಚೀನಾ ನಾಗರಿಕತೆ
4) ಹರಪ್ಪಾ ನಾಗರಿಕತೆ

**ಜಗತ್ತಿನ ಆಧುನಿಕ ನಾಗರಿಕತೆಗಳು**

1) ಗ್ರೀಕ್ ನಾಗರಿಕತೆ
2) ರೋಮ್ ನಾಗರಿಕತೆ
3) ಅಮೇರಿಕಾ ನಾಗರಿಕತೆ:– ಮಾಯಾ, ಇಂಕಾ, ಅಜ್ಟೆಕ್

**ಈಜಿಪ್ಟ್ ನಾಗರಿಕತೆ:–**

- ಇದು ನೈಲ್ ನದಿಯ ದಡದಲ್ಲಿ ಜನ್ಮ ತಾಳಿತು
- ಜಗತ್ತಿನ ಪ್ರಾಚೀನ ನಾಗರಿಕತೆ
- ಪಿರಮಿಡ್‌ಗಳು, ಮೂರ್ತಿ ಶಿಲ್ಪಗಳು ದೊರೆತಿವೆ

**ಈಜಿಪ್ಷಿಯನ್ನರ ಕೊಡುಗೆಗಳು:–**

- ಅತ್ಯುತ್ತಮ ಕೃಷಿಕರಾಗಿದ್ದರು
- ನೀರಾವರಿ ವ್ಯವಸ್ಥೆ ತಿಳಿದಿತ್ತು
- ದೇವಾಲಯಗಳನ್ನು ಕಟ್ಟಿದರು
- ಕ್ಯಾಲೆಂಡರ್ ಹುಟ್ಟು ಹಾಕಿದರು
- ಬರವಣಿಗೆ ಕಲೆ ರೂಪಿಸಿದರು (ಇದು ಸಂಕೇತಗಳ ಭಾಷೆ)
- **ಹಿರೋಗ್ಲೈಫಿಕ್ಸ್ (ಪವಿತ್ರ ಬರವಣಿಗೆ)** ರೂಡಿ

**ನೈಲ್ ನದಿ ಕಣಿವೆ:–**

- ನೈಲ್ ನದಿಯು ಕಣಿವೆಯನ್ನು ಕೆರೆಯನ್ನಾಗಿಸುತ್ತಿತ್ತು.
- ನೀರು ಭತ್ತಿದ ಮೇಲೆ ಫಲವತ್ತಾದ ಜೇಡಿಮಣ್ಣು ಸಿಕ್ಕುತ್ತದೆ.
- ನಗರದ ಜನರಿಗೆ ಆಹಾರ ಒದಗಿಸುತ್ತಿತ್ತು.
- ಸಣ್ಣ ಕಾಲುವೆ & ಬಾವಿಗಳ ಮೂಲಕ ನೀರಾವರಿ ವ್ಯವಸ್ಥೆ
- ಇವರು ಕೃಷಿಕರಾಗಿದ್ದರು
- ಜೊತೆಗೆ ಕಲಾತ್ಮಕ ವಸ್ತುಗಳ ರಚನೆಯಲ್ಲಿ ತೊಡಗಿದ್ದರು

RAMALINGAPPA L Asst. Teacher

- ಪ್ರಕೃತಿಯ ವಿಷಯ ವಿವರಿಸಲು ಪುರೋಹಿತ ಸ್ಥಾನ ರೂಪಿಸಿತು
- ಇವರು ವಿದ್ವಾಂಸರಾಗಿದ್ದು ಬರವಣಿಗೆ ಮೇಲೆ ಹಿಡಿತ
- ಪುನರ್‌ಜನ್ಮದಲ್ಲಿ ನಂಬಿಕೆ ಉಳ್ಳವರು
- ಪಾಪಕೃತ್ಯಗಳ ಲೆಕ್ಕ & ಬದುಕು ಸಾವಿನ ದೇವತೆ ಒಸ್ಸಿರಸ್‌ನಿಗೆ ನೀಡಬೇಕಿತ್ತು.
- ಸತ್ತವರಿಗಾಗಿ ನೈಲ್‌ನದಿ ಪ್ರದೇಶ ಮೀಸಲಾಗಿತ್ತು.
- ಸತ್ತ ದೇಹವನ್ನು ರಾಸಾಯನಿಕ ವಸ್ತುಗಳಿಂದ ಲೇಪಿಸಿ ಮಮ್ಮಿಗಳನ್ನು ಇಡುತ್ತಿದ್ದರು.
- ಈಜಿಪ್ಷಿಯನ್ನರ ಸಮಾಧಿಯೇ ವಾಸ್ತವಿಕ ನೆಲೆ

**ಪಿರಮಿಡ್‌ಗಳ ಮಹತ್ವ:–**

- ಸತ್ತ ದೇಹವನ್ನು ಮರಭೂಮಿಯಲ್ಲಿಟ್ಟು ಸಮಾಧಿ ಮಾಡುತ್ತಿದ್ದರು
- ಸತ್ತ ದೇಹದ ಮೇಲೆ ಬೃಹತ್ ಶಿಲೆ ಬಳಸಿ ಗೋಪುರ ನಿರ್ಮಾಣ
- ಇವುಗಳನ್ನು **ಗ್ರೀಕರು ಪಿರಮಿಡ್** ಎಂದು ಕರೆದರು
- ಈಜಿಪ್ಟ್‌ನಲ್ಲಿ ಆಳುತ್ತಿದ್ದ ರಾಜರುಗಳನ್ನು **'ಫ್ಯಾರೊ'** ಎಂದು ಕರೆಯುತ್ತಿದ್ದರು
- ಫ್ಯಾರೊ ಎಂದರೆ ದೊಡ್ಡ ಮನೆಯಲ್ಲಿ ವಾಸಿಸುವ ಮನುಷ್ಯ

**ಈಜಿಪ್ಟ್ ನಾಗರಿಕತೆಯ ಅವನತಿ:–**

- 2ನೇ ಶತಮಾನಗಳ ನಂತರ ಹೈಕ್‌ಸೋಸ್ ಎಂಬ ಅರೇಬಿಯಾ ಕುರಿ ಕಾಯುವ ಬುಡಕಟ್ಟು ದಾಳಿ
- ಇವರು ಈಜಿಪ್ಟ್ ನ ಜನರ ಸಂಪತ್ತು ದೋಚಿದರು
- ಆಶ್ರಯ ಬೇಡಿದ ಯಹೂದಿಗಳನ್ನು ಜನ ದ್ವೇಷಿಸಿದರು
- ವಿದೇಶಿ ಆಳ್ವಿಕೆಗೆ ಸಹಕಾರ ನೀಡಿ ತೆರಿಗೆ ನೀಡಿ ಸೇವೆ ಮಾಡಿದರು.
- ಸಾ.ಶ.ಪೂ 1700ರಲ್ಲಿ ತೇಬಿಸ್ಸಿನ ಜನ **ಹೈಕ್‌ಸೊಸ್** ಜನರನ್ನು ಓಡಿಸಿದರು
- 1000 ವರ್ಷಗಳ ನಂತರ ಅಸ್ಸಿರಿಯಾದ ಸಾರ್ಡಾನಫಲಸ್ಸನ ಆಳ್ವಿಕೆಗೆ ಒಳಪಟ್ಟಿತ್ತು.
- ಸಾ.ಶ.ಪೂ 6ನೇ ಶತಮಾನದಲ್ಲಿ ಪರ್ಶಿಯಾದ ದೊರೆ ಕ್ಯಾಂಬಸಿಸ್‌ನು ವಶಪಡಿಸಿಕೊಂಡನು
- ಸಾ.ಶ.ಪೂ 4ನೇ ಶತಮಾನದಲ್ಲಿ ಅಲೆಗ್ಸಾಂಡರ್ ಪರ್ಶಿಯವನ್ನು ವಶಪಡಿಸಿಕೊಂಡನು
- ಅಲೆಗ್ಸಾಂಡರ್ ಸೇನಾಪತಿ ಟಾಲೆಮಿ ರಾಜಮನೆತನ ಸ್ಥಾಪಿಸಿದನು.
- ಸಾ.ಶ.ಪೂ 39ರಲ್ಲಿ ಈಜಿಪ್ಟ್ ರೋಮನ್ನರ ವಶ

## ಮೆಸಪಟೋಮಿಯಾದ ನಾಗರಿಕತೆ

- ಮೆಸಪಟೋಮಿಯಾ ಎಂದರೆ, **ಎರಡು ನದಿಗಳ ನಡುವಿನ ಪ್ರದೇಶ** – ಗ್ರೀಕರು ಕರೆದರು
- ಬೈಬಲಿನ ಹಳೆಯ ಒಡಂಬಡಿಕೆಯಲ್ಲಿ ವಿವರಣೆಯಿದೆ
- ಎರಡು ನದಿಗಳು ನದಿಗಳು **ಯುಪ್ರೆಟಿಸ್ ಮತ್ತು ಟೈಗ್ರಿಸ್**
- ಇಲ್ಲಿ ಫಲವತ್ತಾದ ಪ್ರದೇಶವಿತ್ತು
- ಇಲ್ಲಿನ ಆಹಾರ ಒದಗಿಸುವ ಪ್ರದೇಶ ಪಡೆಯಲು ಗುಡ್ಡಗಾಡುವಾಸಿಗಳು– ಬುಡಕಟ್ಟುಗಳಲ್ಲಿ ಸಂಘರ್ಷ.
- **ಇಲ್ಲಿ ಆಳಿದ ಜನಾಂಗಗಳು:–**
  1) ಸುಮೇರಿಯನ್ನರು,
  2) ಬ್ಯಾಬಿಲೊನಿಯನ್ನರು,
  3) ಅಸ್ಸೀರಿಯನ್ನರು,
  4) ಪರ್ಶಿಯನ್ನರು
- ಇಲ್ಲಿನ ಬರವಣಿಗೆ ಅಭಿವೃದ್ಧಿಪಡಿಸಿದವರು– **ಸುಮೇರಿಯನ್ನರು**
- ಲಿಪಿಯನ್ನು **ಕ್ಯೂನಿಫಾರ್ಮ** ಎನ್ನುವರು.
- ಈ ಪ್ರದೇಶವನ್ನು **ಬ್ಯಾಬಿಲೋನಿಯ** ಎಂದು ಕರೆಯುತ್ತಿದ್ದರು.
- ಉತ್ತರ ಭಾಗ – **ಅಖಡ್**
- ದಕ್ಷಿಣ ಭಾಗ – **ಸುಮೇರ್**

**ಸುಮೇರಿಯನ್ನರು:–**

- ಇಲ್ಲಿಗೆ ಉಂದ ಮೊದಲಿಗರು
- ಇವರು ತಮ್ಮ ದೇವರನ್ನು ಬೆಟ್ಟದ ತಪ್ಪಲಿನಲ್ಲಿ ಆರಾಧಿಸುತ್ತಿದ್ದರು
- ಇದನ್ನು **'ಜಿಗ್ಗುರಾತ್'** ಎನ್ನುವರು
- ಜಿಗ್ಗುರಾತ್ ಒಂದು ಆರಾಧನ ಕೇಂದ್ರ
- ಇದರ ಸುತ್ತಲಿ ಇಳಿಜಾರನ್ನು ನಿರ್ಮಿಸಿದ್ದರು
- ಇಲ್ಲಿನ ಗೋಪುರಗಳನ್ನು ಯಹೂದಿಗಳು **'ಬೆಬೆಲ್‌ನ ಗೋಪುರ'** ಎಂದರು
- ಇವರನ್ನು **ಅಕಾಡಿಯನ್ನರು** ಸೋಲಿಸಿದರು.

**ಅಕ್ಕಾಡಿಯನ್ನರು:–**

- ಇವರು ಸಿಮೈಟ್ಸ್ ಎಂದೇ ಪ್ರಚಲಿತರು.



RAMALINGAPPA L Asst. Teacher

- ಇವರನ್ನು ಅಮೊರೈಟರು ಸೋಲಿಸಿದರು.

**ಅಮೊರೈಟರು:–**

- ಇವರು ಪ್ರಸಿದ್ಧ ಅರಸ – **ಹಮ್ಮುರಬಿ**
- ಹಮ್ಮುರಬಿ **ಬ್ಯಾಬಿಲೋನ್‌ನಲ್ಲಿ ಅರಮನೆ** ಕಟ್ಟಿಸಿದನು.
- **ಕಠಿಣ ನಿಯಮ**ಗಳನ್ನು ರೂಪಿಸಿದರು
- ಇವುಗಳನ್ನು **ಹಮ್ಮುರಬಿಯ ಕಾನೂನು ಸಂಹಿತೆ** ಎನ್ನುವರು.
- ಇವರನ್ನು ಹಿಟೈಟರು ಸೋಲಿಸಿದರು

**ಅಸ್ಸಿರಿಯನ್ನರು:–**

- ಹಿಟೈಟ್‌ರನ್ನು ಸೋಲಿಸಿದವರು ಅಸ್ಸಿರಿಯನ್ನರು
- ಇವರು **ಅಶುರ** ಎಂಬ **ಮರುಭೂಮಿ ದೇವರ** ಅನುಯಾಯಿಗಳು
- ಇವರು ಪಶ್ಚಿಮ ಏಷ್ಯಾ & ಈಜಿಪ್ಟ್ ವಶಪಡಿಸಿಕೊಂಡರು
- ಸಾ.ಶ.ಪೂ 7ನೇ ಶತಮಾನದವರೆಗೆ ತೆರಿಗೆ ಸಂಗ್ರಹಿಸಿದರು
- ಇವರನ್ನು ಚಾಲ್ಡಿಯನ್ನರು ಸೋಲಿಸಿದರು

**ಚಾಲ್ಡಿಯನ್ನರು:–**

- ಇವರು **ಬ್ಯಾಬಿಲೋನಿಯನ್ನರು ಮರುಸ್ಥಾಪಿ**ಸಿದರು.
- **ಬ್ಯಾಬಿಲೋನ್**‌ನ್ನು ರಾಜಧಾನಿ ಮಾಡಿಕೊಂಡರು
- ಶ್ರೇಷ್ಠ ದೊರೆ **ನೆಬುಕಡ್ನೆಜರ್**
- ಇವನು **ವೈಜ್ಞಾನಿಕ ಅಧ್ಯಯನಕ್ಕೆ** ಉತ್ತೇಜ ನೀಡಿದರು.
- ಇವರನ್ನು ಸಾ.ಶ.ಪೂ 6ನೇ ಶತಮಾನದಲ್ಲಿ ಪರ್ಷಿಯನ್ನರು ಸೋಲಿಸಿದರು.
- ಕೊನೆಗೆ ಅಲೆಗ್ಸಾಂಡರ್ ಇದನ್ನು ಗ್ರೀಕ್ ಪ್ರಾಂತ್ಯದಲ್ಲಿ ವಿಲೀನಗೊಳಿಸಿದನು.
- ನಂತರ ರೋಮನ್ನರು & ಟರ್ಕರು ವಶಪಡಿಸಿಕೊಂಡರು.

## ಚೀನಾ ದೇಶದ ನಾಗರಿಕತೆ

- ಕಾರಣವಾದ ನದಿ – **ಹವಾಂಗೋ ನದಿ**
- ಈ ನದಿಯನ್ನು **'ಚೀನಾದ ದುಗುಡ'** ಎನ್ನುವರು.
- ಇದು ಪ್ರವಾಹವನ್ನು ಉಂಟುಮಾಡುತ್ತದೆ.
- ತನ್ನ ಹಾದಿಯನ್ನು ಬದಲಿಸಿ ಮನೆ & ಕೃಷಿಗೆ ಹಾನಿ
- ಇಲ್ಲಿನ ಕಾಲುವೆಗಳನ್ನೆಲ್ಲ ನಿಷ್ಕ್ರೀಯಗೊಳಿಸುತ್ತಿತ್ತು.
- ಆದ್ದರಿಂದ ಇದನ್ನು **'ಚೀನಾದ ದುಃಖದ ಪ್ರತೀಕ'**ವಾಗಿದೆ.

**ಚೀನಾದಲ್ಲಿ ಆಳಿದ ರಾಜಮನೆತನಗಳು:–**

1) ಶಾಂಗ್ ಮನೆತನ
2) ಚೌ ಮನೆತನ

**ಆಡಳಿತ:–**

- ರಾಜರುಗಳ ಕೆಳಗೆ ಅಧಿಕಾರ ವರ್ಗವಿತ್ತು.
- ಅಧಿಕಾರಿಗಳಿಗೆ ರಾಜ ಭೂಮಿ ಹಂಚುತ್ತಿದ್ದನು.
- ಇದಕ್ಕೆ ಅವರು ಯುದ್ಧದಲ್ಲಿ ಅರಸನಿಗೆ ಸೈನಿಕ ಸಹಾಯ ನೀಡುತ್ತಿದ್ದರು
- 2ನೇ ಹಂತದಲ್ಲಿ ವ್ಯಾಪಾರಿಗಳು ಮತ್ತು ಕುಶಲಕರ್ಮಿಗಳು ಇದ್ದರು
- 3ನೇ ಹಂತದಲ್ಲಿ ಕೃಷಿಕರು ಇದ್ದರು
- ಕೊನೆಯ ವರ್ಗ – ಗುಲಾಮ ವರ್ಗವಿತ್ತು.
- ರಾಜರು ಯುದ್ಧ ಖೈದಿಗಳನ್ನು ಗುಲಾಮರನ್ನಾಗಿ ಮಾಡುತ್ತಿದ್ದರು
- ಸಮಾಜದಲ್ಲಿ ಸೈನಿಕರಿಗೆ ಉನ್ನತ ಸ್ಥಾನವಿತ್ತು.
- ಸೈನಿಕರು ಕಂಚಿನ ತಲೆರಕ್ಷಾ ಕವಚ & ಲೋಹದ ದೇಹಕವಚ ಧರಿಸುತ್ತಿದ್ದರು.
- ಇವರು ಕೃಷಿಯನ್ನು ಅವಲಂಬಿಸಿದ್ದರು
- ಭತ್ತವನ್ನು ಹೆಚ್ಚು ಬೆಳೆಯುತ್ತಿದ್ದರು.
- ತೆಳುವಾದ ನೂಲಿನ ಉಡುಪನ್ನು ಧರಿಸುತ್ತಿದ್ದರು
- ಇವರು ರೇಷ್ಮೆಯನ್ನು ಬೆಳೆದು ಬಳಸುತ್ತಿದ್ದರು
- ಇಲ್ಲಿ ರೇಷ್ಮೆ ಉತ್ಪಾದನೆ ಪ್ರಮುಖ ಉದ್ಯಮವಾಗಿತ್ತು.
- ಪಿಂಗಾಣಿ ವಸ್ತುಗಳನ್ನು ತಯಾರಿಸುತ್ತಿದ್ದರು.
- ಆತ್ಮ & ಆತ್ಮಶಕ್ತಿ ಬಗ್ಗೆ ನಂಬಿಕೆಯಿತ್ತು.
- ಸತ್ತ ದೇಹವನ್ನು ಶವಸಂಸ್ಕಾರ ಮಾಡಿ ಸಮಾಧಿ ಮಾಡುತ್ತಿದ್ದರು
- ಚೀನಿಯರು ಚಿತ್ರಲಿಪಿಯನ್ನು ಅಭಿವೃದ್ಧಿ ಪಡಿಸಿದ್ದರು
- ಚೀನಾ ಮಹಾಗೋಡೆಯನ್ನು ನಿರ್ಮಾಣ ಮಾಡಿದ್ದರು.

## ಗ್ರೀಕ್, ರೋಮನ್ ಮತ್ತು ಅಮೇರಿಕಾ ನಾಗರಿಕತೆ

**ಗ್ರೀಕ್ ನಾಗರಿಕತೆ:–**

- ಮೆಡಿಟರೇನಿಯನ್ ಸಮುದ್ರದ ಪರ್ಯಾಯ ದ್ವೀಪ.
- ಏಜಿಯನ್ ಸಮುದ್ರ ಏಷ್ಯಾ ಮೈನರ್‌ನಿಂದ ಪ್ರತ್ಯೇಕಿಸಿದೆ.
- ಸಮುದ್ರ ಸಂಪರ್ಕವಿರುವುದರಿಂದ ನೌಕಾಬಲ ಹೆಚ್ಚಿಸಿಕೊಂಡಿದೆ.
- ಇಂಡೋ–ಯುರೋಪಿಯನ್ ಜನಾಂಗಕ್ಕೆ ಸೇರಿದವರು.

RAMALINGAPPA L Asst. Teacher

- ಪ್ರಾಚೀನ ಗ್ರೀಕರನ್ನು **'ಹೆಲ್ಲೇನೀಸ್'** ಎನ್ನುವರು. ಕಾರಣ ಇವರ ಪೂರ್ವಿಕ ಹೆಲ್ಲೆನ್ ಆಗಿದ್ದನು.
- ಇಟಾಲಿಯನ್ನರು ಹೆಲ್ಲೇನೀಸನ್ನು ಗ್ರೀಕ್ ಎಂದು ಕರೆದರು

**ಪ್ರಾಚೀನ ಗ್ರೀಕರಲ್ಲಿ ಮೂರು ಪಂಗಡಗಳಿದ್ದವು:–**

1) ಅಯೋಲಿಯನ್
2) ಅಯೋನಿಯನ್
3) ಡೋರಿಯಸ್

**ನಗರ ರಾಜ್ಯಗಳು:–**

- ಗ್ರೀಕ್‌ನ ಪ್ರತಿ ಪಂಗಡಕ್ಕೆ ಒಬ್ಬ ರಾಜ, ಹಿರಿಯರ ಸಲಹಾ ಮಂಡಲಿಯಿತ್ತು.
- ಕೈಗಾರಿಕೆ & ವ್ಯಾಪಾರ ವೃದ್ಧಿಯಿಂದ ಗ್ರಾಮಗಳು ಪಟ್ಟಣಗಳಾದವು
- ಮುಂದೆ ಇವೇ ನಗರ ರಾಜ್ಯಗಳಾದವು
- ನಗರ ರಾಜ್ಯಗಳನ್ನು ಗ್ರೀಕ್ ಭಾಷೆಯಲ್ಲಿ 'ಪೋಲಿಸ್' ಎನ್ನುವರು.
- ಇಲ್ಲಿನ ಜನ ನಗರರಾಜ್ಯಗಳಿಗೆ ನಿಷ್ಠರಾಗಿದ್ದರು.
- ನಗರರಾಜ್ಯಗಳು ಸೇನೆ, ಆಡಳಿತ, ನಗರ ದೇವತೆ ಹೊಂದಿದ್ದವು

**ನಗರರಾಜ್ಯಗಳನ್ನು ಒಗ್ಗೂಡಿಸಿದ ಅಂಶಗಳು:–**

- ಗ್ರೀಕ್ ಭಾಷೆ
- ಹೋಮರನ ಮಹಾಕಾವ್ಯಗಳು
- ಒಲಂಪಿಕ್ ಕ್ರೀಡೆಗಳು
- ಗ್ರೀಕ್ ದೇವತೆಗಳು

**ಪ್ರಮುಖ ಗ್ರೀಕ್ ನಗರರಾಜ್ಯಗಳು:–**

1) ಅಥೆನ್ಸ್
2) ಸ್ಪಾರ್ಟಾ

**ಅಥೆನ್ಸ್:–**

- ಇದರ ರಾಜಧಾನಿ – ಅಟ್ಟಿಕಾ
- ಇದು ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿತ್ತು
- ರಾಜಪ್ರಭುತ್ವದ ನಂತರ ಶ್ರೀಮಂತ ಪ್ರಭುತ್ವ ಜಾರು.
- ಅರ್ಕನ್ ಎಂಬ ಆಡಳಿತಗಾರರನ್ನು ಶ್ರೀಮಂತರು ಆಯ್ಕೆ ಮಾಡುತ್ತಿದ್ದರು.
- ಡ್ರಾಕೋ ಎಂಬುವವನು ಇಲ್ಲಿ ನಿರ್ದಯ ಕಾನೂನು ಜಾರಿ ಮಾಡಿದನು.
- ಸೋಲಾನ್ ಎಂಬಾತನು ಕಾನೂನುಗಳನ್ನು ಸುಧಾರಿಸಿದನು.
- ಇವನ ನಂತರ ಅಥೆನ್ಸ್‌ನಲ್ಲಿ ಅರಾಜಕತೆ ಉಂಟಾಯಿತು.
- ಮಧ್ಯಮವರ್ಗ & ಬಡರೈತರು ಸರ್ವಾಧಿಕಾರಿಗಳನ್ನು ನಾಶ ಮಾಡಿ ಪ್ರಜಾಪ್ರಭುತ್ವ ಜಾರಿ ಮಾಡಿದರು
- ಆಗ ಅಥೆನ್ಸ್‌ನಲ್ಲಿ 'ಪೆರಿಕ್ಲಿಸ್‌ನ ಕಾಲ' ಆರಂಭವಾಯಿತು.
- ಇವನ ಕಾಲ ಸುವರ್ಣಯುಗ ಕಂಡಿತ್ತು.
- ಇವನ ಕಾಲದಲ್ಲಿ ಕಲೆ, ಸಾಹಿತ್ಯ, ವಿಜ್ಞಾನ, ತತ್ವಜ್ಞಾನದಲ್ಲಿ ಪ್ರಗತಿ ಸಾಧಿಸಿತ್ತು.
- ಅಥೆನ್ಸ್‌ನ್ನು 'ಹೆಲ್ಲಾಸ್‌ನ ಶಾಲೆ' ಎಂದು ಪೆರಿಕ್ಲಿಸ್‌ನು ಕರೆದನು.
- ಸಾಕ್ರಟೀಸ್, ಪ್ಲೇಟೋ, ಅರಿಸ್ಟಾಟಲ್ ಅಥೆನ್ಸ್‌ಗೆ ಸೇರಿದ್ದರು.

**ಸ್ಪಾರ್ಟಾ:–**

- ಇದು ಡೇರಿಯನ್ ಪಂಗಡಕ್ಕೆ ಸೇರಿತ್ತು.
- ಇದು ಗ್ರೀಕ್‌ನ ಸೈನಿಕ ರಾಜ್ಯವಾಗಿತ್ತು.
- ಇಲ್ಲಿ 7 ವರ್ಷದ ಬಾಲಕನಿಗೆ ಕಠಿಣ ಸೈನಿಕ ತರಬೇತಿ ನೀಡಲಾಗುತಿತ್ತು.
- 12 ವರ್ಷ ತರಬೇತಿಯ ನಣಮತರ ಸೈನ್ಯಕ್ಕೆ ಸೇರ್ಪಡೆ
- ಪರ್ಶಿಯಾದ ಡೇರಿಯಸ್ಸನು ಗ್ರೀಕ್ ಮೇಲೆ ದಾಳಿ ಮಾಡಿದನು.
- ಅಥೆನ್ಸ್ & ಸ್ಪಾರ್ಟಾ ಸೇರಿ ಮ್ಯಾರಾಥಾನ್ ಕದನದಲ್ಲಿ ಪರ್ಶಿಯಾವನ್ನು ಸೋಲಿಸಿದವು.
- ಅಥೆನ್ಸ್ ಕಾನ್ಪಡರಸಿ ಆಫ್ ಡೀಲಾಸ್ ಒಕ್ಕೂಟ ರಚನೆ
- ಇದರಿಂದ ಅಥೆನ್ಸ್–ಸ್ಪಾರ್ಟಾ ಮಧ್ಯ ವೈರತ್ವ ಉಂಟಾಯಿತು.
- ಈ ಎರಡು ಗಣರಾಜ್ಯಗಳ ನಡುವೆ "ಪೆಲೋಪೊನೀಷಿಯನ್ ಕದನ" ಜುಗಿತು
- ಉದರಲ್ಲಿ ಅಥೆನ್ಸ್ ಸೋತು ಸ್ಪಾರ್ಟಾದ ಅಧೀನ ರಾಜ್ಯವಾಯಿತು
- ಆದರೆ ಅಥೆನ್ಸ್ ಸಾಂಸ್ಕೃತಿಕವಾಗಿ ಪ್ರಗತಿ ಕಂಡಿತು.
- ಸಾ.ಶ.ಪೂ 5ನೇ ಶತಮಾನದಲ್ಲಿ ಪರ್ಶಿಯಾನ್ನರ ಆಕ್ರಮಣದಿಂದ ಗ್ರೀಕ್ ನಾಗರಿಕತೆ ಅವನತಿ

**ಧರ್ಮ:–**

- ಗ್ರೀಕ್ ದೇವರು ಮಾನವರಂತೆ ಆಸೆ ಹೊಂದಿದ್ದರು
- ಈ ದೇವತೆಗಳು ಒಲಂಪಸ್ ಪರ್ವತದ ಮೇಲೆ ವಾಸ
- ಜ್ಯೂಸ್ ಪ್ರಮುಖ ದೇವರು
- ಇವನ ಪತ್ನಿ ಹೀರಾ
- ಅಪೊಲೊ, ಅಫ್ರೋಡೈಟ್, ಅಥೆನಾ, ಅರಿಸ್ ಇತ್ಯಾದಿ ದೇವತೆಗಳಿದ್ದರು
- ಅಥೆನಾ ಅಥೆನ್ಸ್‌ನ ನಗರ ದೇವತೆಯಾಗಿತ್ತು
- ಒಲಂಪಿಯಾದಲ್ಲಿ ಜ್ಯೂಸ್‌ನ ದೇವಾಲಯವಿದೆ.
- ಇಲ್ಲಿ ಪ್ರಾಚೀನ ಒಲಂಪಿಕ್ ಕ್ರೀಡೆಗಳು ನಡೆಯುತ್ತಿತ್ತು.

RAMALINGAPPA L Asst. Teacher

**ಶಿಕ್ಷಣ & ಸಾಹಿತ್ಯ:–**

- ಶ್ರೇಷ್ಠ ಗುರು ಪರಂಪರೆ ಇತ್ತು:– ಸಾಕ್ರಟೀಸ್–ಪ್ಲೇಟೋ–ಅರಿಸ್ಟಾಟಲ್–ಅಲೆಗ್ಸಾಂಡರ್
- ಪ್ಲೇಟೋ ಅಕಾಡಮಿ ಶೈಕ್ಷಣಿಕ ಸಂಸ್ಥೆ ಸ್ಥಾಪನೆ
- ಅರಿಸ್ಟಾಟಲ್ ಲೀಸಿಯಂ ಶೈಕ್ಷಣಿಕ ಸಂಸ್ಥೆ ಆರಂಭ
- ಡೆಮೊಸ್ತೆನಿಸ್ ಉತ್ತಮ ಭಾಷಣಕಾರ
- ಹೋಮರ್:– ಈಲಿಯಡ್ & ಒಡಿಸ್ಸಿ ಎಂಬ ಮಹಾಕಾವ್ಯ ರಚನೆ
- ಹೆರೋಡೊಟಸ್ & ಥುಸಿಡೈಡಿಸ್ ಪ್ರಸಿದ್ಧ ಇತಿಹಾಸಕಾರರು
- ಈಸ್ಕಿಲಸ್, ಸೊಪೋಕ್ಲಿಸ್, ಯರಿಪಿಡಿಸ್ ಪ್ರಸಿದ್ಧ ನಾಟಕಕಾರರು
- ಸೊಪೋಕ್ಲಿಸ್‌ನು ಇಡಿಪಸ್ & ಅಂತಿಗೋನೆ ನಾಟಕ ರಚನೆ

**ಕಲೆ & ವಾಸ್ತುಶಿಲ್ಪ:–**

- ಗ್ರೀಕ್‌ನಲ್ಲಿ ಗುಲಾಮಗಿರಿ ಸರ್ವವ್ಯಾಪಿಯಾಗಿತ್ತು
- ಗ್ರೀಕರು ಲೈರ್ ಎಂಬ ತಂತಿ ವಾದ್ಯದಿಂದ ಹಾಡುತ್ತಿದ್ದರು
- ಪೆರಿಕ್ಲಿಸ್‌ನು ಅಥನ್ಸ್‌ನ 'ಪಾರ್ಥಿನಾನ್ ದೇವಾಲಯ'ವನ್ನು ಅಮೃತಶಿಲೆಯಲ್ಲಿ ನಿರ್ಮಿಸಿದನು.
- ಚಕ್ರವೆಸೆಯುವ ಡಿಸ್ಕೋಬಲಸ್ ಶಿಲ್ಪವನ್ನು ಮೈರನ್ ಕಡೆದಿದ್ದಾರೆ.
- ಪಾಲಿಗ್ನಾಟಸ್ ಪ್ರಮುಖ ಚಿತ್ರಕಾರನಾಗಿದ್ದನು.

**ವಿಜ್ಞಾನ :–**

- ಥೇಲ್ಸ್, ಪೈಥಾಗರಸ್ ಗಣಿತದ ದಿಗ್ಗಜರು
- ಅಣುಸಿದ್ಧಾಂತ– ಡೆಮಾಕ್ರಿಟಸ್ ಪ್ರತಿಪಾಧನೆ
- ಮೀನಿನಿಂದ ಮಾನವ ಎಂಬ ವಿಕಾಸವಾದತತ್ವವನ್ನು ಅನಾಕ್ಸಿಮಿಂಡರ್ ಪ್ರತಿಪಾದನೆ
- ರೋಗಿಗಳಿಗೆ ವೈಜ್ಞಾನಿಕ ಔಷಧಿಯನ್ನು ಹುಡುಕಿ ಸಾಧನೆ ಮಾಡಿದರು
- ವೈದ್ಯಶಾಸ್ತ್ರದ ಪಿತಾಮಹ–ಹಿಪ್ಪೋಕ್ರಿಟಸ್

**ಕ್ರೀಡೆ:–**

- ಇವರು ದೈಹಿಕ ವಿಕಾಸಕ್ಕೂ ಆದ್ಯತೆ ನೀಡಿದ್ದರು
- ಗ್ರೀಕರಲ್ಲಿ ಕ್ರೀಡೆಗೆ ವಿಶೇಷ ಮಾನ್ಯತೆ ಇತ್ತು.
- ಸಮಾಜದಲ್ಲಿ ಕ್ರೀಡಾಪಟುಗಳಿಗೆ ವಿಶೇಷ ಗೌರವವಿತ್ತು.
- ಇಲ್ಲಿ ವಿಶೇಷವಾಗಿ ಒಲಂಪಿಕ್ ಕ್ರೀಡೆಗಳು ನಡೆಯುತ್ತಿದ್ದವು
- ಒಲಂಪಿಕ್ ಕ್ರೀಡೆಗಳು 2750 ವರ್ಷಗಳ ಹಿಂದೆ ನಡೆದಿತ್ತು.
- ಇದರಲ್ಲಿ ಎಲ್ಲಾ ನಗರ ರಾಜ್ಯಗಳು ಪಾಲ್ಗೊಳ್ಳುತ್ತಿದ್ದವು.

**ಒಲಂಪಿಕ್ ಆರಂಭ:–**

- ಮ್ಯಾರಾಥಾನ್ ಕದನದಲ್ಲಿ ಗ್ರೀಕರು ಗೆದ್ದರು
- ಈ ವಿಜಯದ ಸುದ್ಧಿ ಮುಟ್ಟಿಸಲು 24 ಮೈಲಿ ದೂರದ ಅಥೆನ್ಸ್‌ಗೆ ಪೈಡಸ್ ಎಂಬ ಸೈನಿಕ ಓಡಿಬಂದನು.
- ಇವನು ವಿಜಯದ ಸುದ್ಧಿಯನ್ನು ಮುಟ್ಟಿಸಿ ಕುಸಿದು ಸತ್ತನು.
- ಇದರ ಸ್ಮರಣಾರ್ಥ ಒಲಂಪಿಕ್‌ನಲ್ಲಿ ಮ್ಯಾರಾಥಾನ್ ಓಟ ಸೇರಿಸಲಾಗಿದೆ.
- ಗ್ರೀಕ್‌ನ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮ್ಯಾಸಿಡೋನಿನ ದೊರೆ ಫಿಲಿಪ್ ನಾಶಪಡಿಸಿದನು
- ಅಖಂಡ ಗ್ರೀಕ್‌ನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಂಡನು.
- ಇವನ ಮಗನೇ ಅಲೆಗ್ಸಾಂಡರ್
- ಇವನ ಗುರು ಅರಿಸ್ಟಾಟಲ್
- ಇವನು ಜಗತ್ತನ್ನು ಗೆಲ್ಲುವ ದಂಡಯಾತ್ರೆ ಕೈಗೊಂಡನು.
- ಈಜಿಪ್ಟ್, ಬ್ಯಾಬಿಲನ್, ಪರ್ಶಿಯಾ ಗೆದ್ದನು
- ಭಾರತಕ್ಕೆ ದಾಳಿ ಮಾಡಿ ಹಿಂತಿರುಗಿಸಿದನು.
- ಈಜಿಪ್ಟ್‌ನಲ್ಲಿ ಅಲೆಗ್ಸಾಂಡ್ರಿಯಾ ನಗರ ಕಟ್ಟಿಸಿದನು.

## ರೋಮ್ ನಾಗರಿಕತೆ

- ಮೆಡಿಟರೇನಿಯನ್ ಸಮುದ್ರದಲ್ಲಿ ಚಾಚಿಕೊಂಡ ಪರ್ಯಾಯ ದ್ವೀಪ ಇಟಲಿ
- ಇಲ್ಲಿನ ಟೈಬರ್ ನದಿ ದಡದಲ್ಲಿ ರೋಮ್ ನಗರವಿದೆ.
- ಅಪೆನ್ನೈನ್ ಪರ್ವತ & ಸಮುದ್ರ ನಡುವೆ ಲ್ಯಾಟಿನ್ನ ಬುಡಕಟ್ಟು ವಾಸ
- 2700 ವರ್ಷ ಹಿಂದೆ ಟೈಬರ್ ನದಿ ದಡದಲ್ಲಿ ರೋಮ್ ಜನವಸತಿ ಪ್ರದೇಶ ಹುಟ್ಟು
- ರೋಮನ್ ಪುರಾತನ ವಂಶಿಕರನ್ನು ಪೇಟ್ರಿಷಿಯನ್ನ ಎನ್ನುವರು
- ಪೇಟ್ರಿಷಿಯನ್ ಎಂಬ ಲ್ಯಾಟಿನ್ ಪದ ಪಾಟೆರ್(ಪಿತೃ) ದಿಂದ ಬಂದಿದೆ
- ರೋಮನ್ನರ ಮೂಲ ಪುರುಷ ರೋಮುಲಸ್ & ರೀಮಸ್

**ಆಡಳಿತ:–**

- ರೋಮ್ ರಾಜ್ಯಾಡಳಿತಕ್ಕೆ ಒಳಪಟ್ಟಿತ್ತು
- ಇವರಿಗೆ 'ಅಸೆಂಬ್ಲಿ & ಸೆನೆಟ್' ಎಂಬ ಸಲಹಾ ಸಂಸ್ಥೆಯಿತ್ತು.
- ಅಸೆಂಬ್ಲಿ – ಮಧ್ಯವಯಸ್ಸಿನ ಪುರುಷರನ್ನು ಹೊಂದಿತ್ತು.
- ಸೆನೆಟ್ – ಪ್ರತಿಷ್ಟಿತರ ಸಭೆಯಾಗಿತ್ತು. ಇದು ಪ್ರಭಾವಿ ಸಂಸ್ಥೆ
- ಅಸೆಂಬ್ಲಿ ರಾಜನ ಪ್ರಸ್ತಾಪವನ್ನು ಸೆನೆಟ್ ತಿರಸ್ಕರಿಸುತ್ತಿತ್ತು.
- ಇಲ್ಲಿ ಸಾ.ಶ.ಪೂ 6ನೇ ಶತಮಾನದಲ್ಲಿ ಗಣರಾಜ್ಯ ಸ್ಥಾಪನೆ

RAMALINGAPPA L Asst. Teacher

- ರೋಮ್ ಗಣರಾಜ್ಯದಲ್ಲಿ ಅಸೆಂಬ್ಲಿ & ಸೆನೆಟ್‌ಗಳು ಮುಂದುವರೆದವು
- ಸದಸ್ಯರು ಕಾನೂನು ಮತ್ತು ನ್ಯಾಯಾವನ್ನು ನಿಭಾಯಿಯಸುತ್ತಿದ್ದರು.

**ಸಮಾಜ:–**

- ಸಮಾಜದಲ್ಲಿ ಪೇಟ್ರಿಷಿಯನ್ನರು & ಪ್ಲೇಬಿಯನ್ನರು ಎಂಬ ಎರಡು ವರ್ಗ

**ಪೇಟ್ರಿಷಿಯನ್ನರು:–**

1) ಸಮಾಜದ ಪ್ರತಿಷ್ಠಿತರು
2) ಮೇಲುವರ್ಗದವರು
3) ಭೂಮಾಲೀಕರು
4) ಸೆನೆಟ್‌ನ್ನು ನಿಯಂತ್ರಿಸುತ್ತದ್ದರು

**ಪ್ಲೇಬಿಯನ್ನರು:–**

1) ಸಾಮಾನ್ಯ ಜನರು
2) ಕೆಲಸಗಾರರು
3) ಸಣ್ಣ ಭೂ ಹಿಡುವಳಿದಾರರು
4) ಕುಶಲಕರ್ಮಿಗಳು
5) ಸಣ್ಣ ವ್ಯಾಪಾರಿಗಳು
6) ಸೈನಿಕರು

- ಇವರ ಹಕ್ಕುಗಳು ಸೀಮಿತವಾಗಿದ್ದವು
- ತೆರಿಗೆ ಪಾವತಿಸುವುದು
- ಶಿಕ್ಷೆಗೆ ಒಳಗಾಗುತ್ತಿದ್ದರು
- ಸಾ.ಶ.ಪೂ 5ನೇ ಶತಮಾನದಲ್ಲಿ ಈ ವ್ಯವಸ್ಥೆ ವಿರುದ್ಧ ದಂಗೆಯೆದ್ದರು
- ಆಗ ಪೇಟ್ರಿಷಿಯನ್ನರು ಅವರಿಗೆ ಕೆಲವು ರಿಯಾಯಿತಿಗಳನ್ನು ನೀಡಿದರು
- ಪ್ಲೇಬಿಯನ್ನರು ಟ್ರಿಬ್ಯೂನ್‌ಗಳ ಸದಸ್ಯರ ಆಯ್ಕೆಯಲ್ಲಿ ಹಕ್ಕು ಪಡೆದರು
- ಆಗ ರೋಮನ್‌ಲಾ ಎಂಬ ಕಾನೂನು ಜಾರಿ
- ಇದು ಪ್ರಜೆಗಳ ಹಕ್ಕುಗಳನ್ನು ಪ್ರತಿಪಾದಿಸಿತು.

**ಫ್ಯೂನಿಕ್ ಯುದ್ಧಗಳು:–**

- ಪ್ರದೇಶ ವಿಸ್ತರಣೆ ರೋಮನ್ನರನ್ನು ಸಂಘರ್ಷಕ್ಕೆ ದಾರಿ
- ಇವರು ಆಫ್ರಿಕಾದ ಕಾರ್ಥೇಜ್ ನಗರದ ಜೊತೆ ಕಾದಾಡಿದರು
- ಸಿಸಿಲ್ಲಿ ಎಂಬ ಫಲವತ್ತಾದ ಪ್ರದೇಶ ಪಡೆಯಲು 118 ವರ್ಷ ಯುದ್ಧ ನಡೆಯಿತು.
- ಇವೇ ಫ್ಯೂನಿಕ್ ಯುದ್ಧಗಳು
- ಇದರಲ್ಲಿ ಕಾರ್ಥೇಜೆಯನ್ನರು ಸೋತು ರೋಮನ್ನರು ಗೆದ್ದರು
- ಇದರಲ್ಲಿ ರೋಮನ್ನರು ಗ್ರೀಸ್, ಏಷ್ಯಾ, ಈಜಿಪ್ಟಿನ ಪ್ರದೇಶ ಪಡೆದರು
- ಈ ಆಕ್ರಮಣ & ವಿಜಯದಿಂದ ರೋಮ್ ಸಿರಿವಂತ ಪ್ರದೇಶವಾಯಿತು.
- ರೋಮ್ ಬಂಗಾರ & ಗುಲಾಮರನ್ನು ಗಳಿಸಿತು.
- ಗುಲಾಮರಿಗೆ ನಾಗರಿಕ ಹಕ್ಕಿರಲಿಲ್ಲ
- ಇವರು ತಮ್ಮ ಯಜಮಾನರ ಖಾಸಗಿ ಆಸ್ತಿಯಾದರು
- ಗುಲಾಮರನ್ನು ಮಾರಾಟಕ್ಕೆ ಇಡುತ್ತಿದ್ದರು
- ಇವರು ಕೆಲವೊಮ್ಮೆ ಸ್ವಾತಂತ್ರ ಪಡೆದಿದ್ದು ಇದೆ.
- ರೋಮನ್ನರು ಗುಲಾಮರನ್ನು ಗ್ಲ್ಯಾಡಿಯೇಟರ್‌ಗಳಾಗಿ ಬಳಸುತ್ತಿದ್ದರು
- ಗ್ಲ್ಯಾಡಿಯೇಟರ್‌ಗಳ ಸೆಣಸಾಟವನ್ನು ಎಂಪಿಥಿಯೇಟರ್‌ನಿಂದ ವಿಕ್ಷಣೆ
- ಇಲ್ಲಿ ಬಹುತೇಕ ಗುಲಾಮರು ತಮ್ಮ ಪ್ರಾಣ ಕಳೆದುಕೊಳ್ಳುತ್ತಿದ್ದರು
- ರೋಮನಲ್ಲಿ ಅರಾಜಕತೆ ಉಂಟಾಯಿತು.
- ದಂಗೆ ಎದ್ದರು

**ಜೂಲಿಯಸ್ ಸೀಸರ್:–**

- ರೋಮನಲ್ಲಿ ಕ್ರಾಸಸ್–ಪಾಂಪೆ–ಜೂಲಿಯಸ್‌ರನ್ನು ಒಳಗೊಂಡ ಮೊದಲ ತ್ರಿಮೂರ್ತಿ ಆಡಳಿತ ಆರಂಭ
- ಜೂಲಿಯಸ್ – ಫ್ರಾನ್ಸ್ & ಇಂಗ್ಲೆಂಡ್ ಗೆದ್ದನು
- ಪಾಂಪೆ – ಸಿರಿಯಾ & ಟರ್ಕಿ ಗೆದ್ದನು
- ಕ್ರಾಸಸ್ – ಪಾರ್ಥಿಯವನ್ನು ಗೆದ್ದನು
- ನಗರ ರಾಜ್ಯವಾದ ರೋಮ್ ಇವರಿಂದ ಸಾಮ್ರಾಜ್ಯವಾಯಿತು.
- ತನ್ನ ಪ್ರತಿಸ್ಪರ್ಧಿಯಾದ ಪಾಂಪೆಯನ್ನು ಜೂಲಿಯಸ್ ಕೊಂದನು
- ಈಜಿಪ್ಟ್‌ನ ರಾಣಿ ಕ್ಲಿಯೋಪಾತ್ರಳ ಪ್ರೀತಿಗಳಿಸಿದನು
- ಜೂಲಿಯಸ್ ತನ್ನನ್ನು 'ಡಿಕಟೇಟರ್(ಸರ್ವಾಧಿಕಾರಿ)' ಎಂದು ಕರೆದುಕೊಂಡನು
- ಇವನು ರೋಮ್ ಗಣರಾಜ್ಯವನ್ನು ಶಿಥಿಲಗೊಳಿಸಿದನು.
- ಆಗ ಜೂಲಿಯಸ್ ಹತ್ಯೆಗೆ ಗುರಿಯಾದನು.
- ಇಲ್ಲಿ ಕೃಷಿ, ಕೈಗಾರಿಕೆ ಮತ್ತು ವ್ಯಾಪಾರ ಪ್ರಗತಿ ಕಂಡಿತು.
- ಜ್ಯೂಲಿಯಸ್ ಪಂಚಾಂಗ ಜಾರಿ



RAMALINGAPPA L Asst. Teacher

**ಅಗಸ್ಟ್ಸ್ ಸೀಸರ್:–**

- ❖ ಮೊದಲ ಹೆಸರು:– ಆಕ್ಟೇವಿಯಸ್
- ❖ ಅಗಸ್ಟಸ್–ಮಾರ್ಕ್ಆಂಟೋನಿ–ಲೆಪಿಡಸ್ ಎಂಬ 2ನೇ ತ್ರಿಮೂರ್ತಿ ಆಡಳಿತ ಆರಂಭ.
- ❖ ಅಗಸ್ಟಸ್ ಲೆಪಿಡಸ್ಸ್‌ನನ್ನು ಓಡಿಸಿ ಆಂಟೋನಿ ಜೊತೆ ಅಧಿಕಾರ ಹಂಚಿಕೆ
- ❖ ಆಂಟೋನಿಯು ಕ್ಲಿಯೋಪಾತ್ರಳ ಜೊತೆ ಸೇರಿದ್ದರಿಂದ
- ❖ ಇವನನ್ನು ಅಗಸ್ಟಸ್‌ನು ಆಕ್ಟೇವಿಯಂ ಕದನದಲ್ಲಿ ಸೋಲಿಸಿದನು.
- ❖ ಕೊನೆಗೆ ಆಂಟೋನಿ & ಕ್ಲಿಯೋಪಾತ್ರ ಆತ್ಮಹತ್ಯೆ ಮಾಡಿಕೊಂಡರು
- ❖ ಆಗ ಅಗಸ್ಟಸ್ 'ಇಂಪರೇಟರ್' ಎಂಬ ಬಿರುದು ಪಡೆನು
- ❖ ರೋಮ್‌ನ ಸರ್ವಾಧಿಕಾರಿಯಾದನು
- ❖ ಇವನ ಕಾಲವನ್ನು ರೋಮ್‌ನಲ್ಲಿ ಸುವರ್ಣಯುಗ ಕಂಡಿತು
- ❖ ರೋಮ್ ಅನ್ನು ಅಮೃತ ಶಿಲೆಯಿಂದ ನಿರ್ಮಿಸಿದನು
- ❖ ರೋಮ್ ಆರ್ಥಿಕ, ಸಾಂಸ್ಕೃತಿಕ ಪ್ರಗತಿ ಕಂಡಿತು.
- ❖ ಒಡೊಸರ್ ಎಂಬ ಜನಾಂಗದಿಂದ ರೋಮ್ ನಾಶವಾಯಿತು.

**ಸಾಹಿತ್ಯ:–**

- ○ ವರ್ಜಿಲ್ ರೋಮ್‌ನ ಶ್ರೇಷ್ಠ ಕವಿ
- ○ ಈನಿಯನ್ ಇವನ ಮಹಾಕಾವ್ಯ
- ○ ಒವಿಡ್‌ನು ಮೆಟಮಾಫಿಸಿಸ್ ಕೃತಿ ರಚನೆ
- ○ ಸಿಸಿರೋ, ಪ್ಲೌಟಸ್, ಟಾರೆನ್ಸ್ ಖ್ಯಾತ ಕವಿಗಳು
- ○ ಜೂಲಿಯಸ್ ಒಳ್ಳೆಯ ಇತಿಹಾಸಕಾರ ಇವನು ಗಾಲಿಕ್ ಯುದ್ಧಗಳ ಬಗ್ಗೆ ಕೃತಿ ರಚನೆ
- ○ ಲಿವಿ, ಟಾಸಿಟಸ್ ಪ್ರಸಿದ್ಧ ಇತಿಹಾಸಕಾರರು

**ತತ್ವಜ್ಞಾನ:–**

- ➢ ಕ್ಯಾಟೋ ಇವನು ಪಶ್ಚಿಮದ ಸಾಕ್ರಟಿಸ್ ಎಂದು ಪ್ರಸಿದ್ಧನಾಗಿದ್ದ
- ➢ ಸಿಸಿರೋ, ಸೆನೆಕಾ, ಚಕ್ರವರ್ತಿ ಮಾರ್ಕಸ್ ಅರಿಲಿಯಸ್‌ರು 'ಸ್ಟೋಯಿಕ್‌ತತ್ವ' ಪ್ರತಿಪಾದನೆ
- ➢ ಅಂದರೆ "ನಿಸರ್ಗದೊಂದಿಗೆ ಹೊಂದಿಕೊಮಡು ಬಾಳು" ಎಂದರ್ಥ

**ಕಲೆ & ವಾಸ್ತುಶಿಲ್ಪ:–**

- ▪ ಕಲೋಸಿಯಂ & ಎಂಪಿಥಿಯೇಟರ್ ಉದಾಹರಣೆ
- ▪ ಪ್ಯಾಂಥಯೊನ್ ರೋಮ್‌ನ ವಿಶಾಲ ಕಟ್ಟಡ ಗೊಮ್ಮಟ
- ▪ ಕ್ಯುಪಿಡ್ ಪ್ರತಿಮೆ
- ▪ ಅರಾ ಪೆಸಿಸ್ ಶಿಲ್ಪಗಳು

**ವಿಜ್ಞಾನ:–**

- ❖ ಹಿರಿಯ ಪ್ಲಿನಿ – ನ್ಯಾಚುರಲ್ ಹಿಸ್ಟರಿ(ವಿಶ್ವಕೋಶ)
- ❖ ಸೇಜೆರಿಯನ್ & ಕಣ್ಣುಪೊರೆ ಶಸ್ತ್ರಚಿಕಿತ್ಸೆ ಬಗ್ಗೆ
- ❖ ಗ್ಯಾಲನ್ – ತಜ್ಞ ವೈದ್ಯ
- ❖ ಸ್ಟ್ರಾಬೋ, ಟಾಲೆಮಿ – ಖ್ಯಾತ ಭೂಗೋಳ ತಜ್ಞರು

## ಅಮೇರಿಕಾ ನಾಗರಿಕತೆ

- ➢ ಪ್ರಾಚೀನ ಕೊಲಂಬಿಯಾ ನಾಗರಿಕತೆಗಳು:– ಮಾಯಾ, ಆಸ್ಟೆಕ್, ಇಂಕಾ
- ➢ ಅಮೇರಿಕಾದಲ್ಲಿನ ಇಂಡಿಯಾನ್ ಮೂಲನಿವಾಸಿಗಳ ಸಂಸ್ಕೃತಿಯನ್ನು ಸೂಚಿಸುತ್ತದೆ.
- ➢ ಹೊಸ ಭೌಗೋಳಿಕ ಅನ್ವೇಷಣೆಯ ಸಂದರ್ಭದಲ್ಲಿ ಅಮೇರಿಕಾ & ಆಸ್ಟ್ರೇಲಿಯಾವನ್ನು ಭಾರತ ಎಂಉ ಕರೆದರು.
- ➢ ಇಲ್ಲಿನ ಜನರನ್ನು ಇಂಡಿಯನ್ನರು ಕರೆದರು
- ➢ ಆದ್ದರಿಂದ ಅಮೇರಿಕಾ ಆಸ್ಟ್ರೇಲಿಯಾ ಮೂಲನಿವಾಸಿಗಳು ಇಂಡಿಯನ್ನರೆಂದು ಕರೆಸಿಕೊಂಡರು
- ➢ ಹಳೆಯ ಜಗತ್ತು & ಹೊಸ ಜಗತ್ತು ಎಂದು ವಿಂಗಡಣೆ
- ➢ ಹಳೆಯ ಜಗತ್ತಿನ ನಾಗರಿಕತೆಗಳು:– ಈಜಿಪ್ಟ್, ಮೆಸಪಟೋಮಿಯ, ಚೀನಾ, ಹರಪ್ಪಾ
- ➢ ಹೊಸ ನಾಗರಿಕತೆ:– ಗ್ರೀಕ್, ರೋಮ್, ಅಮೇರಿಕಾ ನಾಗರಿಕತೆ

**ಆರಂಭಿಕ ಬದುಕು:–**

- ❖ ಇವರ ಬದುಕು ಸ್ಥಿರಗೊಂಡಿದ್ದು ಸಾ.ಶಪೂ 1500
- ❖ ಜೋಳ, ಕಾಳು, ಹಣ್ಣು, ಮೆಣಸು ಹತ್ತಿ ಬೆಳೆಯುತ್ತಿದ್ದರು
- ❖ ಆರಂಭಿಕ ಹಳ್ಳಿಗರು ನವಶಿಲಾಯುಗದ ತಿಳಿಯನ್ನು ಪಡೆದಿದ್ದರು.
- ❖ ಸಾ.ಶ.ಪೂ 1200–900 ರಲ್ಲಿ ಪಿರಮಿಡ್ & ಸ್ಮಾರಕಗಳ ನಿರ್ಮಾಣದ ವೇಳೆಗೆ ಬದುಕಿನಲ್ಲಿ ಬದಲಾವಣೆಯಾದವು
- ❖ ಈ ಬದಲಾವಣೆಗಳು ಮೆಕ್ಸಿಕೋದಲ್ಲಿ ಮೊದಲು ಕಾಣಿಸಿಕೊಂಡವು.
- ❖ ಇಲ್ಲಿನ ಪ್ರತಿಮೆಗಳು ಮುಖ್ಯಸ್ಥರು–ರಾಜರನ್ನು ಚಿತ್ರಿಸುವೆ.
- ❖ ಇವುಗಳನ್ನು ಒಲ್‌ಮೆಕ್ ಎಂದು ಕರೆದಿದೆ.
- ❖ ಇಲ್ಲಿ ಕೇಂದ್ರೀಕೃತ ಸಮಾಜ ವ್ಯವಸ್ಥೆಯಿತ್ತು.
- ❖ ಈ ಪ್ರದೇಶದ ಸುತ್ತ ರಾಜಧಾನಿ ನಗರಗಳು ಬೆಳೆದವು
- ❖ ಇವರಲ್ಲಿ ಐಕ್ಯತೆಮೂಡಿತು.

RAMALINGAPPA L Asst Teacher

**ಮಾಯಾ ನಾಗರಿಕತೆ:-**

- ಮೆಕ್ಸಿಕೊದ ಯುಕಟೆನ್ ಪ್ರದೇಶ ನಿವಾಸಗಳು.
- ಇವರ ಭಾಷೆ ಯುಕಟೆಕ್.
- ದೈಹಿಕವಾದ ಲಕ್ಷಣಗಳು:-
  1) ಗಿಡವಾಗಿದ್ದರು
  2) ಕಂದುಬಣ್ಣ
  3) ನೇರಕೂದಲು
  4) ಗುಂಡನೆಯ ತಲೆ
- ಪ್ರಾಚೀನ ಅಮೇರಿಕಾದ ಇಂಡಿಯನ್ನರಲ್ಲಿ ಅಭಿವೃದ್ಧಿ ಹೊಂದಿದವರು- ಮಾಯಾಗಳು
- ಕಲ್ಲಿನ ಅವಶೇಷಗಳು ಯುಕಟೆನ್, ಗ್ವಾಟೆಮಾಲ, ಹೊಂಡುರಸಗಳಲ್ಲಿ ದೊರೆತಿವೆ.
- ಇಲ್ಲಿನ ಮೊದಲ ನಗರಗಳು ಸಾ.ಶ.320 ರಲ್ಲಿ ನಿರ್ಮಾಣ.
- ಸಾಶ.ಪೂ. 1527 ರಿಂದ 1546 ವರೆಗೆ ಕೊರ್ಟೆಜ್ ನೇತೃತ್ವದಲ್ಲಿ ನಡೆದ ಸ್ಪೇನಿಯರ ಆಕ್ರಮಣದಿಂದ ಮಾಯಾ ಸಂಸ್ಕೃತಿ ನಾಶ.

**ಮಾಯಾ ಜನರ ಬದುಕು:-**

- ಇವರ ನೆಲೆಸು ನಾಡುಗಳು ಬೃಹತ್ ಆಚರಣೆ ಕೇಂದ್ರಗಳು
- ಧಾರ್ಮಿಕ ಆಚರಣೆ, ಸಂತೆ, ನ್ಯಾಯಾಲಯ, ನಾಗರಿಕ ಆಡಳಿತಕ್ಕೆ ಬಳಕೆ.
- ಇದರ ಸುತ್ತಲಿನ ಗ್ರಾಮಗಳಲ್ಲಿ ಜನರ ವಾಸ.
- ತಿಕಲ್ ನಲ್ಲಿ ಪಿರಮಿಡ್, ಅರಮನೆ ಕಂಡುಬರುತ್ತವೆ.
- ಇವುಗಳ ಎದುರಿಗೆ ಬೃಹತ್ ಶಿಲಾಕಂಬಗಳು, ಇದ್ದವು.
- ಇದರಲ್ಲಿ ದೇವರ, ಪುರೋಹಿತರ, ಗಣ್ಯವ್ಯಕ್ತಿಗಳ ಚಿತ್ರಗಳಿದ್ದವು.
- ಹಿರೋಗ್ಲೈಫಿಕ್ ಪಠ್ಯ ಕೆತ್ತಲಾಗಿತ್ತು.
- ಈ ಕಲ್ಲಿನಾಕೃತಿಯನ್ನು ಸ್ಟೆಲಿಸ್ ಎನ್ನುವರು.
- ಇಲ್ಲಿನ ಸುತ್ತ, ಜೋಳ, ಗೆಣಸು ಬೆಳೆಯುತ್ತಿದ್ದರು.

**ಬೌದ್ಧಿಕ ಸಾದನೆ:-**

- ಬರವಣಿಗೆ, ಖಗೋಳಶಾಸ್ತ್ರ, ಕಾಲಗಣನೆಯಲ್ಲಿ ಕಾಣಬಹುದು.
- ಇವರ ಬರವಣಿಗೆ ವೈಚಾರಿಕ ಸಂಕೇತಗಳು ಮತ್ತು ಶಬ್ದಗಳನ್ನು ಆಧರಿಸಿದೆ.
- ಇವು 850 ಅಂಶಗಳನ್ನು ಹೊಂದಿದೆ
- ಇವುಗಳ ಅರ್ಥ ತಿಳಿದಿಲ್ಲ.
- ಬರವಣಿಗೆಯನ್ನು ಕಲ್ಲಿನಸ್ಮಾರಕ, ಕಟ್ಟಡ, ಮರದತುಂಡು, ಪುಸ್ತಕಗಳಲ್ಲಿ ಬರೆದಿವೆ.
- ಇವು ಸ್ಪೇನಿನ ಆಕ್ರಮಣದಿಂದ ನಾಶವಾಗಿದೆ.
- ಡ್ರೆಸ್‌ಡೆನ್ ಕೊಡೆಕ್ಸ್ ಗ್ರಹಣಗಳ ದಿನಾಂಕ ತಿಳಿಯಲು ಬಳಕೆ.
- ಇಲ್ಲಿ ಲೋಹದ ಬಳಕೆ ಕಂಡುಬಂದಿಲ್ಲ.
- 16ನೇ ಶತಮಾನದ ಆರಂಭದಲ್ಲಿ ತಾಮ್ರ- ಬಂಗಾರ ವಿರಳವಾಗಿತ್ತು.
- ಕಲ್ಲು, ಎಲುಬು, ಮರದ ಉಪಕರಣ ಬಳಕೆ.
- ಇವರಿಗೆ ಬಿಲ್ಲುಬಾಣದ ಅರಿವು ಇರಲಿಲ್ಲ.
- ಜೋಳದ ಬಳಕೆಗೆ ಸಂಬಂಧಿಸಿದ ದೇವರು ಆರಾಧ್ಯದೈವ.
- ಇಲ್ಲಿ ನರಬಲಿ ವಿರಳವಾಗಿತ್ತು.

**ಆಸ್ಟೆಕ್ ನಾಗರಿಕತೆ :-**

- ಮೆಕ್ಸಿಕೋದ ಟೆಕ್ಸಿಕೊ ಸರೋವರದ ದ್ವೀಪದಲ್ಲಿ ನಗರ ನಿರ್ಮಾಣ.
- ಇವರ ಟೆನೋಚ್ ನ ಹೆಸರಿನ ಹಿನ್ನೆಲೆಯಲ್ಲಿ ಟೆನೋಚರೆಂದು ಕರೆದರು.
- ಇವರು ನಿರ್ಮಿಸಿದ ನಗರ ಟೆನೊಟಟ್‌ಲಾನ್ (ನೀರಿನಿಂದ ಉದಯಿಸುವ ಕಲ್ಲು)
- ಈ ನಗರವನ್ನು ಮೆಕ್ಸಿಕ ಎಂದು ಕರೆಯುವರು.
- ಇವರ ಭಾಷೆ- ನಹೂವಾ.
- ಇವರು ವ್ಯಾಪಾರ ಸಾಮ್ರಾಜ್ಯವನ್ನು ಹೊಂದಿದ್ದರು.
- ಇವರ ಜೀವನ ಮೌಖಿಕ ಪರಂಪರೆ ಮತ್ತು ಉತ್ಖನನದಲ್ಲಿ ಕಂಡುಬರುತ್ತದೆ.
- ಈ ಮೌಖಿಕ ಪರಂಪರೆಯನ್ನು ಇಂಡಿಯನ್ ಕೊಡೈಸಸ್ ಎನ್ನುವರು.

**ಸ್ಪೇನ್ ದಾಳಿ:-**

- 1519 ರಲ್ಲಿ ಸ್ಪೇನ್ ಸೇನೆ ಮೆಕ್ಸಿಕೋ ಪ್ರವೇಶಿಸಿದವು.
- ಸುಂದರ ದ್ವೀಪ ಸೇನೆಯ ಕಣ್ಣಿಗೆ ಬಿತ್ತು.
- ಅದೇ ರಾಜಧಾನಿ ಟೆನೊಟಿಟ್‌ಲಾನ್.
- ಇದು ಅಧಿಕಾರ ಮತ್ತು ಸಂಪತ್ತಿನ ದ್ಯೊತಕವಾಗಿ ಬೆಳೆದಿತ್ತು.
- ಸ್ಪೇನ್ ಸೇನೆಗೆ 3 ದಾರಿ ಕಂಡವು.
- ಅರಮನೆಗೆ ಹೋಗುವ ದಾರಿ.
- ದೇವಾಲಯಕ್ಕೆ ಹೋಗುವದಾರಿ.
- ಇವೆಲ್ಲಾ ಸ್ಪೇನ ಆಕ್ರಮಣಕ್ಕೆ ಗುರಿಯಾದವು.

**ಬದುಕು :-**

- ಅಲೆಮಾರಿ ಜನರು.

RAMALINGAPPA L Asst. Teacher

- ಇವರು ಬುಡಕಟ್ಟುಗಳೊಂದಿಗೆ ಕಾದಾಡಿದರು.
- ಇಲ್ಲಿನ ಟೋಲ್‌ಟೆಕ್ಕರ, ಮಾಯಾಜನ, ಜೆಪೊಟೆಕ್ಕರನ ಸಂಸ್ಕೃತಿ ಅಳವಡಿಸಿ ಕೊಂಡರು.
- ಇವರು ಮೆಕ್ಸಿಕೋ ದ್ವೀಪದಲ್ಲಿ ಆಶ್ರಯ ಪಡೆದು ಟೆನೋಟಿಟ್‌ಲಾನ್ ನಗರದ ಉಗಮಕ್ಕೆ ಕಾರಣ.
- ಇಲ್ಲಿ ದೊಡ್ಡ ಸಾಮ್ರಾಜ್ಯ ಸ್ಥಾಪಿಸಿದರು.
- ದೇವಾಲಯಗಳು ನಿರ್ಮಾಣ.
- ಬರವಣಿಗೆ – ಹಿರೋಗ್ಲೈಫಿಕ್ಸ್
- ಕಾಲಗಣಣೆಯನ್ನು ಮಾಯನ್ನರಿಂದ ತಿಳಿದರು.

**ವಾಣಿಜ್ಯ :–**

- ವಿದೇಶಿ ವ್ಯಾಪಾರವಿತ್ತು.
- ಸೈನಿಕರು ವ್ಯಾಪಾರಿಗಳಿಗೆ ರಕ್ಷಣೆ.
- ಕೂಲಿಯವರನ್ನೆ ಹೊರೆಹೊಯ್ಯಲು ಬಳಕೆ.
- ಬೆಳೆಗಳನ್ನು ಮಾರುಕಟ್ಟೆಗೆ ತರಲು ಕಾಲುವೆ ಬಳಕೆ.
- ಮುಖ್ಯಫಸಲು –ಕಾಳು, ಧಾನ್ಯ, ಮೆಣಸು, ಹಣ್ಣಿನರಸ, ಟೊಮೆಟೋ ತಂಬಾಕು– ಹತ್ತಿ.
- ವಸ್ತು ವಿನಿಮಯ ಮೂಲಕ ವ್ಯಾಪಾರ. ರಾಜರು ಸುಂದರ ಅರಮನೆಗಯಲ್ಲಿ ವಾಸ.
- ಪ್ರತಿಷ್ಠಿತರು – ಗುಲಾಮರು ರಾಜನ ಅಧೀನದಲ್ಲಿದ್ದರು
- ಅರಮನೆ ಬಳಿ ಉದ್ಯಾವನ, ಪ್ರಾಣಿಸಂಗ್ರಹಾಲಯ ಇತ್ತು.
- ಕುಡಿಯುವ ನೀರಿನ ಯೋಜನೆ ಇತ್ತು.

**ಜೀವನ ವಿಧಾನ;–**

- ಸಣ್ಣ ದ್ವೀಪಗಳನ್ನು ಕೃಷಿಭೂಮಿಯಾಗಿ ಪರಿವರ್ತನೆ.
- ಇವುಗಳನ್ನು ಚಿನಂಪ ಎನ್ನುವರು.
- ರೈತರು ಗುಡಿಸಲುಗಳಲ್ಲಿ ವಾಸ.
- ಅಧಿಕಾರಿಗಳು ಕಲ್ಲಿನ ಮತ್ತು ಸುಟ್ಟ ಇಟ್ಟಿಗೆಯಿಂದ ನಿರ್ಮಿತ ನಿವಾಸದಲ್ಲಿದ್ದರು.
- ಯುದ್ಧ ತರಬೇತಿಯಲ್ಲಿ ಭರ್ಜಿ, ಬಿಲ್ಲುಬಾಣ ಬಳಕೆ.
- ಯುದ್ಧದಲ್ಲಿ ಸೆರೆಸಿಕ್ಕವರನ್ನ ಆಹುತಿ ನೀಡುತ್ತಿದ್ದರು.
- ಆಸ್ವೆಕರು ಪ್ರಕೃತಿಯ ಆರಾಧಕರು.
- ಧಾರ್ಮಿಕ ವಿಧಿಗಳಲ್ಲಿ ಮಾನವರ ಬಲಿ ಒಂದಾಗಿತ್ತು.
- 1517 ರಲ್ಲಿ ಹರ್ನೆಂಡೊ ಕಾರ್ಟೆಸ್ಸ್ ನ ದಾಳೀಗೆ ಆಸ್ವೆಕ್ ನಾಶವಾಯಿತು.

**ಇಂಕಾ ನಾಗರಿಕತೆ:–**

- ಇದು ಪೆರು, ಈಕ್ವೆಡೋರ್, ಚಿಲಿ, ಅರ್ಜೆಟೈನಾ ಒಳಗೊಂಡಿತ್ತು.
- ಇಂಕಾ ಹಿಂದಿನ ಸಂಸ್ಕೃತಿಗಳ ಪರಂಪರೆ ಮುಂದುವರೆಸಿತ್ತು.
- ಬರವಣಿಗೆ ಇಲ್ಲದ ಕಾರಣ ಆರಂಭದ ಜೀವನ ತಿಳಿದುಬಂದಿಲ್ಲ.
- ಇವರು ಪೆರುವಿನ ಕುಸ್ಕೋ ಕಣಿವೆಯಲ್ಲಿ ನೆಲೆಸಿದರು.
- ಇವರ ನಾಯಕ– ಟ್ಯೂಪೆಕ್.
- ಇವನು ಇಂಕಾಗಳ ಮೂಲ ಪುರುಷ ಚಿಮುಗಳ ಹೋರಾಡಿ ಸೋಲಿಸಿದರು.
- 1532 ರಲ್ಲಿ ಸ್ಪೆನಿಷ್ ಸೇನೆ ಇಂಕಾಗಳನ್ನು ಸೋಲಿಸಿತು.

**ರಾಜಕೀಯ :–**

- ಇಂಕಾ ಸಾಮ್ರಾಜ್ಯ 4 ಪ್ರಾಂತ್ಯಗಳಾಗಿದ್ದವು.
- ಪ್ರಾಂತ್ಯಗಳನ್ನು ಮುಖ್ಯಸ್ಥರು ನೋಡಿಕೊಳ್ಳುತ್ತಿದ್ದರು.
- ಇವರ ಮೇಲೆ ರಾಜನಿದ್ದ.
- ಸಮಾಜದ ಪ್ರಬಲ ವರ್ಗಗಳು –ಅಧಿಕಾರಿಗಳು ಮತ್ತು ಪುರೋಹಿತರು.
- ಭೂಮಿಯನ್ನು 3 ಭಾಗಗಳಾಗಿ ವಿಂಗಡಣೆ
  1) ಕುಟುಂಬಗಳಿಗೆ ಮೀಸಲಾಗಿತ್ತು
  2) ಸೂರ್ಯದೇವರಿಗೆ ಮೀಸಲು
  3) ರಾಜನಿಗೆ ಮೀಸಲು.
- ಉಗ್ರಾಣ ವ್ಯವಸ್ಥೆಯಿತ್ತು.
- ನಿರೀಕ್ಷಕರಗಳು ಜನಸಂಖ್ಯೆ, ಆಹಾರ, ಪ್ರಾಣಿಗಳ ಲೆಕ್ಕ ಇಡುತ್ತಿದ್ದರು.
- ಇಂಕಾಗಳ ಮುಖ್ಯ ಕೊಡುಗೆ – ಬೃಹತ್ ಶಿಲಾಕಟ್ಟಡಗಳು.
- ಇವರ ಕಟ್ಟಡಗಳು ಪೇರುವಿನಲ್ಲಿವೆ.
- ಟ್ಯೂಪೆಕ್ಕನು ಕೋಟೆ ಪೇರುವಿನಲ್ಲಿದೆ.
- ಇಂಡಿಗೋ – ಟಿಟಿಕಾಶ ಸರೋವರದ ಅರಮನೆ
- ಚಂದ್ರನ ದೇವಾಲಯ ನಿರ್ಮಾಣ.
- ಚಿನ್ನದ ಆಭರಣದ ಕೆಲಸದ ಉತ್ತರ ಪೆರುವಿನಲ್ಲಿದೆ.
- ಸೂರ್ಯದೇವ – ಇಂಕಾಗಳ ಆರಾಧ್ಯದೈವ.
- ಸೃಷ್ಟಿಗೆ ಕಾರಣನಾದ ದೇವರು – ವೀರಕೋಚ.
- ಇವರು ಪ್ರಕೃತಿ ಆರಾಧಕರು.

RAMALINGAPPA L Asst Teacher

ಅಧ್ಯಾಯ–5

# ಸನಾತನ ಧರ್ಮ

**ಸರ್ವೇ ಭವನ್ತು ಸುಖೀನಃ**
**ಸರ್ವೇ ಸನ್ತು ನಿರಾಮಯಾಃ**
**ಸರ್ವೇ ಭದ್ರಾಣಿ ಪಶ್ಯನ್ತು**
**ಮಾ ಕಶ್ಚಿತ್ ದುಃಖಭಾಗ್ ಭವೇತ್**
**ಓಂ ಶಾಂತಿಃ ಶಾಂತಿಃ ಶಾಂತಿಃ॥**

- ಈ ಶ್ಲೋಕದ ಅರ್ಥ **"ಎಲ್ಲಾರೂ ಸುಖಿಗಳಾಗಿರಲಿ, ಎಲ್ಲರೂ ರೋಗಾದಿ ಚಿಂತೆಗಳಿಂದ ಮುಕ್ತರಾಗಿರಲಿ, ಎಲ್ಲರೂ ಶುಭವನ್ನೇ ಕಾಣುವಂತಾಗಲಿ, ಯಾರೂ ದುಃಖಿತರಾಗದೆ ಇರಲಿ, ಜಗತ್ತಿನ ಸರ್ವ ಜೀವಿರಾಶಿಗಳಿಗೂ ಎಂದೆಂದೂ ಸದಾ ಸುಖ, ಶಾಂತಿ, ನೆಮ್ಮದಿಗಳೇ ಇರಲಿ"**
- ಇದೇ ಸನಾತನ ಧರ್ಮದ ಜೀವಾಳ.
- ಸನಾತನ ಎಂದರೆ, **ಅತಿ ಪ್ರಾಚೀನ, ನತ್ಯನೂತನ** ಎಂದರ್ಥ ಅಂದರೆ, ಚಿರಂತನ, ಶಾಶ್ವತ ಎಂದರ್ಥ
- ಸನಾತನ ಧರ್ಮ **ಭಾರತದಲ್ಲಿ** ಹುಟ್ಟಿ ಬೆಳೆಯಿತು.
- ಇದನ್ನು **"ಹಿಂದೂ ಧರ್ಮ"** ಎನ್ನುವರು.

**ವೇದಗಳ ಅರ್ಥ:–**

- ✓ ಶಾಂತಿ ಮಂತ್ರಗಳು:–
  **'ಭದ್ರಂ ಪಶ್ಯೇಮ'** (ಮಂಗಳವಾದುದನ್ನೇ ಕಾಣೋಣ)
  **'ಮಾ ವಿದ್ವಿಷಾವಹೈ'** (ಯಾರನ್ನೂ ದ್ವೇಷ ಮಾಡದೆ ಇರುವಂತಾಗಲಿ).
- ✓ ಇವುಗಳನ್ನು **ಉಪನಿಷತ್**ಗಳಲ್ಲಿ ಕಾಣಬಹುದು.
- ✓ ಉಪನಿಷತ್ ವೇದ ಸಾಹಿತ್ಯದ ಒಂದು ಭಾಗ
- ✓ ವೇದ ಶಬ್ದವು **'ವಿದ್'** ದಾತುವಿನಿಂದ ಉತ್ಪತ್ತಿ
- ✓ ವಿದ್ ಎಂದರೆ, **ಜ್ಞಾನ** ಎಂದರ್ಥ
- ✓ **ವಿದ್ಯೆ, ವಿದ್ವಾಂಸ, ವಿದ್ಯಾರ್ಥಿ** ಶಬ್ದಗಳು ವಿದ್‌ನಿಂದ ಹುಟ್ಟಿವೆ.
- ✓ ವೇದಗಳನ್ನು **"ಅಪೌರುಷೇಯ"** ಎಂದು ವರ್ಣಿತ.
- ✓ ಅಂದರೆ **'ವೇದಸಾಹಿತ್ಯವನ್ನು ಯಾರೂ ಬರೆದಿಡಲಿಲ್ಲ/ರಚಿಸಲಿಲ್ಲ'**
- ✓ ಇವು ಋಷಿಮುನಿಗಳ **ತಪಸ್ಸಿನ ಫಲವಾಗಿ ಸಿದ್ಧಿಸಿದ ಮಂತ್ರಗಳು**
- ✓ ಇವು ಋಷಿಮುನಿಗಳ **ಅಪಾರ ಜ್ಞಾನಾನುಭವಗಳ ಫಲಗಳು**
- ✓ ಒಂದು ಸಮುದಾಯದ ಸಮಗ್ರ ಜ್ಞಾನಾನುಭವಗಳ ಸಂಗ್ರಹ.

**ವೇದಸಾಹಿತ್ಯದ ವಿಂಗಡಣೆ:–**

- ಇವು **ಸನಾತನ ಧರ್ಮಕ್ಕೆ ತಳಪಾಯ** ಹಾಕಿವೆ.
- ಇವುಗಳನ್ನು **'ಶ್ರುತಿ'** ಎಂದು ಕರೆಯುತ್ತಾರೆ.
- ಇವು ಜಗತ್ತಿನ ಅತ್ಯಂತ ಪ್ರಾಚೀನ ಸಾಹಿತ್ಯ.
- ಭಾರತದ ಧಾರ್ಮಿಕ ಸಾಹಿತ್ಯದ ಆರಂಭವನ್ನು ಸೂಚಿಸುತ್ತವೆ.
- ಇವು 5000 ವರ್ಷಗಳಷ್ಟು ಹಿಂದೆ ರಚನೆಯಾಗಿವೆ.
- ಋಷಿಗಳು ತಮ್ಮಿಷ್ಟದೇವತೆಗಳನ್ನು ಸ್ತುತಿಸಿ ನಿವೇದಿಸಿಕೊಳ್ಳುವ ಮಂತ್ರಗಳೇ **ಋಕ್ಕುಗಳು**
- ಋಕ್ಕುಗಳ ಸಮೂಹವೇ **ಸೂಕ್ತಗಳು.**
- ಋಷಿ ಸಂತತಿಯವರು, ಶಿಷ್ಯವರ್ಗದವರು ದೇವತೆಗಳ ಬಗ್ಗೆ ರಚಿಸಿದ ಸೂಕ್ತಗಳ ಸಮೂಹವೇ **ಮಂಡಲ.**
- ಋಷಿಗಳ ಗುಂಪಿನಿಂದ ರಚಿತವಾದ ಒಟ್ಟುಗೂಡಿದ ಮಂಡಲಗಳೇ **'ಸಂಹಿತೆ'.**
- ಅಪಾರ ವೇದರಾಶಿಯನ್ನು ಅಧ್ಯಯನ ಮಾಡಲು & ಶಿಷ್ಯರಿಗೆ ಕಲಿಸಲು ಸಾಧ್ಯವಿರಲ್ಲಿಲ್ಲ. ಆದ್ದರಿಂದ
- **ಕೃಷ್ಣದ್ವೈಪಾಯನರು** ವೇದಮಂತ್ರ ಸಮೂಹವನ್ನು ವಿಭಜನೆ (ವ್ಯಾಸ) ಮಾಡಿ **ವೇದವ್ಯಾಸ**ರೆನಿಸಿದರು.
- ವಿಭಜನೆಯಿಂದ **ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ** ಎಂಬ ನಾಲ್ಕು ವೇದಗಳಾದವು.
- ಇವುಗಳನ್ನು ವೇದವ್ಯಾಸರು ಕ್ರಮವಾಗಿ ತಮ್ಮ ಶಿಷ್ಯರಾದ **ಪೈಲ, ವೈಶಂಪಾಯನ, ಜೈಮಿನಿ & ಸುಮಂತರಿಗೆ** ಉಪದೇಶಿಸಿದರು.
- ನಂತರ ಇವು ಸ್ವತಂತ್ರ ವೇದ ಶಾಖೆಗಳಾಗಿ ಬೆಳೆದವು.
- ಇವುಗಳಲ್ಲಿ ಅಂತಃಸಂಬಂಧವಿದೆ, ಆದರೆ ಪರಸ್ಪರ ವಿರೋಧಾಭಾಸಗಳಿಲ್ಲ.
- **ದೇವತೆಗಳನ್ನು ಸ್ತುತಿಸುತ್ತ ನಡೆಸುವ ಯಜ್ಞಕಾರ್ಯ**ದಲ್ಲಿ ನಾಲ್ಕು ವೇದಗಳ ಪಾರಂಗತರು ಭಾಗಿ.

**ವೇದಗಳ ಸ್ವರೂಪ:–**

- ➢ ವೇದಗಳನ್ನು **ಸಂಹಿತೆಗಳು, ಬ್ರಾಹ್ಮಣಗಳು, ಅರಣ್ಯಗಳು ಹಾಗೂ ಅರಣ್ಯಗಳು** ಎಂದು ನಾಲ್ಕು ಸ್ಕಂಧಗಳಾಗಿ ವಿಭಾಗ
- ➢ **ಸಂಹಿತೆ:–** ಇವು ದೇವತೆಗಳ ಸ್ತೋತ್ರಗಳನ್ನು ಒಳಗೊಂಡಿವೆ.
- ➢ **ಬ್ರಾಹ್ಮಣ:–** ಯಜ್ಞ ಆಚರಣೆಯ ಕ್ರಮಗಳನ್ನು ತಿಳಿಸುವ ವೇದಭಾಗ
- ➢ **ಅರಣ್ಯಕಗಳು:–** ಸ್ತೋತ್ರಗಳ & ಯಜ್ಞಗಳ ಅಂತರರ್ಥಗಳನ್ನು ವಿಶದಪಡಿಸುವ ಭಾಗ
- ➢ **ಉಪನಿಷತ್ತು:–** ತತ್ವಜ್ಞಾನದ ಮೂಲಕ ಪರಮಾತ್ಮನ ಸಾಕ್ಷಾತ್ಕಾರ ವಿಧಾನ ಚಿಂತನೆ ಮಾಡುವ ಭಾಗ

**ಋಗ್ವೇದ ಸಂಹಿತೆ:–**

RAMALINGAPPA LAST Teacher

- ✓ ಋಗ್ವೇದ ಸಂಹಿತೆಯಲ್ಲಿ **1028 ಸೂಕ್ತಗಳು, 10552 ಮಂತ್ರಗಳಿವೆ**
- ✓ ಇವು ಛಂದೋಬದ್ಧವಾಗಿ **ಗಾಯಿತ್ರಿ, ಉಷ್ಣಿಕ್, ಪುರ ಉಷ್ಣಿಕ್, ಕಕುಪ್, ಅನುಷ್ಟುಪ್, ಬೃಹತೀ ಛಂದಸ್ಸು**ಗಳಲ್ಲಿವೆ.
- ✓ ಸೂಕ್ತಗಳನ್ನು **85 ಅನುವಾಕಗಳು, 10 ಮಂಡಲ**ಗಳಾಗಿ ವಿಭಾಗ
- ✓ ವೇದಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವವರು ಋಗ್ವೇದ ಸಾಹಿತ್ಯವನ್ನು **8 ಅಷ್ಟಕಗಳು, 64 ಪ್ರಪಾಠಕಗಳು, 2024 ವರ್ಗಗಳು** & **10,552 ಮಂತ್ರ**ಗಳಾಗಿ ವಿಭಾಗ.

**ಆಸ್ತಿಕ ಮತ್ತು ನಾಸ್ತಿಕ ಪಂಥಗಳು:–**

- ಸನಾತನ ಧರ್ಮದ ಸಾಹಿತ್ಯವನ್ನು **ವೈದಿಕ** & **ಅವೈದಿಕ** ಎಂದು ವಿಂಗಡಣೆ
- **ವೇದಮೂಲದ ಸಾಹಿತ್ಯ ಮಾತ್ರ ವೈದಿಕ,** ಉಳಿದವು ಅವೈದಿಕ.
- ನಂತರ **ಆಸ್ತಿಕ** & **ನಾಸ್ತಿಕ ಪಂಥ**ಗಳಾಗಿ ವಿಂಗಡಣೆ
- ವೈದಿಕ ಶಾಖೆ & ಉಪಶಾಖೆಗಳಲ್ಲಿರುವ ಸಾಹಿತ್ಯ **ಆಸ್ತಿಕ.**
- ಅವೈದಿಕ ಶಾಖೆಯಲ್ಲಿ ಆಸ್ತಿಕ & ನಾಸ್ತಿಕ ಎರಡೂ ಇವೆ.
- ದೇವರನ್ನು ಒಪ್ಪುವವರು ಆಸ್ತಿಕರು, ಒಪ್ಪದವರು ನಾಸ್ತಿಕರು ಎಂಬುದು ತಪ್ಪು ಕಲ್ಪನೆ.

**ಸ್ಮೃತಿಸಾಹಿತ್ಯದ ಮೂರು ವಿಭಾಗಗಳು:–**

- ✓ ವೈದಿಕ ಆಸ್ತಿಕ ಶಾಖೆಯ ಮೊದಲ ಕವಲು **ಶ್ರುತಿ ಸಾಹಿತ್ಯ**
- ✓ **ಋಗ್ವೇದದಿಂದ ಅಥರ್ವವೇದದವರೆಗಿನ** ಸಾಹಿತ್ಯ **ಶ್ರುತಿ** ಎನಿಸಿದೆ
- ✓ ವೈದಿಕ ಆಸ್ತಿಕ ಶಾಖೆಯ ಎರಡನೆ ಕವಲು **ಸ್ಮೃತಿ ಸಾಹಿತ್ಯ**
- ✓ ಶ್ರುತಿಗೆ ಪೂರಕವಾಗಿ ಬರುವ ವೇದಸಾಹಿತ್ಯ **ಸ್ಮೃತಿ ಸಾಹಿತ್ಯ**
- ✓ **ಕಿವಿಯಿಂದ ಕೇಳಿಸಿಕೊಂಡದ್ದು** ಶ್ರುತಿ, **ಜ್ಞಾಪಿಸಿಕೊಂಡದ್ದು** ಸ್ಮೃತಿ.

**ಸ್ಮೃತಿ ಸಾಹಿತ್ಯವನ್ನು ಮೂರು ಭಾಗಗಳಾಗಿ ವಿಂಗಡಣೆ:–**

- ✓ **ಮೊದಲ ಭಾಗ ವೇದಾಂಗಗಳು:–**
- **ಇವು** ಧರ್ಮಗ್ರಂಥಗಳು, ವೇದಗಳ ಅರ್ಥ ತಿಳಯಲು ಅನುಸರಿಸುವ ವಿಷಯಗಳನ್ನು, ನಿಯಮಗಳನ್ನು ತಿಳಿಸುವ ಗ್ರಂಥಗಳ ಸಮೂಹ **ವೇದಾಂಗ.**
- ಇದರ ಭಾಗಗಳು:– **ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತಿ, ಜ್ಯೋತಿಷ್ಯ** & **ಕಲ್ಪ**
- ಧರ್ಮಶಾಸ್ತ್ರವು **ವ್ಯಕ್ತಿಯ ಧಾರ್ಮಿಕ ಬದುಕಿಗೆ** & **ಸುಸಂಸ್ಕೃತ ಸಮಾಜ ವ್ಯವಸ್ಥೆಗೆ ಅಗತ್ಯ** ನಿಯಮಗಳನ್ನು ತಿಳಿಸುತ್ತದೆ.
- ಉದಾ:– ಪ್ರಮುಖ ಧರ್ಮಶಾಸ್ತ್ರಗಳು **ಮನುಸ್ಮೃತಿ, ಯಾಜ್ಞವಲ್ಕ್ಯ ಸ್ಮೃತಿ, ಪರಾಶರ ಸ್ಮೃತಿ**
- ✓ **ಎರಡನೇ ಭಾಗ ಇತಿಹಾಸ ಗ್ರಂಥಗಳು:–**
- ✓ ಇತಿಹಾಸ ಗ್ರಂಥಗಳೆನಿಸಿದ **ರಾಮಾಯಾಣ, ಮಹಾಭಾರತ, ಹದಿನೆಂಟು ಪುರಾಣಗಳು, 18 ಉಪಪುರಾಣಗಳು, ಪೌರಾಣಿಕ ಉಪನಿಷತ್ತುಗಳು, ಪೌರಾಣಿಕ ಗೀತೆಗಳು.**
- ✓ **ಮೂರನೇ ಭಾಗ ಷಡ್ದರ್ಶನಗಳು:–**
- ▪ ಇವು **ಭಾರತೀಯ ತತ್ವಶಾಸ್ತ್ರದ ಆಧಾರಸ್ತಂಭ**ಗಳೆನಿಸಿದ ಷಡ್ದರ್ಶನಗಳು.
- ▪ ಪ್ರಮುಖ ಷಡ್ದರ್ಶನಗಳು:– **ನ್ಯಾಯ, ವೈಶೆಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸಾ** & **ಉತ್ತರಮೀಮಾಂಸಾ**

**ಮತಗಳು ಮತ್ತು ಮತಾಚಾರ್ಯರು:–**

- **ಉತ್ತರಮೀಮಾಂಸೆ/ವೇದಾಂತ**ದಲ್ಲಿರುವ ಮೂರು ಮುಖ್ಯ ಕವಲುಗಳು **ಅದ್ವೇತ, ವಿಶಿಷ್ಟಾದ್ವೈತ** & **ದ್ವೈತ.**
- ಇವುಗಳ ಸ್ಥಾಪಕರು ಕ್ರಮವಾಗಿ **ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು.**
- ಈ ಮತಗಳನ್ನು ಅನುಸರಿಸಿ **ಶುದ್ಧಾದ್ವೈತ, ಭೇದಾಭೇದ, ಅಚಿಂತ್ಯಭೇದಾಭೇದ ಸಿದ್ಧಾಂತಗಳು** ಬಂದವು.
- ಇವುಗಳಲ್ಲಿ **ಶಕ್ತಿವಿಶಿಷ್ಟಾದ್ವೈತವು ಶಿವಪರವಾದುದು.**
- ಇದರ ಪರಂಪರೆಯಲ್ಲಿ **ಕಾಶ್ಮೀರ ಶೈವದರ್ಶನ, ಶೈವಸಿದ್ಧಾಂತ, ವೀರಶೈವ ಮತಗಳು** ಬಂದವು.
- ಶೈವಪಂಥದ ಇತರೆ ಪಂಗಡಗಳು:– **ಪಾಶುಪತ, ಕಾಳಾಮುಖ, ಕಾಪಾಲಿಕ, ಮಾಹೇಶ್ವರ ಲಾಕುಲಿಸ.**

**ಜೈನ ಮತ್ತು ಬೌದ್ಧ ಮತಗಳು:–**

- ❖ ಒಬ್ಬ/ಒಬ್ಬಳು ದೇವರನ್ನು ನಂಬುವುದು ಸನಾತನಧರ್ಮಕ್ಕೆ ಹೊರತಾದ ಪರಿಕಲ್ಪನೆ.
- ❖ ಭಾರತದಲ್ಲಿ ಸೆಮೆಟಿಕ್ ರಿಲಿಜನ್‌ಗಳು ಪ್ರವೇಶದ ನಂತರ ಹುಟ್ಟಿಬೆಳೆದ ಪರಿಕಲ್ಪನೆ.
- ❖ ಸನಾತನಧರ್ಮದಲ್ಲಿ **ಆಸ್ತಿಕ** & **ನಾಸ್ತಿಕ** ಎಂಬ ಶಬ್ದಗಳಿಗೆ ಬೇರೆ ಅರ್ಥವಿದೆ.
- ❖ **ವೇದಪ್ರಾಮಾಣ್ಯ, ಕರ್ಮಫಲ** & **ಪುನರ್ಜನ್ಮ**ದಲ್ಲಿ ನಂಬಿಕೆ ಇವನ್ನು ಒಪ್ಪಿರುವ ಎಲ್ಲರೂ **ಆಸ್ತಿಕರು.**

RAMALINGAPPA Asst. Teacher

- ✓ ಇಬ್ಬರು ಸದಸ್ಯರು ಮಾನವ ಹಕ್ಕುಗಳ ಸಂರಕ್ಷಣಾ ಪ್ರಾಯೋಗಿಕ ಜ್ಞಾನ ಹೊಂದಿರಬೇಕು
- ✓ ನಾಲ್ಕು ಪದನಿಮಿತ್ತ ಸದಸ್ಯರಿರುತ್ತಾರೆ.
- ✓ ಅಧ್ಯಕ್ಷರು & ಸದಸ್ಯರನ್ನು ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ.
- ✓ ಅಧಿಕಾರದ ಅವಧಿ 5 ವರ್ಷ/70 ವರ್ಷ ವಯಸ್ಸು
- ✓ ಕೇಂದ್ರ ಸರ್ಕಾರದಿಂದ ಸಂಬಳ, ಭತ್ಯೆ ಪಡೆಯುತ್ತಾರೆ.

**ರಾಜ್ಯ ಮಾನವ ಹಕ್ಕುಗಳ ಆಯೋಗ:–**

- ❖ ಮಾನವ ಹಕ್ಕುಗಳ ಕಾಯ್ದೆ 1993ರ ಅನ್ವಯ ರಚನೆ
- ❖ ಒಬ್ಬ ಅಧ್ಯಕ್ಷರು & ಇಬ್ಬರು ಸದಸ್ಯರನ್ನು ಹೊಂದಿದೆ.
- ❖ ಅಧ್ಯಕ್ಷರು ಉಚ್ಚನ್ಯಾಯಾಲಯದ ನಿವೃತ್ತ ಮುಖ್ಯ ನ್ಯಾಯಾಧೀಶರಾಗಿರುತ್ತಾರೆ.

RAMALINGAPPA L Asst. Teacher

- ಸದಸ್ಯರು ಉಚ್ಚ ನ್ಯಾಯಾಲಯದ ನಿವೃತ್ತ & ಸೇವೆಯಲ್ಲಿರುವ ಹಾಗೂ ಜಿಲ್ಲಾ ನ್ಯಾಯಾಲಯದಿಂದ ಕನಿಷ್ಟ 7 ವರ್ಷಗಳು ಸೇವೆ ಮಾಡಿರಬೇಕು.
- ಇವರನ್ನು ರಾಜ್ಯಪಾಲರು ನೇಮಕ ಮಾಡುತ್ತಾರೆ.

**ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ/ ರಾಷ್ಟ್ರೀಯ ಪರಿಶಿಷ್ಟ ಪಂಗಡ ಆಯೋಗ:–**

- 2003 ರಲ್ಲಿ ಭಾರತ ಸಂವಿಧಾನ ವಿಧಿ 338ಕ್ಕೆ 89ನೇ ತಿದ್ದುಪಡಿ ಮಾಡಿ ರಚನೆ
- ಒಬ್ಬ ಅಧ್ಯಕ್ಷರು ಒಬ್ಬ ಉಪಾಧ್ಯಕ್ಷರು & 3 ಜನ ಸದಸ್ಯರನ್ನು ಒಳಗೊಂಡಿದೆ.
- ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ.
- ಎಸ್.ಸಿ/ಎಸ್.ಟಿ ವ್ಯಕ್ತಿಗಳ ಮೇಲಿನ ದೌರ್ಜನ್ಯಗಳ ತಡೆಗೆ ಮುಂಜಾಗ್ರತ ಕ್ರಮ
- ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಕರಣಗಳಿಗೆ ಅಗತ್ಯ ನೆರವು ನೀಡುತ್ತವೆ.

**ಹಿಂದುಳಿದ ವರ್ಗಗಳ ಆಯೋಗ:–**

- 1993 ರಲ್ಲಿ ರಚನೆ
- ಒಬ್ಬ ಅಧ್ಯಕ್ಷರು & ನಾಲ್ಕು ಜನ ಸದಸ್ಯರನ್ನು ಹೊಂದಿದೆ.
- ಇದು ಹಿಂದುಳಿದ ವರ್ಗಗಳ ಹಕ್ಕುಗಳ ಸಂರಕ್ಷಣೆ ಹೊಣೆ ಹೊಂದಿದೆ.

**ರಾಷ್ಟ್ರೀಯ ಮಹಿಳಾ ಆಯೋಗ:–**

- ✓ 1990 ರಲ್ಲಿ ರಚನೆ
- ✓ ಒಬ್ಬ ಅಧ್ಯಕ್ಷರು & 5 ಜನ ಸದಸ್ಯರನ್ನು ಹೊಂದಿದೆ
- ✓ ಸಂವಿಧಾನಾತ್ಮಕವಾಗಿ ನೀಡಿದ ಮಹಿಳೆಯ ಹಕ್ಕು ರಕ್ಷಣೆ
- ✓ ಮಹಿಳೆಯರನ್ನು ಜಾಗೃತಿಗೊಳಿಸುವುದು.
- ✓ ಮಹಿಳೆಯ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ & ಆರೋಗ್ಯ ಸ್ಥಾನಮಾನ ಪರಿಶೀಲಿಸುವ ಕಾರ್ಯ

**ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ:–**

- 1992 ರಲ್ಲಿ ರಚನೆ
- ಉದ್ದೇಶ:– ಅಲ್ಪಸಂಖ್ಯಾತರ ಹಕ್ಕುಗಳ ಸಂರಕ್ಷಣೆ
- ಒಬ್ಬ ಅಧ್ಯಕ್ಷರು, ಒಬ್ಬ ಉಪಾಧ್ಯಕ್ಷರು, 5 ಜನ ಸದಸ್ಯರನ್ನು ಹೊಂದಿದೆ.
- ಅಲ್ಪಸಂಖ್ಯಾತ ಧಾರ್ಮಿಕ ಸಮುದಾಯಗಳಾದ:– ಮುಸ್ಲಿಂ, ಕ್ರೈಸ್ತರು, ಸಿಖ್ಖರು, ಬೌದ್ಧರು, ಪಾರ್ಸಿಗಳು & ಜೈನ್ಯರ ಹಕ್ಕುಗಳ ರಕ್ಷಣೆ
- ಈ ಸಮುದಾಯಗಳ ಅಭಿವೃದ್ಧಿಯ ಮೌಲ್ಯಮಾಪನ ಮಾಡುವುದು
- ಇವರ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳುವುದು.

**ಅಧ್ಯಾಯ–4**

## ಸ್ಥಳೀಯ ಸರ್ಕಾರಗಳು

- ಸ್ವಯಂ ಆಡಳಿತ ನೀಡುವ ಮಂಡಳಿಗಳನ್ನು ಸ್ಥಳೀಯ ಸರ್ಕಾರ ಎನ್ನುವರು.
- ಬೆಳವಣಿಗೆ:–
  - ವೇದಗಳ ಕಾಲದಲ್ಲಿ
  - ರಾಜ–ಮಹಾರಾಜರ ಕಾಲದಲ್ಲಿ
  - 1882 ರಲ್ಲಿ ಲಾರ್ಡ್ ರಿಪ್ಪನ್ ಸ್ಥಳೀಯ ಸರ್ಕಾರದ ಗೊತ್ತುವಳಿ ಮಂಡನೆ ಆದ್ದರಿಂದ ಇವರನ್ನು 'ಭಾರತದ ಸ್ಥಳೀಯ ಸರ್ಕಾರದ ಪಿತಾಮಹ' ಎನ್ನುವರು
  - 1919 & 1935ರ ಭಾರತ ಸರ್ಕಾರದ ಕಾಯ್ದೆ
  - ಸಂವಿಧಾನದ 4ನೇ ಭಾಗದಲ್ಲಿ ರಾಜ್ಯನಿರ್ದೇಶಕ ತತ್ವಗಳ ಅಡಿಯಲ್ಲಿ
  - 40 ವಿಧಿಯಡಿಯಲ್ಲಿ ಪಂಚಾಯಿತ್ ಸಂಘಟನೆ
  - 1992 ರಲ್ಲಿ ಸಂವಿಧಾನ 73–74ನೇ ತಿದ್ದುಪಡಿ ಮಾಡಿ ಸ್ಥಳೀಯ ಸರ್ಕಾರಕ್ಕೆ ಸಂವಿಧಾನಾತ್ಮಕ ಸ್ಥಾನಮಾನ ನೀಡಲಾಗಿದೆ.
  - 1993 ಏ 24 ರಂದು 73ನೇ ತಿದ್ದುಪಡಿ (ಪಂಚಾಯಿತ್ ವ್ಯವಸ್ಥೆ) ಭಾಗ 9ಎ ರಲ್ಲಿ 243 ರಿಂದ 243ಓ ವರೆಗೆ
  - 74ನೇ ತಿದ್ದುಪಡಿ (ಪೌರಾಡಳಿತ ವ್ಯವಸ್ಥೆ):– ಭಾಗ 9ಎ ಯಲ್ಲಿ 243ಪಿ ಯಿಂದ 243 ಜೆಡ್‌ಜಿ ವರೆಗೆ

**ಕರ್ನಾಟಕದಲ್ಲಿ:–**

RAMALINGAPPA L Asst. Teacher

- ✓ 1983 ರಲ್ಲಿ ಪಂಚಾಯಿತ್ ರಾಜ್ ಕಾಯ್ದೆ(1985ರಲ್ಲಿ ಜಾರಿ)
- ✓ ಜಿಲ್ಲಾ ಪರಿಷತ್ & ಮಂಡಲ ಪಂಚಾಯಿತಿ
- ✓ ಪ್ರತ್ಯಕ್ಷ ಚುನಾವಣೆ ಮೂಲಕ ಆಯ್ಕೆ
- ✓ 73ನೇ ತಿದ್ದುಪಡಿ ಕಾಯ್ದೆಯಂತೆ 1993 ಕರ್ನಾಟಕ ಪಂಚಾಯಿತಿ ರಾಜ್ ಅಧಿನಿಯಮ ರಚನೆ
- ✓ 2015 ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ & ಪಂಚಾಯಿತ್ ರಾಜ್ ಅಧಿನಿಯಮ –1993 ಎಂದು ಮರುನಾಮಕರಣ
- ✓ ಪ್ರಸ್ತುತ ಕರ್ನಾಟಕದಲ್ಲಿ ಪಂಚಾಯತ್ ರಾಜವ್ಯವಸ್ಥೆ ಜಾರಿ

**ಉದ್ದೇಶಗಳು:–**

- ➢ ಸ್ಥಳಿಯ ಸಮಸ್ಯೆ ಪರಿಹಾರಕ್ಕೆ ಸ್ಥಳೀಯರನ್ನೇ ಬಳಕೆ
- ➢ ಜನ ಸಾಮಾನ್ಯರಿಗೆ ಆಡಳಿತ ಜ್ಞಾನ ಒದಗಿಸುವುದು
- ➢ ಅಧಿಕಾರ ವಿಕೇಂದ್ರೀಕರಣ
- ➢ ತಳಮಟ್ಟದಲ್ಲಿ ಜನರಿಗೆ ನಾಯಕತ್ವ ಗುಣ ಬೆಳೆಸುವುದು.

**ಕಾರ್ಯಗಳು:–**

- ➢ ಪಂಚಾಯ್ತಿ ಆಸ್ತಿ ರಕ್ಷಣೆ
- ➢ ವಾರ್ಷಿಕ ಆಯ್ಯವ್ಯಯದ ಮುಂಗಡಪತ್ರ ತಯಾರಿ
- ➢ ಆರೋಗ್ಯ & ಕುಟುಂಬ ಕಲ್ಯಾಣ ಯೋಜನೆ ಕೈಗೊಳ್ಳುವುದು
- ➢ ಸ್ವಚ್ಛತೆ & ನೈರ್ಮಲೀಕರಣ
- ➢ ಶೈಕ್ಷಣಿಕ ಕಾರ್ಯಕ್ರಮಕ್ಕೆ ಪ್ರೋತ್ಸಾಹ
- ➢ ಪರಿಸರ ಸಂರಕ್ಷಣೆ
- ➢ ಜನನ–ಮರಣ ನೋಂದಣಿ
- ➢ ಅರಣ್ಯ ಸಂರಕ್ಷಣೆ
- ➢ ಕೃಷಿ ವಿಸ್ತರಣಾ ಕಾರ್ಯಕ್ರಮ
- ➢ ಶುಲ್ಕ, ದಂಡ, ತೆರಿಗೆ ಸಂಗ್ರಹ

**ಆದಾಯದ ಮೂಲಗಳು:–**

- ❖ ನೀರು, ಆರೋಗ್ಯ, ಶಿಕ್ಷಣ ಮತ್ತು ಗ್ರಂಥಾಲಯ ಉಪಕರಣಗಳಿಂದ ಸಂಗ್ರಹ ಮೊತ್ತ
- ❖ ಕಟ್ಟಡ, ಖಾಲಿಜಾಗ, ವಾಣಿಜ್ಯ ಮತ್ತು ಮಾರುಕಟ್ಟೆ ತೆರಿಗೆ
- ❖ ಪ್ರವಾಸಿ ತಾಣಗಳಿಂದ ಸಂಗ್ರಹ ತೆರಿಗೆ
- ❖ ಪಂಚಾಯಿತಿ ಆಸ್ತಿಯಿಂದ ಬರುವ ತೆರಿಗೆ
- ❖ ರಾಜ್ಯ ಸರ್ಕಾರದಿಂದ ಬರುವ ಧನಸಹಾಯ

**ರಚನೆ:–**

**ಗ್ರಾಮಸಭೆ:–**

- ✓ ಗ್ರಾಮದ ಮತದಾರರು ಸದಸ್ಯರಾಗಿರುತ್ತಾರೆ.
- ✓ ವರ್ಷದಲ್ಲಿ ಎರಡು ಬಾರಿ ಸಭೆ ಸೇರುತ್ತಾರೆ
- ✓ ಗ್ರಾಮ ಸಭೆಯನ್ನು ಗ್ರಾಮ ಪಂಚಾಯ್ತಿ ಅಧ್ಯಕ್ಷರು ಕರೆಯುತ್ತಾರೆ/ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಹಣಾಧಿಕಾರಿ ಕರೆಯುತ್ತಾರೆ.
- ✓ ಅಧ್ಯಕ್ಷತೆ ಗ್ರಾಮ ಪಂಚಾಯ್ತಿ ಅಧ್ಯಕ್ಷರು /ಉಪಾಧ್ಯಕ್ಷರು/ಮತದಾರರ ಸದಸ್ಯರಲ್ಲಿ ಒಬ್ಬರು
- ✓ ಈ ಸಭೆಯಲ್ಲಿ ಗ್ರಾಮದ ಸಮಸ್ಯೆಗಳ ಬಗ್ಗೆ ಚರ್ಚೆ
- ✓ ಗ್ರಾಮಸ್ಥರು ಇಲ್ಲಿ ಸಲಹೆ ನೀಡಬಹುದು
- ✓ ಗ್ರಾಮದ ಫಲಾನುಭವಿಗಳನ್ನು ಗುರುತಿಸಬಹುದು.

**ಗ್ರಾಮ ಪಂಚಾಯ್ತಿ:–**

- ಜನಸಂಖ್ಯೆ ಆಧಾರದಲ್ಲಿ ರಚನೆ
- 5000 ದಿಂದ 7000 ಜನರಿಗೆ ಒಂದು ಗ್ರಾಮ ಪಂಚಾಯ್ತಿ ರಚನೆ
- ಮಲೆನಾಡುಗಳಲ್ಲಿ 2500 ಕ್ಕಿಂತ ಹೆಚ್ಚು ಜನರಿಗೆ ಒಂದು ಗ್ರಾಮ ಪಂಚಾಯ್ತಿ ರಚನೆ
- ಸದಸ್ಯರನ್ನು ವಯಸ್ಕ ಮತದಾನದ ಮೂಲಕ ಆಯ್ಕೆ
- 400 ಜನರಿಗೆ ಒಬ್ಬ ಪ್ರತಿನಿಧಿ ಆಯ್ಕೆ
- ಎಸ್.ಸಿ, ಎಸ್.ಟಿ, ಒ.ಬಿ.ಸಿ, ಮಹಿಳೆಯರಿಗೆ ಮೀಸಲು ಸ್ಥಾನಗಳಿರುತ್ತವೆ.
- ಅಧಿಕಾರದ ಅವಧಿ ಮೊದಲ ಸಭೆಯಿಂದ ಪೂರ್ಣ ಐದು ವರ್ಷದ ಅವಧಿಗೆ
- ತಿಂಗಳಿಗೆ ಒಂದು ಸಭೆ ನಡೆಸಬೇಕು
- ಸಭೆ ನಡೆಸಲು ಕೋರಂ ಒಟ್ಟು ಸದಸ್ಯರ ಕನಿಷ್ಠ ಅರ್ಧದಷ್ಟು ಇರಬೇಕು

RAMALINGAPPA L Asst Teacher

- ಅಧ್ಯಕ್ಷರು & ಉಪಾಧ್ಯಕ್ಷರು ಆಯ್ಕೆ ಹಾಗೂ ಸ್ಥಾಯಿ ಸಮಿತಿಗಲ ರಚನೆ
- ಗ್ರಾಮ ಪಂಚಾಯ್ತಿ ಕಾರ್ಯಪಾಲನೆಗೆ ಪಿ.ಡಿ.ಒ ರನ್ನು ಸರ್ಕಾರ ನೇಮಕ ಮಾಡುತ್ತದೆ.

**ತಾಲ್ಲೂಕು ಪಂಚಾಯ್ತಿ:–**

- ವಯಸ್ಕ ಮತದಾನದ ಮೂಲಕ ಆಯ್ಕೆ
- 12500 ರಿಂದ 15000 ಜನಸಂಖ್ಯೆಗೆ ಒಬ್ಬ ಸದಸ್ಯರು ಆಯ್ಕೆ
- ಮೀಸಲಾತಿ ಅನುಪಾಲನೆ
- ಅಧಿಕಾರದ ಅವಧಿ 5 ವರ್ಷಗಳು
- ಸದರಿ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಎಂ.ಎಲ್.ಎ, ಎಂ.ಎಲ್.ಸಿ, ಎಂ.ಪಿ & ರಾಜ್ಯಸಭೆ ಸದಸ್ಯರು ಕೂಡ ತಾ. ಪಂ. ಸದಸ್ಯರಾಗಿರುತ್ತಾರೆ.
- ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಯ 1/5 ರಷ್ಟು ಗ್ರಾಮ ಪಂಚಾಯ್ತಿ ಅಧ್ಯಕ್ಷರು ಕೂಡ ತಾಲ್ಲೂಕು ಪಂಚಾಯ್ತಿ ಸದಸ್ಯರಾಗಿರುತ್ತಾರೆ.
- ಇವರನ್ನು ಲಾಟರಿ ಮೂಲಕ ಆಯ್ಕೆ ಮಾಡುತ್ತಾರೆ.
- ಇವರ ಅವಧಿ ಒಂದು ವರ್ಷ(ಪರ್ಯಾಯ ಕ್ರಮ)
- ಇವರು ಅಧ್ಯಕ್ಷರು, ಉಪಾಧ್ಯಕ್ಷರ ಆಯ್ಕೆ ಹಾಗೂ ಅವಿಶ್ವಾಸ ನಿರ್ಣಯ ಸಭೆಯ ಹೊರೆತು ಪಡಿಸಿ, ಆದರೆ ಇತರೆ ಸಬೆಯಲ್ಲಿ ಭಾಗಿ
- ಎರಡು ತಿಂಗಳಿಗೊಮ್ಮೆ ಸಬೆ ನಡೆಸಬೇಕು
- ಅಧ್ಯಕ್ಷರು, ಉಪಾಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ.
- ಸ್ಥಾಯಿ ಸಮಿತಿಗಳ ರಚನೆ
- ಸರ್ಕಾರ ದೈನಂದಿನ ಕಾರ್ಯ ನಿರ್ವಹಣೆಗೆ 'ಕಾರ್ಯನಿರ್ವಹಣಾಧಿಕಾರಿಯನ್ನು ನೇಮಕ

**ಕಾರ್ಯಗಳು:–**

- ✓ ಗ್ರಾಮ ಪಂಚಾಯ್ತಿ ವಾರ್ಷಿಕ ಯೋಜನಾ ಪ್ರಸ್ತಾವನೆ ಕ್ರೋಡಿಕರಿಸಿ ಜಿಲ್ಲಾ ಪಂಚಾಯ್ತಿಗೆ ಸಲ್ಲಿಸುತ್ತದೆ.
- ✓ ರಾಜ್ಯ ಸಕಾರ/ಜಿಲ್ಲಾ ಪಂಚಾಯ್ತಿ ಸೂಚಿಸುವ ಕಲ್ಯಾಣ ಕಾರ್ಯ ಯೋಜನೆ ಕಾರ್ಯಗತಗೊಳಿಸಲು ನೆರವು

**ಜಿಲ್ಲಾ ಪಂಚಾಯ್ತಿ:–**

- ❖ ಇವರನ್ನು ವಯಸ್ಕ ಮತದಾನದ ಮೂಲಕ ಆಯ್ಕೆ
- ❖ ಕೊಡಗು – 18000, ಬೆಂಗಳೂರು ನಗರ – 20000, ಚಿಕ್ಕಮಗಳೂರು/ಉತ್ತರ ಕನ್ನಡ – 30000, ಉಳಿದ ಜಿಲ್ಲೆಗಳಲ್ಲಿ – 35000 ದಿಂದ 45000 ಜನಸಂಖ್ಯೆಗೆ ಒಬ್ಬರಂತೆ ಆಯ್ಕೆ
- ❖ ಮೀಸಲಾತಿ ಅನುಪಾಲನೆ
- ❖ ಅಧಿಕಾರದ ಅವಧಿ 5 ವರ್ಷಗಳು
- ❖ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸ್ಥಾಯಿ ಸಮಿತಿಗಳ ರಚನೆ
- ❖ ಎರಡು ತಿಂಗಳಿಗೊಮ್ಮೆ ಸಭೆ ನಡೆಸಬೇಕು
- ❖ ಪ್ರಾಕೃತಿಕ ವಿಕೋಪಗಳು ಸಂಭವಿಸಿದಾಗ ಅಧ್ಯಕ್ಷರು 5 ಲಕ್ಷದವರೆಗೂ ವೆಚ್ಚ ಮಾಡಬಹುದು
- ❖ ಇಲ್ಲಿ ಐದು ಸ್ಥಾಯಿ ಸಮಿತಿಗಳ ರಚನೆ
- ❖ ಆಡಳಿತ ನಿರ್ವಹಣೆಗೆ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ(ಸಿ.ಇ.ಒ) ನೇಮಕ
- ❖ ಸಿ.ಇ.ಒ ಸಭೆ, ಚರ್ಚೆಗಳಲ್ಲಿ ಭಾಗವಹಿಸಿಬಹುದು ಆದರೆ ಮತ ಹಾಕುವಂತಿಲ್ಲ

**ಕಾರ್ಯಗಳು:–**

- ಸರ್ಕಾರದ ಯೋಜನೆಗಳ ಅನುಷ್ಠಾನ
- ಸ್ಥಳೀಯ ಸಂಸ್ಥೆಗಳ ಜೊತೆ ಸಹಕಾರ ವಾತಾವಣ ಸೃಷ್ಟಿ
- ಜಿಲ್ಲೆಯ ಎಲ್ಲಾ ಇಲಾಖೆಗಳ ಜೊತೆ ಸಮನ್ವಯತೆ ಸಾಧಿಸುವುದು
- ಸಹಕಾರಿ ಸಂಘ & ಸಹಕಾರಿ ಬ್ಯಾಂಕುಗಳಿಗೆ ಪ್ರೋತ್ಸಾಹ
- ರಾಜ್ಯ ಸರ್ಕಾರದ ನಿರ್ದೇಶನದಂತೆ ಕೆಲಸ ನಿರ್ವಹಣೆ

**ನಗರ ಸ್ಥಳೀಯ ಸಂಸ್ಥೆಗಳು:–**

1. ನಗರ ಪಾಲಿಕೆ (ಮಹಾನಗರ ಪಾಲಿಕೆ) – ಮುಖ್ಯ ನಗರ
2. ನಗರಸಭೆ/ಪುರಸಭೆ – ನಗರ & ಪಟ್ಟಣಗಳಲ್ಲಿ
3. ದಂಡು ಪ್ರದೇಶದ ವಿಭಾಗ – ರಕ್ಷಣಾ ಪಡೆಯ ಹಿಡಿತದಲ್ಲಿರುವ ಪ್ರದೇಶ

**ಕಾರ್ಯಗಳು:–**

RAMALINGAPPA L Asst. Teacher

- ✓ ಆಯವ್ಯಯ ಪಟ್ಟಿ ತಯಾರಿಸಿ ಅನುಮೋದನೆ
- ✓ ನಗರ ಆಡಳಿತ ನೋಡಿಕೊಳ್ಳುವುದು.
- ✓ ಉತ್ತಮ ನಗರ ಯೋಜನೆ ತಯಾರಿಸಿ ಕಾರ್ಯರೂಪಕ್ಕೆ ತರುವುದು
- ✓ ಉತ್ತಮ ಮೂಲಭೂತ ಸೌಲಭ್ಯ ಒದಗಿಸುವುದು
- ✓ ಒಳ ಚರಂಡಿ, ಘನತ್ಯಾಜ್ಯ ವಿಲೇವಾರಿ & ಸ್ವಚ್ಛತೆ ಕಾಪಾಡುವುದು.
- ✓ ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವುದು
- ✓ ಜನನ ಮರಣಗಳ ನೋಂದಣಿ
- ✓ ಕೊಳೆಗೇರಿಗಳ ನಿವಾಸಿಗಳ ಜೀವನ ಮಟ್ಟದ ಸುಧಾರಣೆ
- ✓ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುವುದು
- ✓ ಮಳೆ ನೀರು ಕೋಯ್ಲು ಯೋಜನೆ ನಿರ್ಮಾಣ

**ವರಮಾನ ಮೂಲಗಳು:–**

1. ಕಟ್ಟಡ ತೆರಿಗೆ & ಖಾಲಿ ಸ್ಥಳದ ತೆರಿಗೆ
2. ವಾಣಿಜ್ಯ ತೆರಿಗೆ
3. ನೀರಿನ ತೆರಿಗೆ
4. ಕಟ್ಟಡಗಳ ಬಾಡಿಗೆ
5. ರಾಜ್ಯ ಸರ್ಕಾರದಿಂದ ಅನುದಾನ

**ನಗರ ಸ್ಥಳೀಯ ಸಂಸ್ಥೆಗಳ ಸಂರಚನೆ:–**

- ➢ ಪಟ್ಟಣ/ಪುರಸಭೆ/ಪಟ್ಟಣಸಭೆ:– 20000 ದಿಂದ 50000 ಜನಸಂಖ್ಯೆ ಹೊಂದಿದ್ದರೆ
- ➢ ನಗರ/ನಗರಸಭೆ:– 50000 ದಿಂದ 1 ಲಕ್ಷ ಜನಸಂಖ್ಯೆ ಹೊಂದಿದ್ದರೆ
- ➢ ವಯಸ್ಕ ಮತದಾನದ ಮೂಲಕ ಆಯ್ಕೆ\
- ➢ ಸದಸ್ಯರನ್ನು ಕೌನ್ಸಿಲರ್ ಎಂದು ಕರೆಯುತ್ತಾರೆ.
- ➢ ಪುರಸಭೆ – 23 ರಿಂದ 27 ಸದಸ್ಯರು
- ➢ ನಗರಸಭೆ – 31 ರಿಂದ 37 ಸದಸ್ಯರು
- ➢ ರಾಜ್ಯ ಸರ್ಕಾರ 5 ಜನ ಸದಸ್ಯರನ್ನು ನಾಮನಿರ್ದೇಶನ ಮಾಡುತ್ತದೆ.
- ➢ ಎಂ.ಎಲ್.ಎ, ಎಂ.ಎಲ್.ಸಿ, ಎಂ.ಪಿ ಇವರು ಮತದಾನ ಮಾಡುವ ಹಕ್ಕು ಹೊಂದಿರುತ್ತಾರೆ.
- ➢ ಮೀಸಲಾತಿ ಅನುಪಾಲನೆ
- ➢ ಅಧ್ಯಕ್ಷರು & ಉಪಾಧ್ಯಕ್ಷರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ
- ➢ ನಾಲ್ಕು ಸ್ಥಾಯಿ ಸಮಿತಿಗಳಿರುತ್ತವೆ.
- ➢ ರಾಜ್ಯ ಸರ್ಕಾರದಿಂದ ನೇಮಕವಾದ ಮುಖ್ಯ ಅಧಿಕಾರಿ/ಚೀಫ್ ಆಫೀಸರ್ ಇರುತ್ತಾರೆ.

**ಮಹಾನಗರ ಪಾಲಿಕೆ:–**

- ❖ 1976 ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ ಅನ್ವಯ ಮಹಾನಗರ ಪಾಲಿಕೆ ರಚನೆ
- ❖ 2 ಲಕ್ಷ ಜನಸಂಖ್ಯೆ & 1 ಕೋಟಿ ವರಮಾನವಿರುವ ನಗರ ಪ್ರದೇಶವನ್ನು ಮಹಾನಗರ ಪಾಲಿಕೆ ಎನ್ನುವರು.
- ❖ ಸದಸ್ಯರನ್ನು ವಯಸ್ಕ ಮತದಾನದ ಮೂಲಕ ಆಯ್ಕೆ
- ❖ ಪಾಲಿಕೆ ಸದಸ್ಯರನ್ನು ಕಾರ್ಪುರೇಟರ್ ಎನ್ನುವರು
- ❖ 30 ರಿಂದ 100 ಸದಸ್ಯರಿರುತ್ತಾರೆ.

**ಕರ್ನಾಟಕದಲ್ಲಿರುವ ಮಹಾನಗರ ಪಾಲಿಕೆಗಳು:–**

1. ಮೈಸೂರು
2. ಹುಬ್ಬಳ್ಳಿ–ದಾರಾವಾಡ
3. ಬಳ್ಳಾರಿ
4. ಬೆಳಗಾವಿ
5. ಕಲಬುರಗಿ
6. ದಾವಣಗೆರೆ
7. ಮಂಗಳೂರು
8. ಶಿವಮೊಗ್ಗ
9. ತುಮಕೂರು
10. ವಿಜಯಪುರ

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿ.ಬಿ.ಎಂ.ಪಿ):–**

- ✓ 198 ಜನ ಪಾಲಿಕೆ ಸದಸ್ಯರಿದ್ದಾರೆ
- ✓ ಚಿಕ್ಕ–ಚಿಕ್ಕ ವಾರ್ಡ್‌ಗಳಾಗಿ ವಿಂಗಡಣೆ
- ✓ ವಯಸ್ಕರ ಮತದಾನ ಮೂಲಕ ಆಯ್ಕೆ
- ✓ ಮೀಸಲಾತಿ ಅನುಪಾಲನೆ
- ✓ 5 ಜನರನ್ನು ರಾಜ್ಯ ಸರ್ಕಾರ ನಾಮನಿರ್ದೇಶನ
- ✓ ಎಂ.ಪಿ & ಎಂ.ಎಲ್.ಎ ಸದಸ್ಯರಾಗಿರುತ್ತಾರೆ
- ✓ ಅಧಿಕಾರದ ಅವಧಿ 5 ವರ್ಷಗಳು

RAMALINGAPPA L Asst. Teacher

- ✓ ಮಹಾಪೌರ & ಉಪಮಹಾಪೌರ (ಅಧಿಕಾರದ ಅವಧಿ ಒಂದು ವರ್ಷ) ಆಯ್ಕೆ
- ✓ ಕಾರ್ಯನಿರ್ವಹಣೆಗೆ ಐ.ಎ.ಎಸ್ ಅಧಿಕಾರಿಯನ್ನು ನೇಮಕ ಮಾಡಿರುತ್ತದೆ.

**ಸಮಾಜಶಾಸ್ತ್ರ ವಿಭಾಗ**

**ಅಧ್ಯಾಯ–3**

## ಸಾಮಾಜಿಕ ಸಂಸ್ಥೆಗಳು

- ➢ ಸಾಮಾಜಿಕ ಅಗತ್ಯತೆಗಳ ಸುತ್ತ ರೂಪಿತವಾಗಿರುವ ನೈತಿಕ ನಿಯಮಗಳು, ಮೌಲ್ಯಗಳು ಹಾಗೂ ಅಂತಸ್ತುಗಳು ವಹಿಸುವ ಪಾತ್ರದ ಸುಭದ್ರವಾದ ಸಮಷ್ಟಿಯನ್ನು ಸಂಸ್ಥೆ ಎನ್ನುವರು
- ➢ ಸಮ್ನರ್ ಪ್ರಕಾರ:– ನಮ್ಮ ಆಸೆ ಆಕಾಂಕ್ಷೆ ಈಡೇರಿಸಲು ಸ್ಥಿರವಾಗಿ ಸ್ಥಾಪನೆಯಾಗಿರುವುದನ್ನು ಸಂಸ್ಥೆ ಎನ್ನುವರು
- ➢ ಸಾಮಾಜಿಕ ಸಂಸ್ಥೆಗಳು:– ರೂಢಿ, ಕಾನೂನು, ಕುಟುಂಬ, ವಿವಾಹ & ರಾಜವ್ಯವಸ್ಥೆ
- ➢ ಮ್ಯಾಕೈವರ್ & ಪೇಜ್ ಪ್ರಕಾರ:– ಸಾಮಾಜಿಕ ಸಂಸ್ಥೆಗಳು ಒಂದು ಗುಂಪಿನ ಚಟುವಟಿಕೆಗಳಿಗಾಗಿ ರೂಪಿಸಿಕೊಂಡಿರುವ ಒಂದು ಸಂಸ್ಥೆ.

**ಲಕ್ಷಣಗಳು:–**

1. ಸಾರ್ವತ್ರಿಕತೆ
2. ಸಾಮಾಜಕ ಸಂಸ್ಥೆಗಳಲ್ಲಿ ನಿಯಮಗಳಿವೆ
3. ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತದೆ.
4. ಲಿಖಿತ & ಅಲಿಖಿತ ನೀತಿ ನಿಯಮಗಳು
5. ಪರಸ್ಪರ ಆಂತರಿಕ ಸಂಬಂಧ

**ಮಹತ್ವ:–**

1. ಸಂಸ್ಕೃತಿಯ ವಾಹಕವಾಗಿದೆ.
2. ಸದಸ್ಯರ ಅಗತ್ಯಗಳನ್ನು ಪೂರೈಸುತ್ತದೆ.
3. ಸದಸ್ಯರ ಸಾಮಾಜಿಕ ವರ್ತನೆಗಳನ್ನು ರೂಪಿಸುತ್ತದೆ & ನಿಯಂತ್ರಿಸುತ್ತದೆ.
4. ಸಾಮಾಜಿಕ ಸಂಸ್ಥೆಗಳು ವ್ಯಕ್ತಿಗಳಿಗೆ ಪಾತ್ರ ನೀಡುತ್ತದೆ.

**ಸಾಮಾಜಿಕ ಸಂಸ್ಥೆಗಳು:–**

1. ಕುಟುಂಬ
2. ವಿವಾಹ
3. ಧರ್ಮ

**ಕುಟುಂಬ:–**

- ❖ ಕುಟುಂಬ ಸಮಾಜದ ಮೂಲ ಘಟಕ
- ❖ ಇದು ಜಗತ್ತಿನ್ನೆಲ್ಲಡೆ ಕಂಡುಬರುತ್ತದೆ.
- ❖ ಸಾಮಾಜಿಕ ಪ್ರಕ್ರಿಯೆಗಳಲ್ಲಿ ಭಾಗವಹಿಸಲು ಸಹಾಯ ಮಾಡುತ್ತದೆ.

**ಕಾರ್ಯಗಳು:–**

- ✓ ಸದಸ್ಯರ ಪೋಷಣೆ
- ✓ ಭದ್ರತೆ & ಸಾಮಾಜೀಕರಣ

**ವಿವಾಹದ ಕಾರ್ಯಗಳು:–**

1. ಸಾಮಾಜಿಕ ಅನುಮತಿ
2. ಕುಟುಂಬ ಸ್ಥಾಪನೆಗೆ ತಳಹದಿ
3. ಸಂವಿಧಾನದಲ್ಲಿ ಕಾನೂನು ಬದ್ಧತೆ

**ಧರ್ಮದ ಕಾರ್ಯಗಳು:–**

1. ಸಾಮಾಜೀಕರಣದ ಕಾರ್ಯ
2. ಸಾಮಾಜಿಕ ಐಕ್ಯತೆ
3. ಮೌಲ್ಯಗಳ ಸಂರಕ್ಷಣೆ
4. ಸಾಮಾಜಿಕ ನಿಯಂತ್ರಣ

**ಅಧ್ಯಾಯ–4**

## ಸಮಾಜದ ಪ್ರಕಾರಗಳು

- ➢ ಮಾನವ ಸಮಾಜವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ರೂಪಿಸಲ್ಪಟ್ಟ ಶಾಸ್ತ್ರವೇ ಸಮಾಜಶಾಸ್ತ್ರ
- ➢ ವ್ಯಕ್ತಿ & ಸಮಾಜ ಒಂದೇ ನಾಣ್ಯದ ಎರಡು ಮುಖಗಳು
- ➢ ಮಾನವ ಒಬ್ಬ ಸಮಾಜ ಜೀವಿ ಹಾಗೂ ಸಂಘಜೀವಿ

RAMALINGAPPA L Asst. Teacher

- ಮಾನವನ ಸರ್ವತೋಮುಖ ಬೆಳವಣಿಗೆಗೆ ಸಮಾಜ ಕಾರಣ
- ಗ್ರಾಮೀಣ ಪ್ರದೇಶದಲ್ಲಿ ಚಟುವಟಿಕೆಗಳು
- ನಗರ ಪ್ರದೇಶಗಳಲ್ಲಿ ಚಟುವಟಿಕೆಗಳು

**ಸಮಾಜದ ಅರ್ಥ:–**

- ಸಮಾಜ ಇಂಗ್ಲೀಷ್ ಭಾಷೆಯಲ್ಲಿ ಸೊಸೈಟಿ ಎನ್ನುವರು
- ಸೊಸೈಟಿ ಎಂಬ ಪದ ಲ್ಯಾಟಿನ್ ಭಾಷೆಯ 'ಸೋಷೊಯಸ್' ಪದದಿಂದ ಬಂದಿದೆ
- ಅಂದರೆ, ಒಡನಾಡಿತನ, ಗೆಳೆತನ
- ಒಡನಾಡಿಗಳ ಒಡನಾಟದಿಂದ ಒಟ್ಟುಗೂಡಿರುವ ವ್ಯವಸ್ಥೆ ಸಮಾಜ
- ಮೆಕೈವರ್ & ಪೇಜ್ ಪ್ರಕಾರ:– ಸಾಮಾಜಿಕ ಸಂಬಂಧಗಳ ಬಲೆಯೇ ಸಮಾಜ

**ಸ್ವರೂಪ:–**

- ಸಮಾಜವು ಸಮೂಹಗಳ ಸಮೂಹವಾಗಿದೆ. ಹೆಚ್.ಎಂ. ಜಾನ್ಸನ್:–"ಸಮೂಹಗಳ ಸಮೂಹವೇ ಸಮಾಜ"
- ಸಮಾಜವು ಸಾಮಾಜಿಕ ಸಂಬಂಧಗಳ ಬಲೆಯಾಗಿದೆ.
- ಹೋಲಿಕ & ಸಾಮ್ಯತೆ
- ಸಹಕಾರ & ಶ್ರಮ ವಿಭಜನೆ
- ಸಾಮಾಜಿಕ ನಿಯಂತ್ರಣ
- ಸಮಾಜವು ಗತಶೀಲವಾದುದು

**ಸಮಾಜದ ಮಹತ್ವ/ಪ್ರಾಮುಖ್ಯತೆ:–**

1. ಸರ್ವವ್ಯಾಪಕವಾದುದು
2. ರಕ್ಷಣೆ ಹಾಗೂ ಸಂಪೋಷಣೆಗೆ ಅಗತ್ಯವಾದುದು
3. ವ್ಯಕ್ತಿತ್ವ ನಿರ್ಮಾಣದಲ್ಲಿ ಸಮಾಜದ ಪಾತ್ರ ಹಿರಿದಾದುದ್ದು
4. ಬದುಕನ್ನು ಗಟ್ಟಿಗೊಳಿಸುತ್ತದೆ.

**ಸಮಾಜದ ಪ್ರಕಾರಗಳು:–**

**1.ಬೇಟೆ & ಆಹಾರ ಸಂಗ್ರಹಣಾ ಸಮಾಜ:–**

- ✓ ಮೊದಲನೇ ಹಂತ
- ✓ ಪ್ರಾಚೀನ ಹಾಗೂ ಸರಳ ಹಂತ
- ✓ ಚಿಕ್ಕ ಸಮುದಾಯ
- ✓ ವಯಸ್ಸು/ಲಿಂಗದ ಆಧಾರದಲ್ಲಿ ಸ್ಥಾನಮಾನ ನಿಗಧಿ
- ✓ ಸಂಪತ್ತು ಸಂಪಾದಿಸುವ ಆಸೆಯಿಲ್ಲ
- ✓ ಹಂಚಿಕೊಂಡು ಬದುಕುವ ಲಕ್ಷಣ
- ✓ ಆಹಾರಕ್ಕೆ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು.

**2. ಪಶುಪಾಲನೆ ಸಮಾಜ:–**

- ಇದು ಎರಡನೇ ಹಂತ
- ಜೀವನಕ್ಕೆ ಪಶುಗಳನ್ನು ಸಾಕುವ ಸಮಾಜ
- 100 ರಿಂದ 1000 ಜನರಿರುತ್ತಾರೆ.
- ಅಲೆಮಾರಿ ಸಮಾಜ
- ಅಲೆಮಾರಿ ಬುಡಕಟ್ಟು ಸಮಾಜ

**3. ಕೃಷಿ ಸಮಾಜ:–**

- ಹೆಚ್ಚಿನ ಜನರು ವ್ಯವಸಾಯವನ್ನು ಅವಲಂಬಿಸಿ ಬದುಕುವ ಸಮಾಜವನ್ನೇ 'ಕೃಷಿ ಸಮಾಜ' ಎನ್ನುವರು
- ವ್ಯವಸಾಯದ ಮೂಲಕ ಆಹಾರ ಉತ್ಪಾದನೆ
- ಕೃಷಿಗೆ ಪ್ರಾಣಿ & ನೇಗಿಲನ್ನು ಬಳಸುತ್ತಾರೆ
- ಭಾರತ ಗ್ರಾಮಗಳ ನಾಡು ಕೃಷಿಕರ ಬೀಡು
- ಋಗ್ವೇದ ಗ್ರಾಮದ ಮುಖ್ಯಸ್ಥನಿಗೆ 'ಗ್ರಾಮಸ್ಥ' ಎನ್ನುವರು. ಇಲ್ಲಿ ಗ್ರಾಮಗಳ ಒಕ್ಕೂಟಕ್ಕೆ ವಿಶ, ಜನ, ದೇಶ ಎಂದು ಕರೆಯುತ್ತಿದ್ದರು
- ಮಹಾಭಾರತದಲ್ಲಿ ಗ್ರಾಮದ ಮುಖ್ಯಸ್ಥನಿಗೆ ಗ್ರಾಮೀಣಿ ಎನ್ನುತ್ತಿದ್ದರು. ಗ್ರಾಮಗಳ ಒಕ್ಕೂಟದ ಮುಖ್ಯಸ್ಥನಿಗೆ ದಶಮುಖಿ, ಶತಮುಖಿ, ಅಧಿಪತಿ ಎನ್ನುತ್ತಿದ್ದರು
- ಬೋಗಾರ್ಡಸ್ ಪ್ರಕಾರ:– ಕಡಿಮೆ ಜನಸಂಖ್ಯೆಯುಳ್ಳ ಸರಳ, ಮಿತವ್ಯಯವಾದ ಜೀವನ ಸಾಗಿಸುವ, ಪ್ರಾಥಮಿಕ ಸಂಬಂಧಗಳನ್ನೊಳಗೊಂಡ ಕುಟುಂಬಗಳ ಒಕ್ಕೂಟವೇ ಗ್ರಾಮ ಸಮುದಾಯ
- ಎಸ್.ಪಿ ದುಬೆ ಪ್ರಕಾರ:– ಒಂದೇ ಸ್ಥಳದಲ್ಲಿ ವಾಸವಾಗಿರುವ ಕುಟುಂಬಗಳ ಸಮೂಹವೇ ಗ್ರಾಮ
- ಸಾ.ಶ.ಪೂ 3000 ನೇಗಿಲ ಸಂಶೋಧನೆ 'ಕೃಷಿಯಲ್ಲಿ ಕ್ರಾಂತಿ' ಆರಂಭಿಸಿತು.
- ಗ್ರಾಮಗಳು ಭಾರತೀಯ ಸಂಸ್ಕೃತಿ & ಪರಂಪರೆಯನ್ನು ಉಳಿಸಿವೆ.
- ಗ್ರಾಮಗಳಲ್ಲಿ 59% ಪುರುಷರು ಹಾಗೂ 75% ಮಹಿಳೆಯರು ವಾಸ

RAMALINGAPPA L Asst Teacher

**4. ಗ್ರಾಮೀಣ ಸಮಾಜ:–**

- ✓ ಗ್ರಾಮವು ಗಾತ್ರದಲ್ಲಿ ಚಿಕ್ಕದು
- ✓ ಪ್ರಾಥಮಿಕ ಹಾಗೂ ಕೌಟುಂಬಿಕ ಸಂಬಂಧಗಳ ಪ್ರಭಾವ
- ✓ ಸರಳ ಆರ್ಥಿಕ ಜೀವನ
- ✓ ನೆರೆಹೊರೆ

**ಕೃಷಿ ಸಮಾಜದ ಸಾಮಾಜಿಕ ರಚನೆ:–**

**ಜಾಜ್‌ಮಾನಿ ಪದ್ಧತಿ:–**

- ➢ ಇಲ್ಲಿ ಒಂದು ಜಾತಿಯು ಮತ್ತೊಂದು ಜಾತಿ ಸಮೂಹದ ಮೇಲೆ ಅವಲಂಬಿತವಾಗಿತ್ತು
- ➢ ಎರಡು ವರ್ಗಗಳಿದ್ದವು:–
  1. ಯಜಮಾನ
  2. ಸೇವಕ

**ಜಮೀನ್ದಾರಿ ಪದ್ಧತಿ:–**

- ✓ ಇದು ಪರ್ಶಿಯನ್ ಪದ ಅಂದರೆ ಜಮೀನನ್ನು ಹೊಂದಿರುವವನು
- ✓ ಇದರ ಉಗಮ ಹೆದಲಿ ಸುಲ್ತಾನರ ಕಾಲದಲ್ಲಿ
- ✓ 14ನೇ ಶತಮಾನದಲ್ಲಿ ಜಮೀನ್ದಾರ್ ಅಂದರೆ ಒಂದು ಪ್ರದೇಶದ ಮುಖ್ಯಸ್ಥ
- ✓ ಉದಾ:– ರಜಪೂತರ ರಾಯ್ & ರಾಣ
- ✓ ಜಮೀನ್ದಾರಿ ಪದದ ಬಳಕೆ ಮೊಗಲರ ಕಾಲದಲ್ಲಿ ಸರ್ವಸಾಮಾನ್ಯವಾಗಿ ಬಳಸಲ್ಪಟ್ಟಿದೆ.

**ರೈತವಾರಿ ಪದ್ಧತಿ:–**

- ➢ ಬ್ರಿಟಿಷರ ಜಮೀನ್ದಾರಿ ಪದ್ಧತಿಯಿಂದ ರೈತರಿಗೆ ರಕ್ಷಣೆ ನೀಡಲು
- ➢ ಕೋರ್ಟ್ ಆಫ್ ಡೈರೆಕ್ಟರ್ 1817ರಲ್ಲಿ ಈ ಪದ್ಧತಿ ಜಾರಿ

**ಮಹಲ್ವಾರಿ ಪದ್ಧತಿ:–**

- ❖ ಜಮೀನ್ದಾರಿ & ರೈತವಾರಿ ಪದ್ಧತಿಯಿಂದ ರೈತರ ಶೋಷಣೆ ತಡೆಯಲು
- ❖ ಮಹಲ್/ಎಸ್ಟೇಟ್ ಉತ್ಪಾದನೆಯ ಆಧಾರದ ಮೇಲೆ ಕಂದಾಯ ನಿಗಧಿ
- ❖ ಮಹಲ್ ಎಂದರೆ ತಾಲ್ಲೂಕು ಎಂದರ್ಥ
- ❖ ಅನೇಕ ಮಹಲ್‌ಗೆ ಒಡೆಯನಿರುತ್ತಿದ್ದ
- ❖ ಈ ಒಡೆಯನೇ ಕಂದಾಯ ವಸೂಲಿ ಮಾಡುತ್ತಿದ್ದ

**ಗೇಣಿ ಪದ್ಧತಿ:–**

- ✓ ಗೇಣಿದಾರರು:– ಭೂಮಾಲಿಕನಿಂದ ಸಾಗುವಳಿಗಾಗಿ ಭೂಮಿಯನ್ನು ಪಡೆಯುವವರು
- ✓ ಎರಡು ಪ್ರಕಾರಗಳು:–
  1. ಶಾಶ್ವತ ಹಕ್ಕಿನ ಗೇಣಿದಾರರು
  2. ತಾತ್ಕಾಲಿಕ ಹಕ್ಕಿನ ಗೇಣಿದಾರರು
- ✓ ಗೇಣಿದಾರರಿಗೆ ತಮ್ಮ ಭೂಮಿಯ ಮೇಲೆ ಹಕ್ಕಿರಲಿಲ್ಲ
- ✓ ಗೇಣಿದಾರರಿಗೆ ಹಿಡುವಳಿಯ ಭದ್ರತೆ ನೀಡಲು ಕಾನೂನು ಜಾರಿ
- ✓ ಭೂಸುಧಾರಣೆ ಕಾಯ್ದೆ ಜಾರಿ

**ನಗರ ಸಮಾಜ:–**

- ➢ ಇದು ಮಾದರಿ ಸಮಾಜವಾಗಿದ್ದು ಸಂಕೀರ್ಣವೆನಿಸಿದೆ.
- ➢ ಇಲ್ಲಿನ ಜೀವನ ವಿವಿಧ ಸಮಸ್ಯೆಗಳಿಗೆ ಕಾರಣವಾಗಿದೆ.
- ➢ ಆದರೂ ಜೀವನ ಉತ್ತಮವಾಗಿರುತ್ತದೆ.
- ➢ ಭಾರತದಲ್ಲಿ ನಗರ ಸಮಾಜವು ನಾಗರಿಕತೆ ಕಾಲದಿಂದಲೂ ಇದೆ
- ➢ ಸಿಂಧೂ ನಾಗರಿಕತೆಯಲ್ಲಿ ಉತ್ತಮ ನಗರ ಯೋಜನೆ ಕಾಣಬಹುದ
- ➢ ಭಾರತದಲ್ಲಿ ನಗರ ಜೀವನ ವಿಶ್ವಕ್ಕೆ ಮಾದರಿಯಾಗಿದೆ.

**ಕೈಗಾರಿಕಾ ಸಮಾಜ:–**

- ❖ ವೈಜ್ಞಾನಿಕ ವಿಧಾನದಲ್ಲಿ ಉತ್ಪಾದನೆ
- ❖ ಶಕ್ತಿಮೂಲಗಳ ಶೋಧನೆ
- ❖ ಬಹುತೇಕ ಜನರು ಕೈಗಾರಿಕೆಗಳನ್ನು ಅವಲಂಬಿಸಿದ್ದಾರೆ
- ❖ ಇಲ್ಲಿ ಉತ್ಪಾದನೆ ಯಂತ್ರಚಾಲಿತವಾಗಿದೆ.
- ❖ ಶ್ರಮ ವಿಭಜನೆಯನ್ನು ಕಾಣಬಹುದು

**ಲಕ್ಷಣಗಳು:–**

1. ಕೈಗಾರಿಕಾ ಆಧಾರಿತ ಆರ್ಥಿಕತೆ
2. ದುಡಿಮೆಯಲ್ಲಿ ವೃತ್ತಿಪರತೆ
3. ಸಾರಿಗೆ & ಸಂಪರ್ಕ ವ್ಯವಸ್ಥೆಯಿದೆ
4. ವಲಸೆಯ ಹೆಚ್ಚಳ

RAMALINGAPPA L Asst. Teacher

**ಮಾಹಿತಿ ಸಮಾಜ:–**

- ✓ ಇದು ಹೆಚ್ಚು ಪ್ರಾಮುಖ್ಯತೆ ಪಡೆದಿದೆ
- ✓ ಶಿಕ್ಷಣ, ವಾಣಿಜ್ಯ & ಕೈಗಾರಿಕೆ ಅಂಶಗಳಿಗೆ ಸಹಾಯಕ
- ✓ ಸಮಾಜ ಆರ್ಥಿಕ ಜೀವನದಲ್ಲಿ ಮಾಹಿತಿ ತಂತ್ರಜ್ಞಾನ ಪ್ರಾಮುಖ್ಯತೆ ಪಡೆದಿದೆ.
- ✓ ಮಾರುಕಟ್ಟೆ ತಂತ್ರಜ್ಞಾನ ಆಧಾರಿತವಾಗಿದೆ.
- ✓ ಕಂಪ್ಯೂಟರ್ ಯುಗ & ಜ್ಞಾನ ಹೆಚ್ಚಳ

**ಭೂಗೋಳಶಾಸ್ತ್ರ**
**ಅಧ್ಯಾಯ–3**

## ವಾಯುಗೋಳ

- ➢ ಭೂಮಿಯನ್ನು ಸುತ್ತುವರೆದಿರುವ ಅನಿಲಗಳ, ಧೂಳಿನಕಣ & ನೀರಾವಿಯ ತೆಳುವಾದ ಪದರವನ್ನು ವಾಯುಗೋಳ ಎನ್ನುವರು
- ➢ ಭೂ ಮೇಲ್ಮೈ:– ಬಾಹ್ಯಾಕಾಶಗಳ & ರಕ್ಷಣವಲಯ
- ➢ ವಾಯುಗೋಳದ ದಪ್ಪ 1000 ಕಿ.ಮೀ
- ➢ ಜೀವಿಗಳ ಉಸಿರಾಟಕ್ಕೆ ಅನಿಗಳ ಅವಶ್ಯಕ
- ➢ ವಾಯುಗೋಳವು ಸೂರ್ಯನ ಶಾಖವನ್ನು ಹೀರಿಕೊಳ್ಳುತ್ತದೆ.

**ವಾಯುಗೋಳದ ಸಂರಚನೆ:–**

**ಮುಖ್ಯ ಅನಿಲಗಳು:–**

- ✓ ಸಾರಜನಕ – ಶೇ.78.08%
- ✓ ಆಮ್ಲಜನಕ – ಶೇ.20.94%
- ✓ ಆರ್ಗಾನ್ ಶೇ.0.93%
- ✓ ಇಂಗಾಲದ ಡೈ ಆಕ್ಸೈಡ್ – ಶೇ.0.03
- ✓ ಓಜೋನ್ – ಶೇ.0.000005%

**ವಾಯುಗೋಳದ ಪದರುಗಳು**

1. **ಪರಿವರ್ತನಾ ಮಂಡಲ:–**

- ❖ ಅತ್ಯಂತ ಕೆಳಪದರು
- ❖ ಎತ್ತರ ಸಮಭಾಜಕ ವೃತ್ತದ ಬಳಿ 18 ಕಿ.ಮೀ & ದ್ರುವ ಪ್ರದೇಶದ ಬಳಿ 8 ಕಿ.ಮಿ
- ❖ ಇಲ್ಲಿ ಉಷ್ಣಾಂಶ, ಒತ್ತಡ, ಮಾರುತಗಳು, ಮೋಡ & ಮಳೆ ಕಂಡುಬರುತ್ತದೆ.
- ❖ ಎತ್ತರಕ್ಕೆ ಹೋದಂತೆ ಉಷ್ಣಾಂಶ & ಒತ್ತಡ ಕಡಿಮೆಯಾಗುತ್ತದೆ.

2. **ಸಮೋಷ್ಣ ಮಂಡಲ:–**

- ✓ ಇದು 2ನೇ ಪದರಾಗಿದೆ.
- ✓ ಎತ್ತರ 50 ಕಿ.ಮೀ
- ✓ ಇಲ್ಲಿ ಓಜೋನ್ ಅನಿಲ ಪದರ ಕಂಡುಬರುತ್ತದೆ.
- ✓ ಇದು ಭೂಮಿಯ ಮೇಲೆ ಜೀವರಾಶಿಗಳನ್ನು ರಕ್ಷಿಸುತ್ತದೆ.
- ✓ ಮೋಡ ರಹಿತವಾಗಿರುವುದರಿಂದ ಜೆಟ್ ವಿಮಾನಗಳು ಹಾರಾಡಲು ಸೂಕ್ತ

3. **ಮಧ್ಯಂತರ ಮಂಡಲ:–**

- ➢ ಎತ್ತರ 80 ಕಿ.ಮೀ
- ➢ ಎತ್ತರಕ್ಕೆ ಹೋದಂತೆ ಉಷ್ಣಾಂಶವು ಕಡಿಮೆ
- ➢ ಇದು ಅತಿ ಶೀತವಾದ ವಲಯವಾಗಿದೆ.

4. **ಉಷ್ಣತಾ ಮಂಡಲ:–**

- ✓ ಉಷ್ಣಾಂಶವು ತೀವ್ರವಾಗಿ ಹೆಚ್ಚಾಗುತ್ತದೆ.
- ✓ ಅಧಿಕ ಉಷ್ಣಾಂಶದ ಫಲವಾಗಿ ಅನಿಲದ ಕಣಗಳು ಆಯಾನುಗಳಾಗಿ ಪರಿವರ್ತನೆ
- ✓ ಇದನ್ನು ಆಯಾನುಮಂಡಲ ಎನ್ನುವರು
- ✓ ಇಲ್ಲಿನ ಆಯಾನುಗಳು ಭೂಮಿಯಿಂದ ಪ್ರಸಾರಗೊಂಡ ರೇಡಿಯೋ ತರಂಗಗಳನ್ನು ಪುನಃ ಭೂಮಿಯ ಕಡೆ ಪ್ರತಿಫಲಿಸುತ್ತವೆ.

5. **ಬಾಹ್ಯಮಂಡಲ:–**

- ➢ ವಾಯುಗೋಳದ ಘಟಕಾಂಶಗಳು ವಿರಳ
- ➢ ಒತ್ತಡ ಅತ್ಯಂತ ಕಡಿಮೆ

**ಹವಾಗುಣದ ಘಟಕಾಂಶಗಳು:–**

1. ಉಷ್ಣಾಂಶ
2. ಒತ್ತಡ
3. ಮಾರುತಗಳು
4. ತೇವಾಂಶ
5. ಮೋಡ
6. ಮಳೆ

RAMALINGAPPA L Asst. Teacher

**ವಾಯುಗೋಳದ ಉಷ್ಣಾಂಶ:–**

- ಭೂಮಿಯ ಶಕ್ತಿಗೆ ಸೂರ್ಯ ಕಾರಣ
- ಭೂಮಿಯು ಸೂರ್ಯನಿಂದ ಪಡೆಯುವ ಶಾಖವನ್ನು ಸೂರ್ಯಜನ್ಯ ಶಾಖ ಎನ್ನುವರು
- ಉಷ್ಣಾಂಶವನ್ನು ಉಷ್ಣತಾಮಾಪಕದಿಂದ ಅಳೆಯಲಾಗುತ್ತದೆ.
- ಉಪಕರಣಗಳು:– ಸೆಂಟಿಗ್ರೇಡ್/ಫ್ಯಾರನ್ ಹೀಟ್

**ಉಷ್ಣಾಂಶದ ಮೇಲೆ ಪ್ರಭಾವ ಬೀರುವ ಅಂಶಗಳು:–**

1. ಅಕ್ಷಾಂಶ & ಒಂದು ಸ್ಥಳದ ಎತ್ತರ
2. ಸಮುದ್ರದಿಂದ ಇರುವ ದೂರ
3. ಮಾರುತಗಳು
4. ಸಾಗರ ಪ್ರವಾಹಗಳು
5. ಮೋಡ & ಮಳೆ

**ಉಷ್ಣಾಂಶದ ಸಾಮಾನ್ಯ ಇಳಿಕೆ ಪ್ರಮಾಣ:–**

- ✓ ಎತ್ತರಕ್ಕೆ ಹೋದಂತೆ ಅನಿಲಗಳ ಪ್ರಮಾಣ ಕಡಿಮೆ, ಒತ್ತಡ ಕಡಿಮೆ, ಉಷ್ಣಾಂಶವು ಕಡಿಮೆಯಾಗುತ್ತದೆ ಇದನ್ನೆ ಉಷ್ಣಾಂಶದ ಸಾಮಾನ್ಯ ಇಳಿಕೆಯ ಪ್ರಮಾಣ ಎನ್ನುವರು.
- ✓ ಉಷ್ಣಾಂಶದ ವಿಪರ್ಯಯ:–ಕೆಲವು ಸಂದರ್ಭಗಳಲ್ಲಿ ಎತ್ತರಕ್ಕೆ ಹೋದಂತೆ ಉಷ್ಣಾಂಶ ಹೆಚ್ಚಾಗುತ್ತದೆ ಇದನ್ನು ಉಷ್ಣಾಂಶ ವಿಪರ್ಯಯ ಎನ್ನುವರು
- ✓ ಉದಾ:– ಪರ್ವತಗಳ ಕಣಿವೆ ಪ್ರದೇಶ

**ಕಾರಣಗಳು:–**

1. ದೀರ್ಘಾವಧಿಯ ರಾತ್ರಿ
2. ಮೋಡರಹಿತ ಶುಭ್ರ ಆಕಾಶ
3. ಒಣಗಾಳಿ
4. ಮಾರುತ ರಹಿತ ಸ್ಥಿತಿ
5. ಹಿಮಾವೃತ ಪರ್ವತದ ಮೇಲ್ಭಾಗ

**ಉಷ್ಣಾಂಶದ ವಲಯಗಳು:–**

**ಉಷ್ಣ ವಲಯ:–**

- ✓ ಸೂರ್ಯನ ಶಾಖ ಅಧಿಕ (ಸಮಭಾಜಕ ವೃತ್ತ)
- ✓ ಇದು ಸೂರ್ಯನ ನೇರವಾದ ಕಿರಣಗಳನ್ನು ಪಡೆಯುತ್ತದೆ.

**ಸಮಶೀತೋಷ್ಣ ವಲಯಗಳು:–**

- ❖ ಇಲ್ಲಿ ಉಷ್ಣಾಂಶವು ಸಮಸ್ಥಿತಿಯಲ್ಲಿರುತ್ತದೆ.
- ❖ $23^{1}/_{2}{}^{0}$ ಯಿಂದ $66^{1}/_{2}{}^{0}$ ಉತ್ತರ ಮತ್ತು ದಕ್ಷಿಣ ಅಕ್ಷಾಂಶಗಳಲ್ಲಿ

**ಶೀತವಲಯಗಳು:–**

- ✓ ಅತಿ ಶೀತ ಪ್ರದೇಶಗಳು
- ✓ ಸೂರ್ಯನ ಕಿರಣಗಳು ಅತ್ಯಂತ ಓರೆಯಾಗಿ ಬೀಳುತ್ತವೆ
- ✓ ಉಷ್ಣಾಂಶ ಕಡಿಮೆ

ಸಮೋಷ್ಣರೇಖೆ:– ಒಂದೇ ಪ್ರಮಾಣದ ಉಷ್ಣಾಂಶವನ್ನು ಹೊಂದಿರುವ ಸ್ಥಳಗಳನ್ನು ಸೇರಿಸುವಂತೆ ಎಳೆಯಬಹುದಾದ ಕಾಲ್ಪನಿಕ ರೇಖೆಗಳು

**ವಾಯುಗೋಳದ ಒತ್ತಡ:–**

- ವಾಯು ತೂಕವನ್ನು ಒಂದಿದ್ದು, ಭೂಮಿಯ ಮೇಲೆ ಅದು ಒತ್ತಡವನ್ನುಂಟು ಮಾಡುವುದು ಇದನ್ನೆ ವಾಯುಗೋಳದ ಒತ್ತಡ ಎನ್ನುವರು
- ಒತ್ತಡ ಅಳೆಯುವ ಉಪಕರಣ:– ವಾಯುಭಾರ ಮಾಪಕ
- ಸಮುದ್ರ ಮಟ್ಟದಲ್ಲಿ ಸರಾಸರಿ ಒತ್ತಡ:– 1013.25 ಮಿಲಿಬಾರ್‌ಗಳಷ್ಟು

**ವಾಯುಗೋಳದ ಒತ್ತಡದ ಮೇಲೆ ಪ್ರಭಾವ ಬೀರುವ ಅಂಶಗಳು:–**

1. ಉಷ್ಣಾಂಶ
2. ಭೂಮಿಯ ದೈನಂದಿನ ಚಲನೆ
3. ಸಮುದ್ರ ಮಟ್ಟದಿಂದ ಎತ್ತರ
4. ನೀರಾವಿ

**ಪ್ರಪಂಚದ ಮುಖ್ಯ ಒತ್ತಡ ಪ್ರದೇಶಗಳು:–**

1. ಸಮಭಾಜಕವೃತ್ತದ ಕಡಿಮೆ ಒತ್ತಡ ಪ್ರದೇಶ
2. ಉತ್ತರ ಉಪಉಷ್ಣವಲಯದ ಅಧಿಕ ಒತ್ತಡ ಪ್ರದೇಶ
3. ದಕ್ಷಿಣ ಉಪಉಷ್ಣವಲಯದ ಅಧಿಕ ಒತ್ತಡ ಪ್ರದೇಶ
4. ಉತ್ತರ ಉಪಧ್ರುವೀಯ ಕಡಿಮೆ ಒತ್ತಡ ಪ್ರದೇಶ
5. ದಕ್ಷಿಣ ಉಪಧ್ರುವೀಯ ಕಡಿಮೆ ಒತ್ತಡ ಪ್ರದೇಶ
6. ಉತ್ತರ ಧ್ರುವೀಯ ಅಧಿಕ ಒತ್ತಡ ಪ್ರದೇಶ

RAMALINGAPPA L Asst. Teacher

7. ದಕ್ಷಿಣ ಧ್ರುವೀಯ ಅಧಿಕ ಒತ್ತಡ ಪ್ರದೇಶ

**ಮಾರುತಗಳು:–**

- ❖ ಭೂಮಿಯ ಮೇಲ್ಮೈಗೆ ಸಮಾನಾಂತರವಾಗಿ ಅಧಿಕ ಒತ್ತಡದಿಂದ ಕಡಿಮೆ ಒತ್ತಡದ ಕಡೆಗೆ ಚಲಿಸುವ ವಾಯುವನ್ನು 'ಮಾರುತ' ಎನ್ನುವರು
- ❖ ಮಾರುತವು ಬೀಸುವುದನ್ನು ತಿಳಿಯಲು 'ಪವನ ದಿಕ್ಸೂಚಿ' ಉಪಕರಣವನ್ನು ಬಳಸುವರು
- ❖ ವಾಯುವೇಗವನ್ನು ಅಳೆಯಲು 'ಪವನ ವೇಗಮಾಪಕ' ಉಪಕರಣ ಬಳಸುವರು

**ಮಾರುತಗಳ ವಿಧಗಳು:–**

**ನಿರಂತರ ಮಾರುತಗಳು:–**

1. ವಾಣಿಜ್ಯ ಮಾರುತಗಳು
2. ಪ್ರತಿವಾಣಿಜ್ಯ ಮಾರುತಗಳು
3. ಧ್ರುವೀಯ ಮಾರುತಗಳು

**ನಿಯತಕಾಲಿಕ ಮಾರುತಗಳು:–**

1. ನೈಋತ್ಯ ಮಾನ್ಸೂನ್ ಮಾರುತಗಳು
2. ಈಶಾನ್ಯ ಮಾನ್ಸೂನ್ ಮಾರುತಗಳು

**ಸ್ಥಳೀಯ ಮಾರುತಗಳು:–**

1. ಭೂ ಗಾಳಿ
2. ಸಮುದ್ರ ಗಾಳಿ
3. ಪರ್ವತ ಗಾಳಿ
4. ಕಣಿವೆ ಗಾಳಿ ಇತರೆ ಮಾರುತಗಳು

**ವಿವಿಧ ದೇಶಗಳಲ್ಲಿ ಕರೆಯುವ ಹೆಸರುಗಳು:–**

- ✓ ಭಾರತ – ಲೂ
- ✓ ಯು.ಎಸ್.ಎ – ಚಿನೂಕ್/ಹಿಮಭಕ್ಷಕ
- ✓ ಆಲ್ಫ್‌ಪರ್ವತ – ಪೋಹ್ನ
- ✓ ಫ್ರಾನ್ಸ್ – ಮಿಸ್ಟ್ರಲ್
- ✓ ಸಹರ ಮರುಭೂಮಿ – ಸಿರಾಕ್ಕೋ
- ✓ ಆಸ್ಟ್ರೇಲಿಯಾ – ಬ್ರಿಕ್‌ಫೀಲ್ಡರ್
- ✓ ಅಂಟಾರ್ಕ್ಟಿಕಾ – ಬ್ಲಿಜರ್ಡ್

**ಆವರ್ತ & ಪ್ರತ್ಯಾವರ್ತ ಮಾರುತಗಳು:–**

**ಆವರ್ತ ಮಾರುತಗಳು:–**

- ➢ ಉಷ್ಣವಲಯದ ಆವರ್ತ ಮಾರುತ
- ➢ ಸಮಶೀತೋಷ್ಣವಲಯದ ಆವರ್ತ ಮಾರುತ

**ಪ್ರತ್ಯಾವರ್ತ ಮಾರುತಗಳು:–**

**ವಾಯುಗೋಳದ ಆರ್ದತೆ:–**

- ❖ ವಾಯುವಿನಲ್ಲಿರುವ ನೀರಾವಿ ಅಥವಾ ತೇವಾಂಶದ ಪ್ರಮಾಣವನ್ನು ಆರ್ದ್ರತೆ ಎನ್ನುವರು
- ❖ ಆರ್ದ್ರತೆಯನ್ನು ಅಳೆಯಲು 'ಆರ್ದ್ರತಾಮಾಪಕ' ಉಪಕರಣ ಬಳಸುವರು
- ❖ ಆರ್ದ್ರತೆಯ ವಿಧಗಳು:–
  1. ಸಮಗ್ರ ಆರ್ದ್ರತೆ
  2. ಸಾಪೇಕ್ಷ ಆರ್ದ್ರತೆ
  3. ನಿರ್ದಿಷ್ಟ ಆರ್ದ್ರತೆ

**ಮೋಡಗಳು:–**

- ✓ ವಾಯುಗೋಳದಲ್ಲಿ ಉಷ್ಣಾಂಶವು ಕಡಿಮೆಯಾದಾಗ ಅದರಲ್ಲಿನ ಜಲಾಂಶವು ಘನೀಕರಣಗೊಂಡು ನಿರ್ಮಾಣವಾಗುವ ಸಣ್ಣ ಸಣ್ಣ ನೀರಿನ ಹನಿಗಳು ಅಥವಾ ಹಿಮಕಣಗಳ ರಾಶಿಯನ್ನು 'ಮೋಡ' ಎನ್ನುವರು.
- ✓ ಮೋಡಗಳ ವಿಧಗಳು:–
  1. ಪದರು ಮೋಡಗಳು
  2. ರಾಶಿ ಮೋಡಗಳು
  3. ಹಿಮಕಣ ಮೋಡಗಳು
  4. ರಾಶಿವೃಷ್ಟಿ ಮೋಡಗಳು

**ಮಳೆ:–**

- ➢ ವಾಯುಗೋಳದಲ್ಲಿ ಜಲಾಂಶವು ಘನೀಕರಣ ಹೊಂದಿ ಭೂಮಿಯ ಮೇಲೆ ಬೀಳುವ ನೀರಿನ ಹನಿಗಳನ್ನು 'ಮಳೆ' ಎನ್ನುವರು
- ➢ ಮಳೆಯ ಪ್ರಮಾಣವನ್ನು 'ಮಳೆಯ ಮಾಪಕ' ದಿಂದ ಅಳೆಯುವರು
- ➢ ಮೀ.ಮೀ ಅಥವಾ ಅಂಗುಲಿಗಳಲ್ಲಿ ಅಳೆಯುವರು
- ➢ ಮಳೆಯ ವಿಧಗಳು:–
  1. ಪರಿಸರಣ ಮಳೆ
  2. ಪರ್ವತ ಮಳೆ

RAMALINGAPPA L Asst Teacher

3. ಆವರ್ತ ಮಳೆ

**ಹವಾಗುಣ ಮತ್ತು ವಾಯುಗುಣದ ವ್ಯತ್ಯಾಸಗಳು:–**

**ಹವಾಗುಣ:–**

- ✓ ಒಂದು ಸ್ಥಳದ ಅಲ್ಪಾವಧಿಯ ವಾಯುಗೋಳದ ಪರಿಸ್ಥಿತಿಯನ್ನು 'ಹವಾಗುಣ' ಎನ್ನುವರು
- ✓ ಉದಾ:– ಮೋಡಯುಕ್ತ ಪ್ರಖರ ಬಿಸಿಲು, ಹಿತಕರ ಹವಾಗುಣ
- ✓ ಹವಾಗುಣದ ವೈಜ್ಞಾನಿಕ ಅಧ್ಯಯನಕ್ಕೆ ಹವಾಗುಣಶಾಸ್ತ್ರ ಎನ್ನುವರು.

**ವಾಯುಗುಣ:–**

- ✓ ಒಂದು ಪ್ರದೇಶದ ದೀರ್ಘಾವಧಿಯ ಹವಾಗುಣ ಸರಾಸರಿಯನ್ನು 'ವಾಯುಗುಣ' ಎನ್ನುವರ
- ✓ ಉದಾ:– ಸಮಭಾಜಕ ವೃತ್ತದ ವಾಯುಗುಣ, ತಂಡ್ರಾ ವಾಯುಗುಣ, ಮರುಭೂಮಿ ವಾಯುಗು
- ✓ ವಾಯುಗುಣ ವೈಜ್ಞಾನಿಕ ಅಧ್ಯಯನಕ್ಕೆ ವಾಯುಗುಣಶಾಸ್ತ್ರ ಎನ್ನುವರು

**ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳು:–**

1. ಅಕ್ಷಾಂಶ
2. ಸಮುದ್ರ ಮಟ್ಟದಿಂದ ಇರುವ ಎತ್ತರ
3. ಮಾರುತಗಳು
4. ಸಮುದ್ರದಿಂದ ಇರುವ ದೂರ
5. ಭೂಮಿ & ಜಲರಾಶಿಗಳ ಹಂಚಿಕೆ
6. ಸಾಗರ ಪ್ರವಾಹಗಳು

## ಅಧ್ಯಾಯ–4
# ಜಲಗೋಳ

**ವಿವಿಧ ಜಲರಾಶಿಗಳ ಪರಿಚಯ:–**

- ➢ ಸಾಗರಗಳು
- ➢ ಸಮುದ್ರಗಳು
- ➢ ಖಾರಿಗಳು
- ➢ ಕೊಲ್ಲಿಗಳು
- ➢ ಜಲಸಂಧಿಗಳು
- ➢ ಭೂಕಂಠ

**ಸಾಗರ ತಳದ ಭೂ ಸ್ವರೂಪಗಳು:–**

1. ಖಂಡಾವರಣ ಪ್ರದೇಶ
2. ಖಂಡಾವರಣ ಇಳಿಜಾರು
3. ಆಳಸಾಗರ ಮೈದಾನ
4. ಸಾಗರ ತಗ್ಗುಗಳು
5. ಸಾಗರದ ನೀರಿನ ಉಷ್ಣಾಂಶ & ಲವಣತೆ

**ಉಷ್ಣಾಂಶ:–**

- ❖ ನೀರಿನ ಉಷ್ಣಾಂಶವು ವಿವಿಧ ಅಕ್ಷಾಂಶ & ಆಳಗಳಲ್ಲಿ ಭಿನ್ನವಾಗಿರುತ್ತವೆ.
- ❖ ಸಮಭಾಜಕ ವೃತ್ತ ಸಮೀಪ ಉಷ್ಣವಲಯದ ಸಾಗರದ ನೀರು ಹೆಚ್ಚು ಉಷ್ಣಾಂಶ
- ❖ ಆಳಕ್ಕೆ ಹೋದಂತೆ ಉಷ್ಣಾಂಶ ಕಡಿಮೆ
- ❖ ಸೂರ್ಯನ ಕಿರಣಗಳು ನೀರಿನಲ್ಲಿ 200 ಮೀಟರ್‌ಗಳವರೆಗೆ ಮಾತ್ರ ಪ್ರವೇಶಿಸುತ್ತವೆ.
- ❖ ಇಲ್ಲಿ ಅನೇಕ ಜೀವಿಗಳು ಕಂಡುಬರುತ್ತವೆ.

**ಲವಣತೆ:–**

- ➢ ಸಾಗರದ ನೀರಿನಲ್ಲಿ ಕರಗಿರುವ ಉಪ್ಪಿನಾಂಶಗಳ ಪ್ರಮಾಣ
- ➢ ಸಾಗರಗಳ ನೀರು ಉಪ್ಪಾಗಿರುತ್ತವೆ. ಕಾರಣ ಸಾಗರಗಳಲ್ಲಿ ಉಪ್ಪು & ಖನಿಜಾಂಶಗಳು ಕರಗಿರುತ್ತವೆ
- ➢ ಸಾಗರದ ನೀರಿನ ಸರಾಸರಿ ಲವಣತೆ $35/^{000}$
- ➢ ಸಾಗರದ ನೀರು ಆವಿಯಾಗಿ ಅದರಲ್ಲಿನ ಲವಣಗಳು ಅಲ್ಲಿಯೇ ಉಳಿದಿರುವುದರಿಂದ ಸಾಗರದ ನೀರು ಉಪ್ಪಾಗಿರುತ್ತವೆ.
- ➢ ಲವಣತೆಯು ಸಂಕ್ರಾಂತಿ ವೃತ್ತಗಳ ವಲಯದಲ್ಲಿ ಹೆಚ್ಚು
- ➢ ಅದೇ ಧ್ರುವ & ಸಮಭಾಜಕವೃತ್ತಗಳಲ್ಲಿ ಕಡಿಮೆ
- ➢ ಸಮಭಾಜಕವೃತ್ತ ಪ್ರದೇಶದಲ್ಲಿ ಅಧಿಕ ಭಾಷ್ಪಿಭವನ & ಅಧಿಕ ಮಳೆಯಿಂದ ಲವಣತೆ ಕಡಿಮೆ

**ಸಾಗರ ಪ್ರವಾಹಗಳು:–**

RAMALINGAPPA L Asst Teacher

✓ ನಿಶ್ಚಿತ ದಿಕ್ಕಿನಲ್ಲಿ ನಿರಂತರವಾಗಿ ಚಲಿಸುವ ಸಾಗರದ ಮೇಲ್ಮೈ ನೀರನ್ನು ಸಾಗರ ಪ್ರವಾಹ ಎನ್ನುವರು

**ಸಾಗರ ಪ್ರವಾಹದ ವಿಧಗಳು:-**

1. ಉಷ್ಣ ಸಾಗರ ಪ್ರವಾಹಗಳು
2. ಶೀತ ಸಾಗರ ಪ್ರವಾಹಗಳು

**ಸಾಗರ ಪ್ರವಾಹಗಳ ಮೇಲೆ ಪ್ರಭಾವ ಬೀರುವ ಅಂಶಗಳು:-**

1. ಭೂಮಿಯ ದೈನಂದಿನ ಚಲನೆ
2. ಉಷ್ಣಾಂಶ
3. ಮಾರುತಗಳು
4. ಲವಣತೆ
5. ಭೂಭಾಗಗಳ ಆಕಾರ

**ಪೆಸಿಫಿಕ್ ಸಾಗರದ ಪ್ರವಾಹಗಳು:-**

- **ಉತ್ತರ ಪೆಸಿಫಿಕ್ ಸಾಗರ ಪ್ರವಾಹ**

  **ಉಷ್ಣ ಸಾಗರ ಪ್ರವಾಹ:-**
  - ➢ ಉತ್ತರ ಸಮಭಾಜಕವೃತ್ತ ಪ್ರವಾಹ
  - ➢ ಕ್ಯಾಲೊಫೋರ್ನಿಯಾ ಪ್ರವಾಹ

  **ಶೀತಸಾಗರ ಪ್ರವಾಹ:-**
  - ➢ ಕುರೊಶಿವೊ ಪ್ರವಾಹ
  - ➢ ಓಯಾಶಿವೊ ಪ್ರವಾಹ

- **ದಕ್ಷಿಣ ಪೆಸಿಫಿಕ್ ಸಾಗರ ಪ್ರವಾಹ:-**

  **ಉಷ್ಣಸಾಗರ ಪ್ರವಾಹ:-**
  - ➢ ದಕ್ಷಿಣ ಸಮಭಾಜಕವೃತ್ತ ಪ್ರವಾಹ
  - ➢ ಪೂರ್ವ ಆಸ್ಟ್ರೇಲಿಯನ್ ಪ್ರವಾಹ

  **ಶೀತಸಾಗರ ಪ್ರವಾಹ:-**
  - ➢ ಪೆರು/ಹಂಬೋಲ್ಟ್ ಪ್ರವಾಹ
  - ➢ ಪಶ್ಚಿಮ ಮಾರುತಗಳ ಪ್ರವಾಹ

**ಅಟ್ಲಾಂಟಿಕ್ ಸಾಗರ ಪ್ರವಾಹಗಳು:-**

- **ಉತ್ತರ ಅಟ್ಲಾಂಟಿಕ್ ಸಾಗರ ಪ್ರವಾಹ:-**

  **ಉಷ್ಣಸಾಗರ ಪ್ರವಾಹ:-**
  - ❖ ಉತ್ತರ ಸಮಭಾಜಕವೃತ್ತ ಪ್ರವಾಹ
  - ❖ ಗಲ್ಫ್ ಸ್ಟ್ರೀಂ ಪ್ರವಾಹ
  - ❖ ಉತ್ತರ ಅಟ್ಲಾಂಟಿಕ್ ಪ್ರವಾಹ

  **ಶೀತಸಾಗರ ಪ್ರವಾಹ:-**
  - ❖ ನಾರ್ವೆಜಿಯನ್ ಪ್ರವಾಹ
  - ❖ ಲಾಬ್ರಿಡಾರ್ ಪ್ರವಾಹ
  - ❖ ಕ್ಯಾನರಿ ಪ್ರವಾಹ

- **ದಕ್ಷಿಣ ಅಟ್ಲಾಂಟಿಕ್ ಸಾಗರ ಪ್ರವಾಹ**

  **ಉಷ್ಣಸಾಗರ ಪ್ರವಾಹ:-**
  - ○ ದಕ್ಷಿಣ ಸಮಭಾಜಕವೃತ್ತ ಪ್ರವಾಹ
  - ○ ಬ್ರೆಜಿಲ್ ಪ್ರವಾಹ

  **ಶೀತಸಾಗರ ಪ್ರವಾಹ:-**
  - ➢ ಪಾಕ್‌ಲ್ಯಾಂಡ್ ಪ್ರವಾಹ
  - ➢ ಬೆಂಗ್ವುಲಾ ಪ್ರವಾಹ

**ಹಿಂದೂ ಮಹಾಸಾಗರ ಪ್ರವಾಹಗಳು:-**

- **ಉತ್ತರ ಹಿಂದೂ ಮಹಾಸಾಗರ ಪ್ರವಾಹ:-**
  - ➢ ಬೇಸಿಗೆ:- ನೈಋುತ್ಯದಿಂದ ಈಶಾನ್ಯದ ಕಡೆ
  - ➢ ಶರತ್‌ಕಾಲ:- ಈಶಾನ್ಯದಿಂದ ನೈಋುತ್ಯದ ಕಡೆ

- **ದಕ್ಷಿಣ ಹಿಂದೂ ಮಹಾಸಾಗರ ಪ್ರವಾಹ:-**

  **ಉಷ್ಣಸಾಗರ ಪ್ರವಾಹ:-**
  - ❖ ಮೊಝಾಂಬಿಕ
  - ❖ ಮಲಗಾಸಿ
  - ❖ ಅಗುಲಸ್

  **ಶೀತಸಾಗರ ಪ್ರವಾಹಗಳು:-**
  - ❖ ಪಶ್ಚಿಮ ಆಸ್ಟ್ರೇಲಿಯಾ ಪ್ರವಾಹ

**ಉಬ್ಬರ ವಿಳಿತಗಳು:-**

- ➢ ಸಮುದ್ರ ಅಥವಾ ಸಾಗರದ ನೀರಿನ ಮಟ್ಟವು ನಿರಂತರ & ನಿಯಮಿತವಾಗಿ ಏರುವುದು ಹಾಗೂ ಇಳಿಯುವುದನ್ನು 'ಉಬ್ಬರ ವಿಳಿತ' ಎನ್ನುವರು
- ➢ ಉಬ್ಬರ ವಿಳಿತಕ್ಕೆ ಕಾರಣಗಳು:-
  1. ಚಂದ್ರ & ಸೂರ್ಯರ ಗುರುತ್ವಾಕರ್ಷಣಾ ಶಕ್ತಿ
  2. ಭೂಮಿಯ ದೈನಂದಿನ ಚಲನೆ
  3. ಭೂಮಿಯ ಕೇಂದ್ರಾಪಗಮನ ಶಕ್ತಿ
- ➢ ಉಬ್ಬರ ವಿಳಿತಗಳ ವಿಧಗಳು:-
  1. ಏರುಬ್ಬರ
  2. ಇಳಿಯುಬ್ಬರ

RAMALINGAPPA L Asst. Teacher

- ಸೂರ್ಯ & ಚಂದ್ರರ ಸ್ಥಾನದ ಆಧಾರದಲ್ಲಿ ಎರಡು ವಿಧಗಳು:–
  1. ಗರಿಷ್ಠ ಅಥವಾ ಅಧಿಕ ಭರತ
  2. ಕನಿಷ್ಠ ಉಬ್ಬರ

**ಉಬ್ಬರವಿಳಿತಗಳಿಂದ ಆಗುವ ಉಪಯೋಗಗಳು:–**

- ದೊಡ್ಡ ನೌಕಾಯಾನಕ್ಕ ಉಪಯುಕ್ತ
- ಬಂದರು & ಹಡಗು ನಿಲ್ದಾನ ನಿರ್ಮಿಸಲು ಸಹಕಾರಿ
- ನೀರು ಬಂದರುಗಳ ತೀರವನ್ನು ಸ್ವಚ್ಛಗೊಳಿಸುತ್ತವೆ.
- ಉಪ್ಪನ್ನು ಉತ್ಪಾದಿಸಲು ಸಹಕಾರಿ
- ಮೀನುಗಾರಿಕೆಗೆ ನೆರವಾಗುತ್ತದೆ.
- ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಉಪಯುಕ್ತ

**ಸಾಗರಗಳ ಸಂರಕ್ಷಣ ಕ್ರಮಗಳು:–**

- ✓ ಕಚ್ಚಾ ತೈಲವನ್ನು ಕೊಳವೆ ಮಾರ್ಗಗಳ ಮೂಲಕ ಸಾಗಿಸುವುದು
- ✓ ಅಣು ಇಂಧನ ತಾಜ್ಯವಸ್ತುಗಳನ್ನು ಸಾಗರಗಳಿಗೆ ಹಾಕುವುದನ್ನು ನಿಯಂತ್ರಿಸಲಬೇಕು
- ✓ ತೀರವಲಯದಲ್ಲಿ ಪೆಟ್ರೋ–ರಾಸಾಯನಿಕ ದುರ್ಗಂಧ ವಸ್ತುಗಳ ನಿಯಂತ್ರಣ
- ✓ ತ್ಯಾಜ್ಯ ವಸ್ತುಗಳನ್ನು ಬಂದರುಗಳ ಸಮೀಪದಲ್ಲಿ ಎಸೆಯುವುದು ನಿಯಂತ್ರಿಸುವುದು
- ✓ ತೀರಗಳಲ್ಲಿ ಅದಿರು ಸಂಗ್ರಹಣೆ & ಗಣಿಗಾರಿಕೆ ಕಾರ್ಯ ನಿಯಂತ್ರಿಸುವುದು
- ✓ ಕರಾವಳಿಯ ಮರಳು ತೆಗೆಯುವುದು & ವಿನಾಶಗಳ ನಿಯಂತ್ರಣ

## ಅಧ್ಯಾಯ–5
## ಜೀವಿಗೋಳ

**ಜೀವಿಪರಿಸರಶಾಸ್ತ್ರ:–**

- ಜೀವಿಗಳು & ಜೀವಿಗಲ ಭೌತಿಕ, ರಾಸಾಯನಿಕ, ಜೈವಿಕ ಪರಿಸರಗಳ ನಡುವಿನ ಸಂಬಂಧ ವಿವರಿಸುವ ಶಾಸ್ತ್ರ.
- ಜೀವಿಗಳು & ಪ್ರಾಕೃತಿಕ ಪರಿಸರದ ನಡುವೆ ಸಮತೋಲನ ಸಂಬಂಧ
- ಇದನ್ನೆ ಜೈವಿಕ ಪರಿಸರ ಸಮತೋಲನ ಎನ್ನುವರು

**ಜೀವಿಪರಿಸರ ವ್ಯವಸ್ಥೆ:–**

- ✓ ಪ್ರಾಣಿವರ್ಗ & ಸಸ್ಯವರ್ಗಗಳು ತಮ್ಮ ಸುತ್ತಲಿನ ಸಜೀವ & ನಿರ್ಜೀವ ಭಾಗಗಳ ನಡುವಿನ ಪರಸ್ಪರ ಸಂಬಂಧ

**ಪರಿಸರ:–**

- ✓ ಎಲ್ಲಾ ಜೀವಿಗಳು & ಜೈವಿಕ ವಸ್ತುಗಳು ವಾಸಿಸುವ ಸುತ್ತಲಿನ ಸನ್ನಿವೇಶವನ್ನು 'ಪರಿಸರ' ಎನ್ನುವರು.
- ✓ ಎರಡು ವಿಧ:–
  1. ಪ್ರಾಕೃತಿಕ ಅಥವಾ ಭೌಗೋಳಿಕ ಪರಿಸರ
  2. ಸಾಂಸ್ಕೃತಿಕ ಅಥವಾ ಮಾನವ ನಿರ್ಮಿತ ಪರಿಸರ

**ಪರಿಸರ ಮಾಲಿನ್ಯ:–**

- ✓ ನಮ್ಮ ಸುತ್ತಮುತ್ತಲಿನಲ್ಲಾಗುವ ಅನಪೇಕ್ಷಣಿಯ ಬದಲಾವಣೆಯೇ 'ಪರಿಸರ ಮಾಲಿನ್ಯ' ಎನ್ನುವರು.
- ✓ ಪರಿಸರ ಮಾಲಿನ್ಯಕ್ಕೆ ಕಾರಣಗಳು:–
  1. ಅಧಿಕ ಜನಸಂಖ್ಯೆ
  2. ಕೈಗಾರಿಕೀಕರಣ
  3. ನಗರೀಕರಣ
  4. ಸಂಪನ್ಮೂಲಗಳ ದುರ್ಬಳಕೆ
  5. ಅತಿಯಾಗಿ ವಾಹನಗಳನ್ನು ಬಳಸುವುದು

**ಮಾಲಿನ್ಯಕಾರಗಳು:–**

1. ಸ್ವಾಭಾವಿಕ ಮಾಲಿನ್ಯಕಾರಗಳು
2. ಮಾನವ ನಿರ್ಮಿತ ಮಾಲಿನ್ಯಕಾರಗಳು

- ✓ ಗೋಚರ ಮಾಲಿನ್ಯಕಾರಕಗಳು:–
  1. ಹೊಗೆ
  2. ವಿಷಾನಿಲ
  3. ದೂಳು
  4. ಚರಂಡಿ ನೀರು
  5. ಕಸಕಡ್ಡಿಗಳು
- ✓ ಅಗೋಚರ ಮಾಲಿನ್ಯಕಾರಕಗಳು:–
  1. ಆಹಾರ
  2. ಮಣ್ಣು
  3. ನೀರಿನಲ್ಲಿ ಮಿಶ್ರಣವಾದ ವಿಷಯುಕ್ತ ರಾಸಾಯನಿಕ ವಸ್ತು
  4. ಬ್ಯಾಕ್ಟೀರಿಯಾಗಳು

**ಪರಿಸರ ಮಾಲಿನ್ಯ ವಿಧಗಳು:–**

1. ವಾಯುಮಾಲಿನ್ಯ

RAMALINGAPPA L Asst Teacher

2. ಜಲಮಾಲಿನ್ಯ
3. ಶಬ್ದಮಾಲಿನ್ಯ
4. ಮಣ್ಣಿನಮಾಲಿನ್ಯ

**ವಾಯುಮಾಲಿನ್ಯ:–**

**ವಾಯುಮಾಲಿನ್ಯ ಕಾರಕಗಳ ಮೂಲಗಳು:–**

**ಪ್ರಾಕೃತಿಕ ಮೂಲಕಗಳು:–**

1. ಜ್ವಾಲಾಮುಖಿಗಳು
2. ಕಾಡ್ಗಿಚ್ಚು
3. ಬಾಹ್ಯಾಕಾಶ ದೂಳು

**ಮಾನವ ನಿರ್ಮಿತ ಮೂಲಗಳು:–**

1. ಕೈಗಾರಿಕೆಗಳ ಹೊಗೆ
2. ಗೃಹ ಬಳಕೆಯಿಂದ
3. ವಾಹನಗಳಿಂದ
4. ಗಣಿಗಾರಿಕೆಯಿಂದ
5. ಅಣುಶಕ್ತಿಯಿಂದ
6. ಅಣುಸ್ಫೋಟನೆ ಅನಿಲಗಳು

**ಮಾಲಿನ್ಯಕಾರಕಗಳು:–**

- ✓ ಇಂಗಾಲದ ಡೈ ಆಕ್ಸೈಡ್
- ✓ ಇಂಗಾಲದ ಮಾನಾಕ್ಸೈಡ್
- ✓ ಗಂಧಕದ ಡೈ ಆಕ್ಸೈಡ್
- ✓ ಸಾರಜನಕದ ಆಕ್ಸೈಡ್‌ಗಳು
- ✓ ಕ್ಲೋರೋಪ್ಲೋರ್ ಕಾರ್ಬನ್
- ✓ ಹೈಡ್ರೋ ಕಾರ್ಬನ್‌ಗಳು

**ಪರಿಣಾಮಗಳು:–**

1. ಹವಮಾನ & ವಾಯುಗುಣ ಪರಿಸ್ಥಿತಿ ವ್ಯತ್ಯಾಸ
2. ಓಝೋನ್ ಕ್ಷಿಣತೆ
3. ಹಸಿರು ಮನೆ ಪರಿಣಾಮ
4. ಜಾಗತಿಕ ತಪಮಾನ ಏರಿಕೆ
5. ಮಾನವ ಆರೋಗ್ಯದ ಮೇಲೆ ದುಷ್ಪರಿಣಾಮ
6. ಉಸಿರಾಟದ ಸಮಸ್ಯೆ
7. ಸಸ್ಯ & ಪ್ರಾಣಿವರ್ಗಗಳ ಮೇಲೆ ದುಷ್ಪರಿಣಾಮ

**ವಾಯುಮಾಲಿನ್ಯ ನಿಯಂತ್ರಣ ಕ್ರಮಗಳು:–**

1. ಮಾಲಿನ್ಯಕಾರಕ ಅನಿಲಗಳನ್ನು ನಿಯಂತ್ರಿಸುವುದು
2. ವಾಹನಗಳ ಹೊಗೆಯನ್ನು ನಿಯಂತ್ರಿಸುವುದು
3. ಹೆಚ್ಚು ಮರಗಳನ್ನು ಬೆಳೆಸುವುದು
4. ಅಸಂಪ್ರದಾಯಿಕ ಶಕ್ತಿಸಂಪನ್ಮೂಲಗಳ ಬಳಕೆ
5. ಜನರಲ್ಲಿ ಅರಿವು ಮೂಡಿಸುವುದು
6. ಕಾನೂನಿನಿಂದ ನಿಯಂತ್ರಿಸುವುದು
7. ಸಾಕ್ಷರತೆ & ಶಿಕ್ಷಣ

**ಜಲಮಾಲಿನ್ಯ:–**

**ಜಲಮಾಲಿನ್ಯ ಪ್ರಮುಖ ಮೂಲಗಳು:–**

**ನೈಸರ್ಗಿಕ ಮೂಲಗಳು:–**

- ✓ ಮಣ್ಣಿನ ಸವೆತ
- ✓ ಭೂಕುಸಿತಗಳು
- ✓ ಜ್ವಾಲಾಮುಖಿ ಸ್ಫೋಟನೆ
- ✓ ಸಸ್ಯಗಳು & ಪ್ರಾಣಿಗಳು ಕ್ಷಯಿಸುವಿಕೆ
- ✓ ಕೊಳೆಸುವ ಪ್ರಕ್ರಿಯೆ

**ಮಾನವ ನಿರ್ಮಿತ ಮೂಲಗಳು:–**

- ✓ ಕೈಗಾರಿಕಾ ತ್ಯಾಜ್ಯವಸ್ತುಗಳು
- ✓ ನಗರ ತ್ಯಾಜ್ಯವಸ್ತುಗಳು
- ✓ ಗೃಹ ತ್ಯಾಜ್ಯ ವಸ್ತುಗಳು
- ✓ ಕೃಷಿ ತ್ಯಾಜ್ಯ ವಸ್ತುಗಳು
- ✓ ತೈಲ ಸೋರುವಿಕೆ
- ✓ ಅಣುತ್ಯಾಜ್ಯ
- ✓ ತೈಲಬಾವಿಗಳನ್ನು ಸಾಗರ ವಲಯದಲ್ಲಿ ಕೊರೆಯುವುದು
- ✓ ಶಾಖ ವಿದ್ಯುತ್ ಕೇಂದ್ರಗಳ ತ್ಯಾಜ್ಯವಸ್ತುಗಳ

**ಜಲಮಾಲಿನ್ಯ ವಿಧಗಳು:–**

1. ಸಮುದ್ರ & ಸಾಗರ ಮಾಲಿನ್ಯ
2. ಅಂತರ್ಜಲ ಮಾಲಿನ್ಯ
3. ನದಿ ನೀರಿನ ಮಾಲಿನ್ಯ
4. ಸರೋವರ ಮಾಲಿನ್ಯ

**ಪರಿಣಾಮಗಳು:–**

1. ಮಲಿನ ನೀರಿನಿಂದ ಹರಡುವ ಕಾಯಿಲೆಗಳು
2. ಸಾಂಕ್ರಾಮಿಕ ರೋಗಗಳು
3. ಜಲಚರಗಳ ಸಾವಿಗೆ ಕಾರಣ
4. ಮಲಿನ ನೀರಿನಿಂದ ಬೆಳೆಗಳಿಗೆ ಹಾನಿ

RAMALINGAPPA L Asst Teacher

**ಜಲಮಾಲಿನ್ಯ ನಿಯಂತ್ರಣ ಕ್ರಮಗಳು:–**

1. ಕೈಗಾರಿಕಾ ತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸುವುದು
2. ಕುಡಿಯುವ ನೀರಿನ ಮೂಲ ಸ್ವಚ್ಛಗೊಳಿಸುವುದು.
3. ಚರಂಡಿ ನೀರನ್ನು ಸಂಸ್ಕರಿಸುವುದು
4. ಕಸದ ರಾಶಿಗಳನ್ನು ಜಲರಾಶಿಗಳಲ್ಲಿ ಹಾಕುವುವು ನಿಲ್ಲಿಸಬೇಕು.

## ಮಣ್ಣಿನ ಮಾಲಿನ್ಯ:–

**ಮೂಲಗಳು:–**

- ✓ ಕೈಗಾರಿಕೆ & ಗಣಿಗಾರಿಕೆಯ ತ್ಯಾಜ್ಯವಸ್ತುಗಳು
- ✓ ಗೃಹ ಬಳಕೆ & ನಗರ ತ್ಯಾಜ್ಯವಸ್ತುಗಳು
- ✓ ಕೃಷಿ ತ್ಯಾಜ್ಯವಸ್ತುಗಳು
- ✓ ಅಣು ತ್ಯಾಜ್ಯವಸ್ತುಗಳು

**ಪರಿಣಾಮಗಳು:–**

1. ಮಣ್ಣಿನ ಫಲವತ್ತತೆ ಕ್ಷೀಣಿಸುವುದು
2. ಫಲವತ್ತಾದ ಭೂಮಿ ಪಾಳುಭೂಮಿಯಾಗುವುದು
3. ಮಣ್ಣಿನಲ್ಲಿನ ಸೂಕ್ಷ್ಮ ಜೀವಿಗಳು ನಾಶ

**ನಿಯಂತ್ರಣ ಕ್ರಮಗಳು:–**

1. ರಾಸಾಯನಿಕ ವಸ್ತುಗಳನ್ನು ವಿವೇಕದಿಂದ ಬಳಕೆ & ನಿಯಂತ್ರಣ
2. ತ್ಯಾಜ್ಯವಸ್ತುಗಳನ್ನು ಸಂಸ್ಕರಿಸಿ ವ್ಯವಸಾಯಕ್ಕೆ ಬಳಕೆ
3. ಸಮರ್ಪಕ ಭೂ ಬಳಕೆ
4. ಬೆಳೆಗಳ ಕ್ರಮವನ್ನು ಅನುಸರಿಸುವುದು
5. ಮಣ್ಣಿನ ಸವೆತ ನಿಯಂತ್ರಣ
6. ಗಿಡ ಮರಗಳನ್ನು ಬೆಳೆಸುವುದು
7. ಮಣ್ಣಿನ ಸರಿಯಾದ ಬಳಕೆ & ನಿರ್ವಹಣೆ

## ಶಬ್ದಮಾಲಿನ್ಯ:–

**ನೈಸರ್ಗಿಕ ಮೂಲಗಳು:–**

1. ಗುಡುಗು
2. ಸಿಡಿಲು
3. ಮಿಂಚು
4. ಅಧಿಕ ಮಳೆ
5. ಆಲಿಕಲ್ಲು ಮಳೆ
6. ಜಲಪಾತಗಳು
7. ಸಮುದ್ರ ಅಲೆಗಳು

**ಮಾನವ ನಿರ್ಮಿತ ಮೂಲಗಳು:–**

1. ಕೈಗಾರಿಕೆಗಳ ಶಬ್ದ
2. ವಾಹನಗಳ ಶಬ್ದ
3. ವಿಮಾನಗಳ ಶಬ್ದ
4. ನಗರ ಪ್ರದೇಶಗಳ ಶಬ್ದ
5. ಗಣಿಗಾರಿಕೆ

**ಪರಿಣಾಮಗಳು:–**

1. ತಾತ್ಕಾಲಿಕ/ಶಾಶ್ವತವಾಗಿ ಕಿವಿ ಕೇಳಿಸದಿರುವುದು
2. ತಲೆನೋವು
3. ಆಯಾಸ
4. ಹೃದಯ ಸಂಬಂಧಿ ಕಾಯಿಲೆ
5. ಮಾನಸಿಕ ಅಸ್ವಸ್ಥತೆ
6. ದೈಹಿಕ ಬದಲಾವಣೆ
7. ನಿದ್ರಾಭಂಗ

**ತಡೆಗಟ್ಟುವ ಕ್ರಮಗಳು:–**

- ✓ ವಾಸಸ್ಥಳದಿಮದ ದೂರದಲ್ಲಿ ಕೈಗಾರಿಕೆ ಸ್ಥಾಪನೆ
- ✓ ಕಾರ್ಖಾನೆಗಳಲ್ಲಿ ಶಬ್ದ ನಿರೋಧಕ ಗೋಡೆ ನಿರ್ಮಾಣ
- ✓ ಅನಗತ್ಯ ಸೈರನ್, ಹಾರನ್ ಉಪಕರಣ ನಿಲ್ಲಿಸುವುದು
- ✓ ವಿಮಾನ ನಿಲ್ದಾಣಗಳನ್ನು ದೂರದಲ್ಲಿ ನಿರ್ಮಿಸುವುದು
- ✓ ಕೈಗಾರಿಕಾ ಕಾರ್ಮಿಕರಿಗೆ ಶಬ್ದ ನಿಯಂತ್ರಕ ಒದಗಿಸುವುದು
- ✓ ಶಬ್ದ ಮಾಡುವ ವಾಹನಗಳನ್ನು ಪರಿಶೀಲಿಸಿ ಕ್ರಮ

**ಜಾಗತಿಕ ತಾಪಮಾನ:–**

- ➢ ಇತ್ತೀಚಿನ ದಿನಗಳಲ್ಲಿ ವಾಯುಮಂಡಲದ ಉಷ್ಣಾಂಶವು ಹೆಚ್ಚಾಗುತ್ತಿದೆ. ಇದನ್ನೇ 'ಜಾಗತಿಕ ತಾಪಮಾನ' ಎನ್ನುವರು
- ➢ ಕಾರಣ:– ಹಸಿರುಮನೆ ಪರಿಣಾಮ
- ➢ ಪರಿಣಾಮಗಳು:–

RAMALINGAPPA L Asst. Teacher

1. ವಾಯುಗುಣದ ವಲಯಗಳು ಬದಲಾವಣೆ ಹೊಂದುತ್ತಿವೆ.
2. ಹಿಮನದಿಗಳು ಕರಗುತ್ತಿವೆ
3. ಸಮುದ್ರ ನೀರಿನಮಟ್ಟ ಹೆಚ್ಚುತ್ತಿದೆ.
4. ಹಿಮರಾಶಿಯು ಕರಗುವುದು ಹೆಚ್ಚಾಗಿದೆ.

**ಹಸಿರುಮನೆ ಪರಿಣಾಮ:–**

- ✓ ಭೂಮಿಯು ಸೂರ್ಯನ ಕಿರಣಗಳನ್ನು ವಿಕಿರಣದ ರೂಪದಲ್ಲಿ ಪಡೆಯುತ್ತದೆ.
- ✓ ಭೂಮಿಯಿಂದಲೂ ಉಷ್ಣಾಂಶವು ಮರುವಿಕಿರಣ ರೂಪದಲ್ಲಿ ಹೊರಬೀಳುತ್ತಿದೆ.
- ✓ ಭೂಮಿ ಪಡೆಯುವ & ಬಿಡುಗಡೆ ಮಾಡುವ ಶಕ್ತಿ ಸಮತೋಲನವಿರುತ್ತದೆ.
- ✓ ಆದರೆ, ಜೀವಾವಶೇಷ ಇಂಧನಗಳ ಬಳಕೆಯಿಂದ ಹಸಿರುಮನೆ ಅನಿಲಗಳು ಬಿಡುಗಡೆ ಹೆಚ್ಚಿದೆ.
- ✓ ಇಂಗಾಲದ ಡೈ ಆಕ್ಸೈಡ್ & ಇತರೆ ಅನಿಲಗಳು ಭೂಮಿಯಿಂದ ಬಿಡುಗಡೆಯಾಗುವ ಉಷ್ಣಾಂಶವನ್ನು ಹೀರಿ ಸಂಗ್ರಹಿಸುವುದರಿಂದ
- ✓ ವಾಯುಮಂಡಲದ ಉಷ್ಣಾಂಶ ಹೆಚ್ಚಾಗಿದೆ.

**ಓಜೋನ್ ಪದರು ಕ್ಷೀಣತೆ:–**

- ➢ ಇದು ಸೂರ್ಯನ ಅಪಾಯಕಾರಿ ಅಲ್ಟ್ರಾವೈಲೆಟ್ ಕಿರಣಗಳನ್ನು ಹೀರಿಕೊಂಡು ಭೂಮಿಯ ಮೇಲಿನ ಜೀವರಾಶಿಯನ್ನು ರಕ್ಷಿಸುತ್ತದೆ.
- ➢ ಏರ್ಕಂಡಿಷನರ್, ರೆಫ್ರಿಜಿರೇಟರ್, ಸ್ಪ್ರೇಯರ್, ಸುಗಂಧದ್ರವ್ಯ ಬಳಕೆ ಹೆಚ್ಚಿದೆ.
- ➢ ಇದರಿಂದ ಕ್ಲೋರೊ ಫ್ಲೋರೊ ಕಾರ್ಬನ್ ಹೆಚ್ಚು ಬಿಡುಗಡೆಗೊಳ್ಳುತ್ತದೆ.
- ➢ ಓಜೋನ್ ಪದರು ನಾಶಕ್ಕೆ ಕಾರಣವಾಗುತ್ತದೆ.

**ಆಮ್ಲ ಮಳೆ:–** ಮಳೆಯ ಹನಿಗಳು ಮಾಲಿನ್ಯಗೊಂಡ ವಾಯುಮಂಡಲದ ಮೂಲಕ ಬೀಳುವಾಗ ಸಲ್ಫೂರಿಕ್ ಆಮ್ಲ & ಇಂಗಾಲದ ಮಾನಾಕ್ಸೈಡ್ ವಿಲೀನಗೊಂಡು ಬೀಳುವ ಮಳೆ

**ಪರಿಣಾಮಗಳು:–**

1. ಅತ್ಯಂತ ವಿಷಕಾರಿಯಾಗಿದೆ.
2. ಜಲಚರಗಳ ನಾಶಕ್ಕೆ ಕಾರಣ
3. ಅರಣ್ಯ, ಬೆಳೆ, ಕಟ್ಟಡ & ಸ್ಮಾರಕ ನಾಶ
4. ಲೇಕ್‌ಕಿಲ್ಲರ್ ಎನ್ನುವರು
5. ಪೋಲೆಂಡ್, ಜೆಕ್‌ಗಣರಾಜ್ಯ, ಆಗ್ನೇಯ ಜರ್ಮನಿ ಪ್ರದೇಶಗಳನ್ನು 'ಕಪ್ಪು ತ್ರಿಕೋನ/ ಎನ್ನುವರು

**ಜೀವವೈವಿಧ್ಯತೆ:–**

- ✓ ಒಂದು ಭೂ ಭಾಗದಲ್ಲಿ ಕಂಡುಬರುವ ಎಲ್ಲಾ ಬಗೆಯ ಸಸ್ಯಗಳು ಹಾಗೂ ಪ್ರಾಣಿ ಪ್ರಭೇದವನ್ನು 'ಜೀವ ವೈವಿಧ್ಯತೆ' ಎನ್ನುವರು

**ಮಹತ್ವ:–**

1. ಪರಿಸರದ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತದೆ.
2. ಮಾನವನ ಉಳಿವಿಗೂ ಅಗತ್ಯ
3. ಸಸ್ಯ & ಪ್ರಾಣೀ ಪ್ರಭೇದಗಳ ಕಾಪಾಡಲು ಅಗತ್ಯ
4. ಜೀವಿಗೆ ಒಳ್ಳೆಯ ಪರಿಸರದ ಹಿನ್ನೆಲೆ ದೊರಕಿಸಿಕೊಡುತ್ತದೆ.

**ಭೂಮಿ ರಕ್ಷಣೆಯ ಕ್ರಮಗಳು:–**

- ➢ ಮಾತೃಗ್ರಹ ಉಳಿಸಲು ಜನರಿಗೆ ಶಿಕ್ಷಣ ನೀಡುವುದು
- ➢ ಪರಿಸರದ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜನೆ
- ➢ ಸಂಪನ್ಮೂಲಗಳ ಸರಿಯಾಗಿ ಬಳಸುವುದು
- ➢ ಮಾಲಿನ್ಯ ನಿಯಂತ್ರಣದ ಬಗ್ಗೆ ಅರಿವು ನೀಡುವ ಶಿಕ್ಷಣ
- ➢ ಉಪನ್ಯಾಸ ಆಶುಭಾಷಣ ಸ್ಪರ್ಧೆ ಚಲನಚಿತ್ರ ಸಮ್ಮೇಳನ ಆಯೋಜನೆ.

## ಅರ್ಥಶಾಸ್ತ್ರ
## ಅಧ್ಯಾಯ–3
## ರಾಷ್ಟ್ರೀಯ ಆದಾಯ & ಭಾರತದ ಅರ್ಥವ್ಯವಸ್ಥೆಯ ವಿವಿಧ ವಲಯಗಳು

- ✓ **ರಾಷ್ಟ್ರೀಯ ಆದಾಯ:–** ಒಂದು ರಾಷ್ಟ್ರದಲ್ಲಿ ಉತ್ಪಾದಿಸುವ ಸರಕು & ಸೇವೆಗಳ ಒಟ್ಟು ಮೌಲ್ಯ
- ✓ **ತಲಾ ಆದಾಯ:–** ಒಟ್ಟು ರಾಷ್ಟ್ರೀಯ ಆದಾಯವನ್ನು ರಾಷ್ಟ್ರದ ಆ ವರ್ಷದ ಒಟ್ಟು ಜನಸಂಖ್ಯೆಯಿಂದ ಭಾಗಿಸುವುದು.



RAMALINGAPPA L Asst. Teacher

✓ ರಾಷ್ಟ್ರೀಯ ಆದಾಯವನ್ನು ಅಂದಾಜು ಮಾಡುವ ಸಂಸ್ಥೆ:- ಕೇಂದ್ರೀಯ ಅಂಕಿ ಸಂಖ್ಯಾ ಸಂಸ್ಥೆ

**ಪ್ರಾಥಮಿಕ ವಲಯ:-**

1. ಕೃಷಿ
2. ರೇಷ್ಮೆ ಕೃಷಿ
3. ತೋಟಗಾರಿಕೆ
4. ಪಶುಸಂಗೋಪನೆ
5. ಕೋಳಿಸಾಕಾಣಿಕೆ
6. ಮೀನುಗಾರಿಕೆ
7. ಪುಷ್ಪಕೃಷಿ

**ಕೃಷಿಯ ಮಹತ್ವ:-**

- ರಾಷ್ಟ್ರೀಯ ಆದಾಯದಲ್ಲಿ ಹೆಚ್ಚಿನ ಪಾಲು
- ಕೃಷಿ ರಾಷ್ಟ್ರದ ಬೆನ್ನೆಲುಬು
- ಅಧಿಕ ಜನರಿಗೆ ಉದ್ಯೋಗ ನೀಡಿಕೆ
- ನಿರಂತರ ಎರುತ್ತಿರುವ ಜನರಿಗೆ ಆಹಾರ ಒದಗಿಸುತ್ತದೆ.
- ಕೈಗಾರಿಕೆಗಳಿಗೆ ಕಚ್ಚಾವಸ್ತು ಪೂರೈಕೆ
- ಸೇವೆಗಳ ಬೆಳವಣಿಗೆಗೆ ಕೊಡುಗೆ

**ದ್ವಿತೀಯ ವಲಯ (ಉತ್ಪಾದನಾ ವಲಯ):-**

- ಕೈಗಾರಿಕೆಗಳು
- ಕಟ್ಟಡ ನಿರ್ಮಾಣ
- ವಿದ್ಯುತ್‌ಶಕ್ತಿ ಉತ್ಪಾದನೆ

**ಕೈಗಾರಿಕಾ ವಲಯದ ಮಹತ್ವ:-**

1. ರಾಷ್ಟ್ರೀಯ ಆದಾಯಕ್ಕೆ ಕೊಡುಗೆ
2. ಸಾರಿಗೆ, ಸಂಪರ್ಕ & ಇಂಧನ ಪೂರೈಕೆ
3. ದಿನನಿತ್ಯ ಬಳಕೆ ವಸ್ತುಗಳ ಪೂರೈಕೆ
4. ಉದ್ಯೋಗ ಅವಕಾಶ
5. ಪ್ರಾಥಮಿಕ ವಲಯಕ್ಕೆ ಯಂತ್ರಗಳ ಸರಬುರಾಜು
6. ಸೇವಾವಲಯ ಅಭಿವೃದ್ಧಿ

**ತೃತೀಯ ವಲಯ (ಸೇವಾವಲಯ):-**

1. ಅಂಗಡಿಗಳು
2. ದೂರವಾಣಿ ಸೇವೆ
3. ಶೈಕ್ಷಣಿಕ ಸಂಸ್ಥೆಗಳು
4. ಆಸ್ಪತ್ರೆಗಳು
5. ಆರೋಗ್ಯ ಕೇಂದ್ರಗಳು
6. ಹೋಟಲ್‌ಗಳು
7. ಬ್ಯಾಂಕಿನ ಸಂಸ್ಥೆಗಳು
8. ಸಾಮಾಜಿಕ ಸೇವಾ ಸಂಸ್ಥೆಗಳು

**ಸಣ್ಣ ಕೈಗಾರಿಕೆಗಳ ಮಹತ್ವ:-**

✓ ಉದ್ಯೋಗ ಸೃಷ್ಟಿ
✓ ಸಂಪನ್ಮೂಲ & ಉದ್ಯಮಿ ಕೌಶಲ್ಯದ ಕ್ರೋಡೀಕರಣ
✓ ಆದಾಯದ ಸಮಹಂಚಿಕೆ
✓ ಕೈಗಾರಿಕೆಗಳ ಪ್ರಾದೇಶಿಕ ವಿಸ್ತರಣೆ
✓ ತಂತ್ರಜ್ಞಾನ ಅಭಿವೃದ್ಧಿ
✓ ರಫ್ತು ಉತ್ತೇಜನ

**ಸಣ್ಣ ಕೈಗಾರಿಕೆಗಳ ಸಮಸ್ಯೆಗಳು:-**

- ಕಚ್ಚಾ ಸರಕುಗಳ ಅಲಭ್ಯತೆ
- ಹಣಕಾಸಿನ ಸಮಸ್ಯೆ
- ಕಡಿಮೆ ತಾಂತ್ರಿಕ ಕೌಶಲ್ಯ
- ಮಾರುಕಟ್ಟೆ ಸಮಸ್ಯೆಗಳು
- ಬೃಹತ್ ಕೈಗಾರಿಕೆಗಳಿಂದ ಪೈಪೋಟಿ

**ಕೃಷಿ ಬಿಕ್ಕಟ್ಟು:-** ಗ್ರಾಮೀಣ ಜನರ ವಲಸೆ & ಹೆಚ್ಚುತ್ತಿರುವ ಆತ್ಮಹತ್ಯೆಯ ಸಂಖ್ಯೆಗಳಯ ಈ ಸಮಸ್ಯೆಯ ಕರಾಳ ಮುಖ ತೋರಿಸುತ್ತದೆ.

**ಕಾರಣಗಳು:-**

1. ಸಣ್ಣ ಗಾತ್ರದ ಸಾಗುವಳಿ ಹಿಡುವಳಿಗಳು
2. ಅಧಿಕ ಜನಸಂಖ್ಯೆಯ ಒತ್ತಡ
3. ಮಳೆ ಆಧಾರಿತ ಕೃಷಿ
4. ಮೇಲಿಂದ ಮೇಲೆ ಬಂದೆರಗುವ ಬರಗಾಲ
5. ಹಸಿರು ಕ್ರಾಂತಿಯ ಭಾಗಶಃ ಪ್ರಭಾವ
6. ನೀರಾವರಿ & ಮೂಲ ಸೌಕರ್ಯಗಳಲ್ಲಿ ಹೂಡಿಕೆ ಕುಗ್ಗುವಿಕೆ
7. ಸಾಂಸ್ಥಿಕ ಮೂಲಗಳಿಂದ ಅಸಮರ್ಪಕ ಸಾಲ

RAMALINGAPPA L Asst. Teacher

8. ಲಾಭದಾಯಕ ಬೆಲೆ ಪಡೆಯಲು ಅಸಮರ್ಥತೆ

**ಕೃಷಿ ಬಿಕ್ಕಟ್ಟಿಗೆ ಪರಿಹಾರಗಳು:–**

- ✓ ಸರ್ಕಾರದ ಹೂಡಿಕೆ ಹೆಚ್ಚಿಸುವುದು
- ✓ ಸಾಲ ಸೌಲಭ್ಯಗಳ ವಿಸ್ತರಣೆ
- ✓ ಮಾರುಕಟ್ಟೆ ಸುಧಾರಣೆಗಳು
- ✓ ಬೆಳೆ ವಿಮೆ
- ✓ ಸಲಹೆ & ನೈತಿಕ ಬೆಂಬಲ
- ✓ ಖಾಸಗಿ ಲೇವಾದೇವಿಗಾರರ ನಿಯಂತ್ರಣ

## ಅಧ್ಯಾಯ–4
## ಸರ್ಕಾರ ಮತ್ತು ಅರ್ಥವ್ಯವಸ್ಥೆ

**ಯೋಜನೆಗಳ ಅವಶ್ಯಕತೆ:–**

- ➢ ರಾಷ್ಟ್ರ ಆರ್ಥಿಕ ಅಭಿವೃದ್ಧಿ ಸಾಧಿಸಲು
- ➢ ಜನರ ಯೋಗಕ್ಷೇಮ ಹೆಚ್ಚಿಸಲು
- ➢ ಸರ್ಕಾರ ಆರ್ಥಿಕ ಪಿಡುಗುಗಳನ್ನು ನಿವಾರಿಸಲು
- ➢ ತಲಾ ಆದಾಯ ಹೆಚ್ಚಿಸಲು ಕ್ರಮ
- ➢ ರಫ್ತು ಹೆಚ್ಚಿಸಲು ಆಮದು ಕಡಿಮೆ ಮಾಡಲು
- ➢ ಸಾಮಾಜಿಕ & ಆರ್ಥಿಕ ಅಭಿವೃದ್ಧಿಗೆ

**ಯೋಜನಾ ವಿಧಾನ:–**

- ✓ ಅಗತ್ಯತೆಗಳನ್ನು ಗುರುತಿಸಲು
- ✓ ಗುರಿಗಳನ್ನು ನಿರ್ಧರಿಸುವುದು
- ✓ ಸಂಪನ್ಮೂಲಗಳನ್ನು ಸಂಗ್ರಹಿಸುವುದು
- ✓ ಸಂಪನ್ಮೂಲಗಳ ಬಳಕೆ
- ✓ ಉದ್ದೇಶಗಳ ಈಡೇರಿಕೆಗೆ ಮೌಲ್ಯಮಾಪನ

**ಭಾರತದಲ್ಲಿ ಯೋಜನೆಗಳ ಉದ್ದೇಶಗಳು:–**

1. ಆರ್ಥಿಕ ಬೆಳವಣಿಗೆಯನ್ನು ವೃದ್ಧಿಸುವುದು
2. ಅರ್ಥವ್ಯವಸ್ಥೆಯನ್ನು ಆಧುನಿಕರಣಗೊಳಿಸುವುದು
3. ಸ್ವಾವಲಂಬನೆ ಸಾಧಿಸುವುದು
4. ಆದಾಯ ಸಂಪತ್ತಿನ ಅಸಮಾನತೆ ಕಡಿಮೆ ಮಾಡುವುದು
5. ಮೂಲ ಸೌಕರ್ಯದ ವೃದ್ಧಿ
6. ಹಣಕಾಸಿನ ಸಂಸ್ಥೆಗಳ ಅಭಿವೃದ್ಧಿ
7. ಸಮತೋಲಿತ ಪ್ರಾದೇಶಿಕ ಅಭಿವೃದ್ಧಿ
8. ಖಾಸಗಿ ವಲಯದ ಉತ್ತೇಜನ

**ಭಾರತದ ಯೋಜನೆಗಳ ಸಾಧನೆಗಳು:–**

1. ರಾಷ್ಟ್ರೀಯ & ತಲಾ ಆದಾಯ ಹೆಚ್ಚಳ
2. ಕೃಷಿ ಅಭಿವೃದ್ಧಿ
3. ಕೈಗಾರಿಕಾ ಅಭಿವೃದ್ಧಿ
4. ಆರ್ಥಿಕ ಮೂಲ ಸೌಕರ್ಯದ ಅಭಿವೃದ್ಧಿ
5. ಸಾಮಾಜಿಕ ಮೂಲ ಸೌಕರ್ಯದ ಅಭಿವೃದ್ಧಿ
6. ಸ್ವಾವಲಂಬನೆ
7. ಉದ್ಯೋಗ ನಿರ್ಮಾಣ
8. ಬಂಡವಾಳ ಸಂಚಯನ
9. ವಿಜ್ಞಾನ & ತಂತ್ರಜ್ಞಾನಗಳ ಅಭಿವೃದ್ಧಿ
10. ಸಾಮಾಜಿಕ ನ್ಯಾಯ

**ಭಾರತದಲ್ಲಿ ಯೋಜನೆಗಳ ವಿಫಲತೆ:–**

1. ನಿಧಾನಗತಿಯ ಉತ್ಪಾದನೆ
2. ಆದಾಯದ ನಿಧಾನಗತಿಯ ಬೆಳವಣಿಗೆ
3. ಬೆಲೆಗಳಲ್ಲಿ ಹೆಚ್ಚಳ
4. ನಿರುದ್ಯೋಗದಲ್ಲಿ ಹೆಚ್ಚಳ
5. ಬಡತನ ಹಾಗೂ ಅಸಮಾನತೆ ಮುಂದುವರಿಕೆ
6. ಮೂಲ ಸೌಕರ್ಯಗಳ ಅಸಮರ್ಪಕ ಅಭಿವೃದ್ಧಿ
7. ಅದಕ್ಷ ಆಡಳಿತ
8. ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲದ ರಫ್ತು ಹೆಚ್ಚಳ

**ಆರ್ಥಿಕ ಸುಧಾರಣೆಗಳು:–**

**ಅಗತ್ಯತೆ:–**

- ➢ ಸಾರ್ವಜನಿಕ ಉದ್ದಿಮೆಗಳ ಸಾಧನೆ ಅತೃಪ್ತಿ
- ➢ ತೀವ್ರ ಆರ್ಥಿಕ ಬಿಕ್ಕಟ್ಟು
- ➢ ವ್ಯಾಪಾರ ಶಿಲ್ಕನ ಅಗಾದ ಕೊರತೆ
- ➢ ಕಡಿಮೆ ಪ್ರಮಾಣದ ವಿದೇಶಿ ವಿನಿಮಯ ಸಂಗ್ರಹ
- ➢ ಹೆಚ್ಚಿದ ಹಣದುಬ್ಬರ
- ➢ ಹೆಚ್ಚಿದ ಮುಂಗಡ ಪತ್ರದ ಕೊರತೆ1991 ಹೊಸ

**ಆರ್ಥಿಕ ನೀತಿ ಜಾರಿ**

1. ಉದಾರೀಕರಣ – ಎಲ್

RAMALINGAPPA L Asst Teacher

2. ಖಾಸಗೀಕರಣ – ಪಿ
3. ಜಾಗತೀಕರಣ – ಜಿ

**ಎಲ್.ಪಿ.ಜಿ ನೀತಿಗಳು ಒಳಗೊಂಡ ಅಂಶಗಳು:–**

- ✓ ವಿದೇಶಿ ಹೂಡಿಕೆಗೆ ಅಗತ್ಯವಾದ ಲೈಸ್ಸೆನಿಂಗ್ ಪದ್ಧತಿ ನಿವಾರಿಸುವುದು.
- ✓ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವುದು
- ✓ ವಿದೇಶಿ ನೇರ ಹೂಡಿಕೆಗೆ ಮುಕ್ತ ಅನುಮೋದನೆ
- ✓ ಉದಾರ ಆಮದು & ರಫ್ತು ನೀತಿ
- ✓ ಅಂತರಾಷ್ಟ್ರೀಯ ಮಟ್ಟದಲ್ಲಿ ಬ್ಯಾಂಕು & ಹಣಕಾಸು ವಲಯದ ಪುನಾರಚನೆ
- ✓ ತೆರಿಗೆ ಸುಧಾರಣೆಗಳು
- ✓ ಹೂಡಿಕೆಯ ಸರ್ಕಾರದ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳುವುದು
- ✓ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸುವುದು.

**ಆರ್ಥಿಕ ಉದಾರೀಕರಣವು ಭಾರತದ ಆರ್ಥಿಕತೆಯನ್ನು ತೀವ್ರಗೊಳಿಸಿವೆ ಕಾರಣಗಳು ಹೇಗೆ?**

- ➢ ಭಾರತವು ಏಷ್ಯಾದ ಪ್ರಮುಖ ಆರ್ಥಿಕತೆಗಳಲ್ಲಿ ಒಂದು
- ➢ ವಿದೇಶಿ ಹೂಡಿಕೆಯಲ್ಲಿ ಆಗಾಧ ಹೆಚ್ಚಳ
- ➢ ಬಹುರಾಷ್ಟ್ರೀಯ ಕಂಪನಿಗಳ ಭಾರತದಲ್ಲಿ ಕಛೇರಿ ಸ್ಥಾಪನೆ
- ➢ ತಲಾಆದಾಯವು ಹೆಚ್ಚಳವಾಗಿದೆ
- ➢ ಭಾರತ ಸಾಫ್ಟ್‌ವೇರ್ & ಮಾಹಿತಿ ತಂತ್ರಜ್ಞಾನದ ರಫ್ತುಗಳ ಮುಂಚೂಣಿ
- ➢ ಭಾರತದ ಕಂಪನಿಗಳು ವಿಶ್ವವಿಖ್ಯಾತಿ ಹೊಂದಿವೆ
- ➢ ಭಾರತವನ್ನು ಉದಾರಿ/ಮಾರುಕಟ್ಟೆ ಆಧಾರಿತ ವ್ಯವಸ್ಥೆಯತ್ತ ಕೊಂಡೊಯ್ಯುತ್ತಿವೆ
- ➢ ಭಾರತ ಆರ್ಥಿಕ ಬಿಕ್ಕಟ್ಟನ್ನು ಹೆದುರಿಸಿ ನಿಂತಿದೆ.
- ➢ ಆರ್ಥಿಕ ಅಭಿವೃದ್ಧಿಗಾಗಿ ಇರುವ ಸರ್ಕಾರದ ಪ್ರಸ್ತುತ ಕಾರ್ಯಕ್ರಮಗಳು:–

**ಒಟ್ಟಾರೆ ಅಭಿವೃದ್ಧಿ:–**

**ಜಿಡಿಟಲ್ ಇಂಡಿಯಾ:–**

- ✓ ಜನರಿಗೆ ಸರ್ಕಾರಿ ಸೇವೆಗಳು ತ್ವರಿತವಾಗಿ ವಿದ್ಯುನ್ಮಾನ ರೂಪದಲ್ಲಿ ದೊರಕಿಸುವುದು
- ✓ ಜನರು ಮಾಹಿತಿ & ಸಂಪರ್ಕ ತಂತ್ರಜ್ಞಾನದ ಪ್ರಯೋಜನೆ ಪಡೆಯುವುದು

**ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ:–**

- ✓ ಪ್ರಧಾನಮಂತ್ರಿ ಫಸಲು ವಿಮಾ ಯೋಜನೆ
- ✓ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಪ್ರತಿ ನೀರು ಹನಿಗೂ ಗರಿಷ್ಠ ಉತ್ಪಾದನೆ)
- ✓ ಮಹಾತ್ಮಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ
- ✓ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ

**ಔದ್ಯಮಿಕ ಅಭಿವೃದ್ಧಿ:–**

- ✓ ಮೇಕ್ ಇನ್ ಇಂಡಿಯಾ
- ✓ ಸ್ಟಾರ್ಟ್ ಆಫ್ ಇಂಡಿಯಾ & ಸ್ಟ್ಯಾಂಡಸ್ ಇಂಡಿಯಾ
- ✓ ಪ್ರಧಾನಮಂತ್ರಿ ಮುದ್ರಾಯೋಜನೆ

**ಸಾಮಾಜಿಕ ವಲಯ:–**

- ✓ ಸ್ವಚ್ಛ ಭಾರತ ಅಭಿಯಾನ
- ✓ ಕೌಶಲ ಭಾರತ/ಸ್ಕಿಲ್ ಇಂಡಿಯಾ
- ✓ ಪ್ರಧಾನಮಂತ್ರಿ ಜನಧನ ಯೋಜನೆ
- ✓ ಪ್ರಧಾನಮಂತ್ರಿ ಜೀವನ ಜ್ಯೋತಿ ಯೋಜನೆ
- ✓ ಪ್ರಧಾನಮಂತ್ರಿ ಸುರಕ್ಷಾ ಬಿಮಾ ಯೋಜನೆ
- ✓ ಅಟಲ್ ಪೆನ್ಶನ್ ಯೋಜನೆ

**ನಗರ ಅಭಿವೃದ್ಧಿ:–**

- ✓ ನಗರ ಪುನರುತ್ಥಾನ & ಪರಿವರ್ತನೆಯ ಅಟಲ್ ಅಭಿಯಾನ
- ✓ ಪ್ರಧಾನಮಂತ್ರಿ ಆವಾಸ್ ಯೋಜನೆ
- ✓ ಸ್ಮಾರ್ಟ್ ಸಿಟಿ ಅಭಿಯಾನ

## ವ್ಯವಹಾರ ಅಧ್ಯಯನ
## ಅಧ್ಯಾಯ–2
## ವ್ಯವಹಾರ ಮತ್ತು ಕೈಗಾರಿಕೆ

RAMALINGAPPA L Asst. Teacher

- **ಸ್ಟೀಪನ್‌ಸನ್ ಪ್ರಕಾರ:–** ವ್ಯವಹಾರವು ಲಾಭ ಅಥವಾ ಸಂಪತ್ತನ್ನು ಗಳಿಸುವ ಸಲುವಾಗಿ ನಿರಂತರವಾಗಿ ವಸ್ತುಗಳನ್ನು ಉತ್ಪಾದಿಸುವ ಅಥವಾ ಮಾರಾಟ ಅಥವಾ ಕೊಳ್ಳುವ ಪ್ರಕ್ರಿಯೆಯಿಂದ ಕೂಡಿದ್ದು ಮಾನವ ಬಯಕೆಗಳನ್ನು ಈಡೇರಿಸುವ ಉದ್ದೇಶವನ್ನು ಹೊಂದಿದೆ.

**ವ್ಯವಹಾರದ ಉದ್ದೇಶಗಳು:–**

**ಆರ್ಥಿಕ ಉದ್ದೇಶಗಳು:–**

- ✓ ನ್ಯಾಯಾಯುಕ್ತ ಲಾಭಗಳಿಕೆಯಾಗಿದೆ.
- ✓ ವ್ಯವಹಾರವು ಸಮರ್ಪಕವಾಗಿ ನಡೆಸಲು ಸಾಕಾಗುವ ವೆಚ್ಚವನ್ನು ಭರಿಸಿ ವ್ಯವಹಾರಸ್ಥನು ಸುಖಮಯ ಜೀವನ ಸಾಗಿಸುವಷ್ಟಿರಬೇಕು
- ✓ ವ್ಯವಹಾರವು ವಸ್ತುಗಳನ್ನು & ಸೇವೆಗಳನ್ನು ಗ್ರಾಹಕರಿಗೆ ಪೂರೈಸುತ್ತದೆ ಮತ್ತು ಗ್ರಾಹಕರನ್ನು ಸೃಷ್ಟಿಸುತ್ತದೆ.
- ✓ ಸಂಪನ್ಮೂಲ ಬಳಸಿಕೊಂಡು ವಸ್ತುಗಳನ್ನು ಉತ್ಪಾದಿಸುತ್ತದೆ.
- ✓ ಗ್ರಾಹಕರಿಗೆ ಕಾಲಕಾಲಕ್ಕೆ ಬೇಕಾದ ಹೊಸ ಹೊಸ ಬದಲಾವಣೆಗೆ ಅನುಸಾರವಾಗಿ ವಸ್ತುಗಳನ್ನು ಉತ್ಪಾದಿಸಿ ಪೂರೈಸುತ್ತದೆ.
- ✓ ಹೊಸ ಉತ್ಪಾದನೆಗಳ ಬಗ್ಗೆ ಗ್ರಾಹಕರಿಗೆ ಜಾಹೀರಾತಿನ ಮೂಲಕ ತಿಳಿಸುತ್ತದೆ.

**ಸಾಮಾಜಿಕ ಉದ್ದೇಶಗಳು:–**

- ❖ ದೇಶದ ಪ್ರಗತಿಗೆ ಬೇಕಾದ ವಸ್ತು ಉತ್ಪಾದನೆ & ಪೂರೈಕೆ
- ❖ ಜನರ ಜೀವನ ಮಟ್ಟ ಸುಧಾರಿಸಲು ಸಹಾಯ ಮಾಡುತ್ತದೆ.
- ❖ ಕರ & ತೆರಿಗೆಗಳಿಂದ ಸರ್ಕಾರದ ಆದಾಯವನ್ನು ಹೆಚ್ಚಿಸುತ್ತದೆ.
- ❖ ಈ ಮೂಲಕ ರಾಷ್ಟ್ರದ ಅಭಿವೃದ್ಧಿಗೆ ಸಹಾಯ ಮಾಡುತ್ತದೆ.
- ❖ ಶಾಲಾ ಕಾಲೇಜುಗಳನ್ನು ಆಸ್ಪತ್ರೆಗಳನ್ನು ಸಮುದಾಯ ಭವನಗಳನ್ನು ಆರಂಭಿಸಿ ನಿರ್ವಹಿಸುವ ಜವಾಬ್ದಾರಿ ಹೊಂದಿದೆ.
- ❖ ಉದ್ಯಾನವನ ಕ್ರೀಡಾಂಗಣಗಳ ನಿರ್ವಹಣೆ

**ವ್ಯಾಪಾರ:–**

- ✓ ಸರಕುಗಳನ್ನು ಕೊಳ್ಳುವುದು & ಗ್ರಾಹಕರಿಗೆ ಮಾರುವುದನ್ನು ವ್ಯಾಪಾರ ಎನ್ನುವರು
- ✓ ವ್ಯಾಪಾರದ ಮೂರು ವಿಧಗಳು:–
  1. ಆಂತರಿಕ/ದೇಶಿಯ ವ್ಯಾಪಾರ
  2. ವಿದೇಶಿ/ಅಂತರಾಷ್ಟ್ರೀಯ ವ್ಯಾಪಾರ
  3. ಪುನರ್ ರಫ್ತು ವ್ಯಾಪಾರ

**ಆಂತರಿಕ/ದೇಶೀಯ ವ್ಯಾಪಾರ:–**

- ❖ ಒಂದು ದೇಶದ ಎಲ್ಲೆಗಳ ಒಳಗಡೆ ನಡೆಯುವ ವ್ಯಾಪಾರವನ್ನು ಆಂತರಿಕ ವ್ಯಾಪಾರ ಎನ್ನುವರು.
- ❖ ಆಂತರಿಕ ವ್ಯಾಪಾರ:–
  1. ಚಿಲ್ಲರೆ ಮಾರಾಟಗಾರರು
  2. ಸಗಟು ವ್ಯಾಪಾರಸ್ಥರು

**ಚಿಲ್ಲರೆ ಮಾರಾಟಗಾರರು:–**

- ➢ ಗ್ರಾಹಕರು ನೆಲೆಸಿರುವ ಜಾಗಗಳಲ್ಲಿ ತಮ್ಮ ವ್ಯಾಪಾರ ನಡೆಸುತ್ತಾರೆ.
- ➢ ಸಗಟು ವ್ಯಾಪಾರುಗಳಿಂದ ಸರಕು ಕೊಂಡು ಗ್ರಾಹರಿಗೆ ಮಾರುತ್ತಾರೆ.

**ಉಪಯೋಗಗಳು:–**

- ✓ ವಸ್ತುಗಳ ವಿತರಣೆಯ ಕೊನೆಯ ಕೊಂಡಿ
- ✓ ಬೇರೆ ಬೇರೆ ಉತ್ಪಾದಕರಿಂದ ಉತ್ಪಾದನೆಯಾದ ವಸ್ತುಗಳನ್ನು ಒಂದೆಡೆ ಸೇರಿಸಿ ಗ್ರಾಹಕರಿಗೆ ಒದಗಿಸುತ್ತದೆ
- ✓ ವ್ಯಾಪಾರ ನಷ್ಟಗಳನ್ನು ತಾವೇ ಭರಿಸುತ್ತಾರೆ.
- ✓ ವಸ್ತುಗಳನ್ನು ವಿಂಗಡಿಸಿ ಗ್ರಾಹಕರ ಇಷ್ಟದಂತೆ ಅವರಿಗೆ ಒದಗಿಸುತ್ತಾರೆ.
- ✓ ಗ್ರಾಹಕರಿಗೆ ಸಾಲ ಸೌಲಭ್ಯಗಳನ್ನು ಕೊಡುತ್ತಾರೆ.
- ✓ ಮಾರುಕಟ್ಟೆಗೆ ಹೊಸದಾಗಿ ಬಂದ ವಸ್ತುಗಳ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡುತ್ತಾರೆ.

RAMALINGAPPA L Asst.Teacher

- ✓ ನಿರ್ದಿಷ್ಟ ವಸ್ತು ದೊರೆಯದಿದ್ದಲ್ಲಿ ಪರ್ಯಾಯ ವಸ್ತುಗಳ ಬಗ್ಗೆ ತಿಳಿಸುತ್ತಾರೆ.

**ಚಿಲ್ಲರೆ ವ್ಯಾಪಾರದ ವಿಧಗಳು:-**

1. ಖಾಯಂ ಅಂಗಡಿಗಳು
2. ಸಂಚಾರಿ ಅಂಗಡಿಗಳು

- ➢ **ಖಾಯಂ ಅಂಗಡಿಗಳು:-** ಇವರು ಒಂದು ನಿರ್ದಿಷ್ಟ ಜಾಗದಲ್ಲಿ ಅಂಗಡಿಗಳನ್ನು ತೆರೆದು ವಸ್ತುಗಳನ್ನು ಮಾರುತ್ತಾರೆ
- ➢ **ಸಂಚಾರಿ ಅಂಗಡಿಗಳು:-** ಇವರು ಒಂದು ನಿರ್ದಿಷ್ಟ ಜಾಗದಲ್ಲಿ ವ್ಯಾಪಾರ ಮಾಡುವುದಿಲ್ಲ
    1. ತಲೆಹೊರೆ ವ್ಯಾಪಾರಿಗಳು
    2. ತಳ್ಳುಗಾಡಿ ವ್ಯಾಪಾರಿಗಳು
    3. ರಸ್ತೆ ಬದಿ ವ್ಯಾಪಾರಿಗಳು
    4. ಸಂತೆ ವ್ಯಾಪಾರಿಗಳು

**ಸಗಟು ವ್ಯಾಪಾರ:-**

- ✓ ವ್ಯಾಪಾರಿಗಳು ಸರಕುಗಳನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪಾದಕರಿಂದ ಕೊಂಡು ಸಣ್ಣ ಪ್ರಮಾಣದಲ್ಲಿ ಚಿಲ್ಲರೆ ವ್ಯಾಪಾರಿಗಳಿಗೆ ಮಾರುತ್ತಾರೆ.
- ✓ ಇವರು ಯಾವುದಾದರೂ ಒಂದು/ಎರಡು ಬಗೆಯ ವಸ್ತುಗಳನ್ನು ಮಾರಾಟ ಮಾಡುತ್ತಾರೆ.
- ✓ ಉಪಯೋಗಗಳು:-

1. ಸಣ್ಣ ಪ್ರಮಾಣದಲ್ಲಿ ಕಾಲಕಾಲಕ್ಕೆ ತಕ್ಕಂತೆ ಸರಕು ಒದಗಿಸುತ್ತಾರೆ.
2. ಸಣ್ಣ ವ್ಯಾಪಾರಿಗಳಿಗೆ ಸಾಲ ಸೌಲಭ್ಯ ಒದಗಿಸುತ್ತಾರೆ.
3. ಅವರ ಪರವಾಗಿ ಜಾಹೀರಾತು ಮಾಡುತ್ತಾರೆ.
4. ಮಾರುಕಟ್ಟೆಯ ವಿವರಗಳನ್ನು ಕೊಡುತ್ತಾರೆ.
5. ಹೆಚ್ಚು ಲಾಭದ ಪ್ರಮಾಣ ಇಟ್ಟಿರುವುದಿಲ್ಲ
6. ಉತ್ಪಾದಕರಿಗೂ ಕೂಡ ಮಾರುಕಟ್ಟೆಯ ವಿವರಗಳನ್ನು ಬೆಲೆಯ ಏರಿಳಿತಗಳನ್ನು ಗ್ರಾಹಕರ ಇಷ್ಟಗಳನ್ನು ತಿಳಿಸುತ್ತಾರೆ.
7. ಉತ್ಪಾದಕರ ಪರವಾಗಿಯೂಕೂಡ ಜಾಹೀರಾತು ಮಾಡುತ್ತಾರೆ
8. ಉತ್ಪಾದನಾ ವಸ್ತುಗಳನ್ನು ಶೇಖರಿಸಿಟ್ಟುಕೊಳ್ಳಲು ಸಹಾಯ ಮಾಡುತ್ತಾರೆ.

**ವಿದೇಶಿ ವ್ಯಾಪಾರ:-**

- ➢ ಎರಡು ದೇಶಗಳ ನಡುವೆ ನಡೆಯುವ ವ್ಯಾಪಾರವನ್ನು ವಿದೇಶಿ ವ್ಯಾಪಾರ ಎನ್ನುವರು.
- ➢ ವಿದೇಶಿ ವ್ಯಾಪಾರದ ವಿಭಾಗಗಳು:-
    - ✓ **ಆಮದು:-** ಒಂದು ದೇಶವು ತನ್ನ ಬಳಕೆಗಾಗಿ ಬೇರೆ ದೇಶಗಳಿಂದ ಸರಕುಗಳನ್ನು ಕೊಂಡರೇ ಅದನ್ನು ಆಮದು ಎನ್ನುವರು.
    - ✓ **ರಫ್ತು:-** ಒಂದು ದೇಶವು ಬೇರೆ ದೇಶಗಳಿಗೆ ಆ ದೇಶಗಳ ಬಳಕೆಗಾಗಿ ವಸ್ತುಗಳನ್ನು ಮಾರಿದರೆ ಅದನ್ನು ರಫ್ತು ಎನ್ನುವರು.
    - ✓ **ಪುನರ್‌ರಫ್ತು:-** ದೇಶಗಳು ಬೇರೆ ದೇಶಗಳಿಂದ ವಸ್ತುಗಳನ್ನು ಕೊಂಡು ಅವನ್ನು ಮತ್ತೊಂದು ದೇಶಕ್ಕೆ ಮಾರುತ್ತಾರೆ ಇದನ್ನು ಪುನರ್‌ರಫ್ತು ಎನ್ನುವರು.
      ಉದಾ:- ಸಿಂಗಾಪುರ

**ವಿದೇಶಿ ವ್ಯಾಪಾರದ ಅವಶ್ಯತೆ:-**

- ❖ ಯಾವುದೇ ದೇಶ ಎಲ್ಲಾ ಸಂಪನ್ಮೂಲಗಳಲ್ಲೂ ಸ್ವಯಂಪೂರ್ಣತೆ ಹೊಂದಿಲ್ಲ
- ❖ ಕೆಲವು ದೇಶಗಳಲ್ಲಿ ಕೆಲವು ಸಂಪನ್ಮೂಲಗಳು ಹೇರಳವಾಗಿ ದೊರೆಯುತ್ತವೆ.
- ❖ ಸಂಪನ್ಮೂಲಗಳನ್ನು ಬಳಸಿಕೊಂಡು ವಸ್ತುಗಳನ್ನು ಅಧಿಕವಾಗಿ ಉತ್ಪಾದನೆ ಮಾಡುತ್ತಾರೆ.
- ❖ ಯಾವ ದೇಶದಲ್ಲಿ ಸಂಪನ್ಮೂಲದ ಅಭಾವವಿದೆಯೋ ಆ ದೇಶಗಳು ಆಮದು ಮಾಡಿಕೊಳ್ಳುತ್ತವೆ.
- ❖ ದೇಶದ ಬೇಡಿಕೆ ಮುಗಿದ ಬಳಿಕ ಉಳಿದ ವಸ್ತುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡುತ್ತಾರೆ.
- ❖ ಪ್ರತಿ ದೇಶಕ್ಕೂ ವಿದೇಶಿ ವ್ಯಾಪಾರದ ಅವಶ್ಯಕತೆ ಇದೆ
- ❖ ವಿದೇಶಿ ವ್ಯಾಪಾರವು ದೇಶಗಳ ಪರಸ್ಪರ ಸೌಹಾರ್ದತೆಯುತ ಸಂಬಂಧಕ್ಕೆ ಸಹಾಯ ಮಾಡುತ್ತದೆ.

**ಕೈಗಾರಿಕೆಗಳು (ಉದ್ದಿಮೆಗಳು):-**

- ✓ ಕೈಗಾರಿಕೆಯು ಒಂದು ಆರ್ಥಿಕ ಚಟುವಟಿಕೆಯಾಗಿದೆ.
- ✓ ಕೈಗಾರಿಕೆ ವಸ್ತುಗಳ ಉತ್ಪಾದನೆ, ಖನಿಜಗಳನ್ನು ತೆಗೆಯುವುದು & ಕೆಲವು ಸೇವೆಗಳನ್ನು ಒದಗಿಸುವ ಚಟುವಟಿಕೆಗಳನ್ನು ಹೊಂದಿದೆ.

RAMALINGAPPA L Asst. Teacher

**ಉದ್ಯಮಗಳು ಎರಡು ವಿಧ:-**

1. ಪ್ರಾಥಮಿಕ ಉದ್ಯಮಗಳು:-
   - ✓ ತಳಿ ವೈಜ್ಞಾನಿಕ ಉದ್ಯಮಗಳು
   - ✓ ಗಣಿ ಉದ್ಯಮಗಳು
2. ದ್ವಿತೀಯ ಉದ್ಯಮಗಳು:-
   - ✓ ಉತ್ಪಾದಕ ಉದ್ಯಮಗಳು
   - ✓ ನಿರ್ವಹಣಾ ಉದ್ಯಮಗಳು

**ಪ್ರಾಥಮಿಕ ಉದ್ಯಮಗಳು:-**

- ➢ ಈ ಉದ್ಯಮಗಳು ನಿಸರ್ಗದ ನೆರವಿನಿಂದ ವಸ್ತುಗಳನ್ನು ಉತ್ಪಾದಿಸುತ್ತವೆ
- ➢ ಉದಾ:- ಕೃಷಿ, ಮೀನುಗಾರಿಕೆ, ಹೈನುಗಾರಿಕೆ & ಗಣಿಗಾರಿಕೆ

**ತಳಿ ವೈಜ್ಞಾನಿಕ ಉದ್ಯಮಗಳು:-**

- ❖ ಈ ಉದ್ಯಮ ಕೆಲವು ವಿಧದ ಧ್ಯನ್ಯಗಳು, ಸಸ್ಯಗಳು, ಪ್ರಾಣಿಗಳ ಪುನರ್ ಉತ್ಪಾದನೆಯಲ್ಲಿ ತೊಡಗಿರುತ್ತವೆ.
- ❖ ಇವುಗಳ ಮಾರಾಟದಿಂದ ಲಾಭ ಗಳಿಸಿ ಸಂಪತ್ತು ವೃದ್ಧಿಗೊಳಿಸುವುದು
- ❖ ಉದಾ:- ತೋಟಗಾರಿಕೆ, ಹೈನಿಗಾರಿಕೆ, ಕೋಳಿಸಾಗಾಣಿಕೆ

**ಗಣಿ ಉದ್ಯಮಗಳು:-**

- ✓ ಈ ಉದ್ಯಮವು ಭೂಮಿಯ ಮೇಲ್ಮೈಯ ತಳದಿಂದ ವಿವಿಧ ರೂಪದ ಕಚ್ಚಾವಸ್ತುಗಳನ್ನು ಹೊರತೆಗೆಯುವುದರಲ್ಲಿ ನಿರತವಾಗಿರುತ್ತದೆ.
- ✓ ಇದನ್ನು ಮುಗಿದು ಹೋಗುವ ಉದ್ಯಮ ಎನ್ನುವರು
- ✓ ಉದಾ:- ವಿವಿಧ ಅದಿರು & ತೈಲಭಾವಿ

**ದ್ವಿತೀಯ ಉದ್ಯಮಗಳು:-**

- ❖ ಈ ಉದ್ಯಮವು ಶ್ರಮ ಪ್ರಧಾನವಾಗಿದ್ದು ಮಾನವನ ಪಾತ್ರ ಮುಖ್ಯ

**ಉತ್ಪಾದನ ಉದ್ಯಮಗಳು:-**

- ❖ ಇದು ಕಚ್ಚಾ ಪದಾರ್ಥಗಳನ್ನು/ತಯಾರಿಸಿದ ವಸ್ತುಗಳನ್ನು ಅಂತಿಮ ಉತ್ಪನ್ನವಾಗಿ ಪರಿವರ್ತಿಸುತ್ತದೆ.
- ❖ ಇವು ಹೆಚ್ಚಾಗಿ ಮಾನವ ಶ್ರಮವನ್ನು ಬಳಸಿಕೊಳ್ಳುತ್ತದೆ.
- ❖ ಗ್ರಾಹಕರ ಬಹುಪಾಲು ಅಗತ್ಯಗಳನ್ನು ಪೂರೈಸುತ್ತದೆ.
- ❖ ಉದಾ:- ಕಬ್ಬಿಣದ ಅದಿರನ್ನು ಉಕ್ಕಾಗಿ ಪರಿವರ್ತಿಸುವುದು, ಕಬ್ಬನ್ನು ಸಕ್ಕರೆಯಾಗಿ ಪರಿವತಿಸುವುದು

**ನಿರ್ವಹಣೆ ಉದ್ಯಮಗಳು:-**

- ➢ ಈ ಉದ್ಯಮಗಳು ರಸ್ತೆ, ಕಾಲುವೆ, ಸೇತುವೆ ಮುಂತಾದ ಮೂಲ ಸೌಕರ್ಯಗಳನ್ನು ನಿಮಿಸಲು ಶ್ರಮಿಸುತ್ತವೆ.
- ➢ ಇದು ಪ್ರಧಾನ ಆರ್ಥಿಕ ಚಟುವಟಿಕೆಗಳಾದ ಸಾರಿಗೆ, ಸಂಪರ್ಕಗಳ ತೀವ್ರ ಗತಿಯಲ್ಲಿ ಬೆಳವಣಿಗೆಯಾಗುತ್ತದೆ.

**ಗೃಹಕೈಗಾರಿಕೆಗಳು:-**

- ✓ ಇವುಗಳನ್ನು ಗುಡಿ ಕೈಗಾರಿಕೆಗಳು ಎನ್ನುವರು
- ✓ ಇವುಗಳನ್ನು ಕುಶಲಕರ್ಮಿಗಳು ತಮ್ಮ ಮನೆಗಳಲ್ಲೇ ನಡೆಸುತ್ತಾರೆ.
- ✓ ತಮ್ಮ ಕುಟುಂಬದ ಸದಸ್ಯರು & ಕೆಲಸ ಕಲಿಯುವವರು ಸಹಾಯ ಮಾಡುತ್ತಾರೆ
- ✓ ಇವು ಪ್ರಧಾನವಾಗಿ ಹಳ್ಳಿಗಳಲ್ಲಿ ಕೇಂದ್ರೀಕೃತವಾಗಿರುತ್ತವೆ
- ✓ ಇವು ಸ್ಥಳೀಯ ಮಾರುಕಟ್ಟೆಗೆ ವಸ್ತುಗಳನ್ನು ಉತ್ಪಾದಿಸುತ್ತವೆ.
- ✓ ಉದಾ:- ಬಿದಿರಿನ ಬುಟ್ಟಿಗಳು, ಮರಮುಟ್ಟುಗಳು, ಚಾಪೆಗಳು, ಕಲ್ಲಿನಕೆತ್ತನೆಗಳು, ಕಮ್ಮಾರಿಕೆ, ಮಡಿಕೆಗಳು

**ಸಣ್ಣ ಪ್ರಮಾಣದ ಕೈಗಾರಿಕೆಗಳು:-**

- ❖ ಒಂದು ನಿರ್ದಿಷ್ಟ ಕಟ್ಟಡಗಳಲ್ಲಿ ಸ್ಥಾಪಿತವಾಗಿರುತ್ತವೆ.
- ❖ ಕೂಲಿ ಕಾರ್ಮಿಕರನ್ನು ನೇಮಿಸಿಕೊಳ್ಳುತ್ತಾರೆ.
- ❖ ಕಚ್ಚಾವಸ್ತುಗಳನ್ನು ಸಂಗ್ರಹಿಸಿ ಸಣ್ಣಪ್ರಮಾಣದಲ್ಲಿ ವಸ್ತು ಉತ್ಪಾದಿಸುತ್ತಾರೆ.
- ❖ ಸಣ್ಣ ಯಂತ್ರಗಳನ್ನು & ವಿದ್ಯುಚ್ಛಕ್ತಿಯನ್ನು ಬಳಸುತ್ತಾರೆ.

RAMALINGAPPA L Asst. Teacher

- ❖ ಇಲ್ಲಿ ಉತ್ಪಾದನೆಯಾದ ವಸ್ತುಗಳನ್ನು ಸ್ಥಳೀಯ ಮಾರುಕಟ್ಟೆಗೆ & ವಿದೇಶಿ ಮಾರುಕಟ್ಟೆಗೆ ಸರಬರಾಜಾಗುತ್ತವೆ.
- ❖ ಉದಾ:– ರಾಸಾಯನಿಕ ವಸ್ತುಗಳು, ಇಂಜಿನಿಯರಿಂಗ್ ವಸ್ತುಗಳು, ಪಾದರಕ್ಷೆಗಳು, ಬೈಸಿಕಲ್ಲುಗಳು, ರೇಡಿಯೋ, ಹೊಲಿಗೆ ಯಂತ್ರಗಳು

**ವ್ಯವಹಾರ, ವ್ಯಾಪಾರ & ಕೈಗಾರಿಕೆಗಳಿಗೆ ಅಡೆತಡೆಗಳು:–**

**ಸ್ಥಳದ ಅಡಚಣೆ:–**

- ✓ ಇದನ್ನು ನಿವಾರಿಸಲು ಸಾರಿಗೆ ಸೇವೆಗಳನ್ನು ಬಳಸಲಾಗುತ್ತದೆ.
- ✓ ರಸ್ತೆಸಾರಿಗೆ, ರೈಲುಸಾರಿಗೆ, ಜಲಸಾರಿಗೆ, ವಾಯುಸಾರಿಗೆ
- ✓ ಇವು ಉತ್ಪಾದಕರಿಂದ ವ್ಯಾಪಾರಿಗಳಿಗೆ ವ್ಯಾಪಾರಿಗಳಿಂದ ಗ್ರಾಹಕರಿಗೆ ಉತ್ಪಾದಿಸಿದ ವಸ್ತುಗಳನ್ನು ವಿತರಿಸುವುದು.

**ಹಣಕಾಸಿನ ಸೇವೆ – ಬ್ಯಾಂಕುಗಳು:–**

- ➢ ಉತ್ಪಾದಕರಿಂದ ಗ್ರಾಹಕರಿಗೆ ಸರಕು ವಿತರಣೆಯಲ್ಲಿ ಹಣಕಾಸಿನ ಸಮಸ್ಯೆ ಉಂಟಾಗುತ್ತದೆ.
- ➢ ಸರಕುಗಳನ್ನು ಹಣಕ್ಕೆ ವಿನಿಮಯ ಮಾಡಿಕೊಳ್ಳಲು ಸಹ ಹಣದ ಮಾಧ್ಯಮ ಅಗತ್ಯ
- ➢ ಈ ಸಮಸ್ಯೆಯನ್ನು ಬ್ಯಾಂಕುಗಳು & ಹಣಕಾಸಿನ ಸಂಸ್ಥೆಗಳು ನಿವಾರಿಸುತ್ತವೆ.
- ➢ ಬ್ಯಾಂಕುಗಳು ವ್ಯಾಪಾರಿಗಳಿಗೆ ಸಾಕಷ್ಟು ಪ್ರಮಾಣದ ಹಣಕಾಸಿನ ಸೌಲಭ್ಯ ಒದಗಿಸುತ್ತವೆ.

**ನಷ್ಟದ ಭಯ – ವಿಮಾ ಕಂಪನಿಗಳು**

- ✓ ಸರಕುಗಳನ್ನು ಉತ್ಪಾದಕರಿಂದ ಗ್ರಾಹಕರಿಗೆ ಸಾಗಿಸುವಾಗ/ಉಗ್ರಾಣಗಳಲ್ಲಿ ಶೇಖರಿಸಿಟ್ಟಾಗ ನಾಶ ಹೊಂದುವುದು, ಹಾನಿಗೊಳಗಾಗುವುದು.
- ✓ ಗುಣಮಟ್ಟದಲ್ಲಿ ಕ್ಷೀಣತೆ ಕಂಡುಬರುತ್ತದೆ.
- ✓ ಈ ನಷ್ಟದ ತೊಡಕನ್ನು ನಿವಾರಿಸಲು ವಿಮಾ ಸೌಲಭ್ಯಗಳಿವೆ.
- ✓ ಅಗ್ನಿವಿಮೆ & ಜಲವಿಮೆ

**ಸಮಯದ ಅಡಚಣೆ – ಶೇಖರಣೆ:–**

- ❖ ಸರಕು ಉತ್ಪಾದನೆ & ಅನುಭೋಗ ಬೇರೆ ಬೇರೆ ಸಮಯದಲ್ಲಾಗುತ್ತದೆ.
- ❖ ಸರಕುಗಳನ್ನು ಅನುಭೋಗಿಗೆ ಒದಗಿಸಲು ಶೇಖರಿಸಿಡಬೇಕಾಗುತ್ತದೆ.
- ❖ ಇದಕ್ಕೆ ಉಗ್ರಾಣ ವ್ಯವಸ್ಥೆ ಸೇವೆ ಒದಗಿಸುತ್ತದೆ.
- ❖ ಉಗ್ರಾಣಗಳು ವೈಜ್ಞಾನಿಕ ರೀತಿಯಲ್ಲಿ ನಿರ್ಮಾಣವಾಗಿವೆ.
- ❖ ಕೆಲವು ಉಗ್ರಾಣಗಳಲ್ಲಿ ಶೈತ್ಯಾಗಾರದ ವ್ಯವಸ್ಥೆಯಿದೆ.

**ಜ್ಞಾನದ ಕೊರತೆ – ಜಾಹೀರಾತು:–**

- ✓ ಅನೇಕ ವೇಳೆ ಸರಕುಗಳ ಬಗ್ಗೆ ಜ್ಞಾನ–ತಿಳುವಳಿಕೆ ಅನುಭೋಗಿಗಳಿಗೆ ಕೊಡಬೇಕಾಗುತ್ತದೆ.
- ✓ ಹೊಸ ಹೊಸ ಸರಕುಗಳ ಉತ್ಪಾದನೆಯಲ್ಲಿ ತಿಳುವಳಿಕೆ ನೀಡಬೇಕು.
- ✓ ಪರ್ಯಾಯ ವಸ್ತುಗಳ ಬಗ್ಗೆ ತಿಳುವಳಿಕೆ ನೀಡಬೇಕಾಗುತ್ತದೆ.

**ವ್ಯವಹಾರದ ನೀತಿ ತತ್ವಗಳು:–**

- ➢ ವ್ಯವಹಾರದ ಮುಖ್ಯ ಉದ್ದೇಶ:– ವ್ಯವಹಾರ ನಡೆಸಲು ಸಮಂಜಸವಾದ & ನ್ಯಾಯಾಯುಕ್ತ ಲಾಭ ಗಳಿಕೆ
- ➢ ಗ್ರಾಹಕರಿಗೆ ವಸ್ತುಗಳನ್ನು & ಸೇವೆಗಳನ್ನು ಒದಗಿಸುತ್ತದೆ.
- ➢ ವ್ಯಾಪಾರಗಾರರು ತಮ್ಮ ವ್ಯವಹಾರ ನಡೆಸಲು ಸಾಕಾಗುವಷ್ಟು ಲಾಭ ಮಾತ್ರ ಇಟ್ಟುಕೊಳ್ಳಬೇಕು
- ➢ ಇದರಿಂದ ವ್ಯವಹಾರದ ವೃತ್ತಿಧರ್ಮ ಪಾಲಿಸಿದಂತಾಗುತ್ತದೆ.
- ➢ ಸಮಾಜಕ್ಕೆ ತಮ್ಮ ಸೇವೆ ಮಾಡಿದಂತಾಗುತ್ತದೆ.
- ➢ ಇಂದು ಹಣಗಳಿಕೆಗಾಗಿ ಲಾಭ ಕೋರತನ ವ್ಯವಹಾರದಲ್ಲಿ ಹೊಕ್ಕಿದೆ.
- ➢ ಕೆಲವು ವ್ಯಾಪಾರಸ್ಥರು ಅಹಿತಕರ ವ್ಯವಹಾರ ಪದ್ಧತಿಗಳನ್ನು ಅನುಸರಿಸುತ್ತಾರೆ.
- ➢ ಉದಾ:– ವಸ್ತುಗಳ ಕಲಬೆರಿಕೆ, ಹೆಚ್ಚುಲಾಭ, ತೂಕ & ಅಳತೆಗಳಲ್ಲಿ ಮೋಸ,

RAMALINGAPPA L Asst.Teacher

- ಅಕ್ರಮ ದಾಸ್ತಾನು ಮಾಡಿ ಕೃತಕ ಅಭಾವ ಪರಿಸ್ಥಿತಿ ಏರ್ಪಡಿಸುವುದು ಕಾಳಸಂತೆಯಲ್ಲಿ ವಸ್ತುಗಳನ್ನು ಮಾರುವುದು.
- ಈ ವಿಧಾನಗಳಿಂದ ಗ್ರಾಹಕರಿಗೆ ಅನೇಕ ತೊಂದರೆಗಳುಂಟಾಗುತ್ತವೆ.
- ಈ ರೀತಿಯ ಮೋಸ ವಿಧಾನಗಳನ್ನು ಅನುಸರಿಸದೆ ವ್ಯಾಪಾರ ನೀತಿ ತತ್ವಗಳನ್ನು ಅನುಸರಿಸಬೇಕು
- ಇದನ್ನು ನಿವಾರಿಸಲು ಸರ್ಕಾರ 'ಸಾರ್ವಜನಿಕ ವಿತರಣಾ ಪದ್ಧತಿ' ಯನ್ನು ಜಾರಿಗೆ ತಂದಿದೆ.
- ಅಗತ್ಯ ವಸ್ತುಗಳ ಸರಬರಾಜಿನ ಬಗ್ಗೆ ಕಾನೂನನ್ನು ರಚಿಸಿದೆ.
- ಕೈಗಾರಿಕಾ ವಸ್ತುಗಳ ಮೇಲೆ ಕಾನೂನಿನ ಪ್ರಕಾರ ವಸ್ತುಗಳ ಪಟ್ಟಣಗಳ ಮೇಲೆ ಉತ್ಪಾದನಾ ತಾರೀಖು ಬಳಕೆಯ ದಿನಮಿತಿ ತೂಕ ಅಥವಾ ಅಳತೆ ಮತ್ತು ಗರಿಷ್ಠ ಬೆಲೆಯನ್ನು ಮುದ್ರಿಸಬೇಕು.
- ಪದಾರ್ಥಗಳ ಗುಣಮಟ್ಟ ಕಾಪಾಡಲು ಭಾರತೀಯ ಮಾನಕ ಸಂಸ್ಥೆ ಸ್ಥಾಪಿಸಿದೆ.
- ಇದು ಪದಾರ್ಥಗಳ ಗುಣಮಟ್ಟ ಪರೀಕ್ಷಿಸಿ ವಸ್ತುಗಳ ಮೇಲೆ (ಐ.ಎಸ್.ಐ) ಚಿಹನೆ ಮುದ್ರಿಸಿದೆ.
- ವ್ಯವಸಾಯ ಉತ್ಪನ್ನ ವಸ್ತುಗಳ ಗುಣಮಟ್ಟ ತಿಳಿಯಲು ಆಗ್‌ಮಾರ್ಕ್ ಚಿಹ್ನೆ ಮುದ್ರಿಸಿದೆ.
- ಸರ್ಕಾರ ಅಗತ್ಯ ವಸ್ತುಗಳನ್ನು ಒದಗಿಸುವ ಗ್ರಾಹಕರ ಸಹಕಾರ ಸಂಘಗಳನ್ನು ಜನತಾ ಬಜಾರುಗಳನ್ನು ಸ್ಥಾಪಿಸಿದೆ.

## ಅಧ್ಯಾಯ–3
## ವಿವಿಧ ವ್ಯವಹಾರ ಸಂಘಟನೆಗಳು

**ವಿವಿಧ ವ್ಯವಹಾರ ಸಂಘಟನೆಗಳು:–**

1. ಏಕ ಮಾಲೀಕತ್ವದ ಸಂಸ್ಥೆಗಳು
2. ಪಾಲುದಾರಿಕೆ ಸಂಸ್ಥೆಗಳು
3. ಹಿಂದೂ ಅವಿಭಕ್ತ ಕುಟುಂಬ ಸಂಸ್ಥೆಗಳು
4. ಸಹಕಾರ ಸಂಘಗಳು
5. ಕೂಡು ಬಂಡವಾಳ ಸಂಸ್ಥೆಗಳು

**ಏಕ ಮಾಲೀಕತ್ವದ ಸಂಸ್ಥೆಗಳು:–**

- ಇವು ಒಬ್ಬನೇ ವ್ಯಕ್ತಿಯಿಂದ ನಡೆಸಲ್ಪಡುತ್ತವೆ. ಆತನೇ ಮಾಲೀಕ, ನಿಯಂತ್ರಕ, ನಷ್ಟ ಭರಿಸುವವನು & ಬಂಡವಾಳ ಹೂಡಿರುವವನು ಆಗಿರುತ್ತಾನೆ.
- ಲಕ್ಷಣಗಳು:–

1. ಹಿಂದಿನ ಕಾಲದಿಂದಲೂ ರೂಢಿಯಲ್ಲಿರುವ ಸಂಸ್ಥೆ
2. ಇವುಗಳನ್ನು ಸುಲಭವಾಗಿ ಸ್ಥಾಪಿಸಬಹುದು
3. ಇವುಗಳ ಮಾಲೀಕತ್ವ ಒಬ್ಬನೇ ವ್ಯಕ್ತಿಗೆ ಸೇರಿರುತ್ತವೆ.
4. ಇವು ಮಾಲೀಕನ ಲಾಭಕ್ಕಾಗಿ ನಿರ್ವಹಿಸಲ್ಪಡುತ್ತವೆ.
5. ಮಾಲೀಕರು ತಮ್ಮ ಸ್ವಂತ ಬಂಡವಾಳವನ್ನು ಹೂಡಿ, ಸ್ವಂತ ಕೌಶಲ್ಯ ಉಪಯೋಗಿಸಿ ನಡೆಸುತ್ತಾನೆ.
6. ಇವುಗಳನ್ನು ಪ್ರಾರಂಭಿಸಲು & ಮುಚ್ಚಲು ಯಾವುದೇ ಕಾನೂನಿನ ನಿಬಂಧನೆಗಳಿರುವುದಿಲ್ಲ
7. ಇವರು ತಮ್ಮ ಕುಟುಂಬ ಸದಸ್ಯರ ಸಹಾಯವನ್ನು ಪಡೆದುಕೊಳ್ಳುತ್ತಾರೆ.
8. ಸಹಾಯಕ್ಕೆ ಕೆಲಸಗಾರರನ್ನು ನೇಮಿಸಿಕೊಳ್ಳುತ್ತಾರೆ
9. ಇವು ಸಣ್ಣ ಪ್ರಮಾಣದಲ್ಲಿರುತ್ತವೆ.

**ಅನುಕೂಲಗಳು:–**

- ✓ ಪ್ರಾರಂಭಿಸಲು ಯಾವುದೇ ಕಾನೂನಿನ ಕಟ್ಟಲೆಗಳ ಅವಶ್ಯಕತೆ ಬೇಕಾಗಿಲ್ಲ
- ✓ ಸ್ವಂತ ಬಂಡವಾಳದಿಂದಲೇ ಪ್ರಾರಂಭಿಸುವುದು
- ✓ ಅನುದಿನದ ವಹಿವಾಟು ನಡೆಸುವುದು ಅಷ್ಟೇನು ಕಷ್ಟವಲ್ಲ
- ✓ ಸಂಸ್ಥೆಯ ಲಾಭ & ನಷ್ಟವನ್ನು ಏಕವ್ಯಕ್ತಿ ಮಾಲಿಕರೆ ಅನುಭವಿಸುತ್ತಾರೆ.
- ✓ ವ್ಯಾಪಾರದ ಮೇಲ್ವಿಚಾರಣೆ ಸ್ವತಃ ತಾವೇ ನೋಡಿಕೊಳ್ಳುತ್ತಾರೆ.
- ✓ ಇವರು ಗ್ರಾಹಕರ ಜೊತೆಯಲ್ಲಿ ನೇರ ಸಂಪರ್ಕ ಇಟ್ಟುಕೊಂಡಿರುತ್ತಾರೆ.
- ✓ ಅನೇಕ ಸಾಮಾಜಿಕ ಸೇವೆಗಳನ್ನು ಮಾಡುತ್ತಾರೆ.
- ✓ ಕೆಲವರಿಗೆ ಉದ್ಯೋಗಾವಕಾಶ ಕಲ್ಪಿಸುತ್ತಾರೆ.
- ✓ ಸಂಪತ್ತು ಹಾಗೂ ಆರ್ಥಿಕ ಅಧಿಕಾರ ಶಕ್ತಿಗಳನ್ನು ಹಂಚಲು ಸಹಾಯ
- ✓ ಗ್ರಾಹಕರಿಗೆ ಬೇಕಾದ ದೈನಂದಿನ ಇಷ್ಟಗಳನ್ನು ಅರಿತು ವಸ್ತುಗಳನ್ನು ಸರಬರಾಜು ಮಾಡುತ್ತಾರೆ.

RAMALINGAPPA L Asst.Teacher

- ✓ ಸರ್ಕಾರಕ್ಕೆ ಸಕಾಲದಲ್ಲಿ ತೆರಿಗೆಗಳನ್ನು ಪಾವತಿ ಮಾಡುತ್ತಾರೆ
- ✓ ಶೀಘ್ರ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾರೆ & ವ್ಯವಹಾರದ ಗುಟ್ಟನ್ನು ಕಾಪಾಡಿಕೊಳ್ಳುತ್ತಾರೆ.
- ✓ ತನ್ನ ಆಲೋಚನೆಗೆ ಬಂದ ಹೊಸ ಕಲ್ಪನೆಗಳನ್ನು ಪೂರ್ಣವಾಗಿ ಕಾರ್ಯಗತಗೊಳಿಸಬಹುದು

**ದೋಷಗಳು:–**

- ➢ ಬಂಡವಾಳ ಮಿತಿಯಾಗಿದ್ದು ದೊಡ್ಡದಾಗಿ ಬೆಳೆಸಲು ಕಷ್ಟವಾಗುವುದು
- ➢ ಆಡಳಿತ ಕೌಶಲ್ಯಗಳು ಸೀಮಿತವಾಗಿರುತ್ತವೆ.
- ➢ ಯಾವಾಗಲೂ ಒಬ್ಬರಿಗಿಂತ ಇಬ್ಬರು/ಜಾಸ್ತಿ ವ್ಯಕ್ತಿಗಳು ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸೂಕ್ತವಾಗುತ್ತದೆ.
- ➢ ಎಲ್ಲಾ ನಷ್ಟ/ಹೊಣೆಗಾರಿಕೆಗಳನ್ನು ಒಬ್ಬನೇ ಹೊರಬೇಕಾಗುತ್ತದೆ.
- ➢ ಮಾಲೀಕನ ನಿಧನ/ದಿವಾಳಿಯಾದಾಗ ಸಂಸ್ಥೆಯನ್ನು ಮುಚ್ಚಬೇಕಾದ ಪರಿಸ್ಥಿತಿ ಉಂಟಾಗುತ್ತದೆ.

**ಪಾಲುಗಾರಿಕೆ ವ್ಯವಹಾರ ಸಂಸ್ಥೆಗಳು:–**

- ❖ ಏಕವ್ಯಕ್ತಿ ಮಾಲೀಕತ್ವದ ಪರಿಮಿತಿಯನ್ನು ನಿವಾರಿಸಲು ರೂಢಿಗೆ ಬಂದವು
- ❖ ಇಲ್ಲಿ ಒಬ್ಬರಿಗಿಂತ ಹೆಚ್ಚು ಜನ ಕಲೆತು ವ್ಯವಹಾರ ಮಾಡುತ್ತಾರೆ.
- ❖ ಇವುಗಳನ್ನು ಆರಂಭಿಸಿ & ನಡೆಸಲು 1932 ರಲ್ಲಿ ಪಾಲುಗಾರಿಕೆ ಸಂಸ್ಥೆಯ ಕಾನೂನು ಜಾರಿ
- ❖ ಈ ಕಾಯ್ದೆಯ 4ನೇ ಸೆಕ್ಷನ್ ಪ್ರಕಾರ ಎಲ್ಲರೂ ಕೈಗೊಂಡಿರುವ/ಅದರಲ್ಲಿ ಎಲ್ಲಾರ ಪರವಾಗಿ ಒಬ್ಬ ವ್ಯವಹರಿಸುತ್ತಿರುವ ವ್ಯವಹಾರದ ಲಾಭಗಳನ್ನು ಹಂಚಿಕೊಳ್ಳಲು ಒಪ್ಪಿಕೊಂಡಿರುವ ವ್ಯಕ್ತಿಗಳ ನಡುವಿನ ಸಂಬಂಧ ಪಾಲುಗಾರಿಕೆಯಾಗಿದೆ.
- ❖ ಹಣಕಾಸಿನ ವ್ಯವಹಾರ ಮಾಡುವುದಾದರೆ ಗರಿಷ್ಠ ಹತ್ತು ಜನ ಪಾಲುಗಾರರು ಇರಬೇಕು
- ❖ ಸಾಮಾನ್ಯ ಪಾಲುಗಾರಿಕೆ ವ್ಯವಹಾರ ಮಾಡುವುದಾದರೆ ಗರಿಷ್ಠ ಇಪ್ಪತ್ತು ಜನ ಪಾಲುಗಾರರಿರಬೇಕು.

**ಪಾಲುಗಾರರ ವಿಧಗಳು:–**

**ಕ್ರಿಯಾಶೀಲ/ಸಕ್ರೀಯ ಪಾಲುಗಾರರು:–**

- ✓ ಇವರು ನಿಗದಿತ ಬಂಡವಾಳ ಹೂಡಿರುತ್ತಾರೆ.
- ✓ ಲಾಭ–ನಷ್ಟಗಳನ್ನು ಹಂಚಿಕೊಳ್ಳುತ್ತಾರೆ.
- ✓ ಸಂಸ್ಥೆಯ ದಿನವಹಿ ವಹಿವಾಟುಗಳನ್ನು ಸಕ್ರಿಯವಾಗಿ ನಡೆಸಿಕೊಂಡು ಹೋಗುತ್ತಾರೆ.

**ತಟಸ್ಥ ಪಾಲುಗಾರರು:–**

- ➢ ಇವರು ಬಂಡವಾಳವನ್ನು ಹೂಡಿರುತ್ತಾರೆ.
- ➢ ದಿನವಹಿ ವಹಿವಾಟುಗಳಲ್ಲಿ ಸಕ್ರೀಯವಾಗಿ ಭಾಗವಹಿಸುವುದಿಲ್ಲ
- ➢ ಲಾಭ ನಷ್ಟಗಳನ್ನು ಹಂಚಿಕೊಳ್ಳುತ್ತಾರೆ.

**ನಾಮಮಾತ್ರ ಪಾಲುಗಾರರು:–**

- ❖ ಇವರು ಬಂಡವಾಳವನ್ನು ಹೂಡಿರುವುದಿಲ್ಲ
- ❖ ದೈನಂದಿನ ವಹಿವಾಟುಗಳಲ್ಲಿ ಭಾಗವಹಿಸುವುದಿಲ್ಲ
- ❖ ಸಾಲಗಳಿಗೆ ಹೊಣೆಯಾಗಿರುತ್ತಾರೆ.

**ಅಪ್ರಾಪ್ತ ವಯಸ್ಕ ಪಾಲುಗಾರರು:–**

- ✓ 18ವರ್ಷ ವಯಸ್ಸಿಗಿಂತ ಕಡಿಮೆ ಇರುವವರು ಪಾಲುಗಾರರಾಗಲು ಸಾಧ್ಯವಿಲ್ಲ
- ✓ ಆದರೆ ಪಾಲುಗಾರರ ಸಮ್ಮತಿಯಂತೆ ಕರಾರಿನಂತೆ ಸಂಸ್ಥೆಯ ಹಿತದೃಷ್ಟಿಯಿಂದ
- ✓ 18 ವರ್ಷ ಮೀರದವರೂ ಪಾಲುಗಾರರಾಗಿ ಸೇರಿಸಬಹುದು
- ✓ ಇವರು ಲಾಭಗಳಲ್ಲಿ ಮಾತ್ರ ಪಾಲನ್ನು ಪಡೆಯುತ್ತಾರೆ
- ✓ ನಷ್ಟಗಳಿಗೆ ಹೊಣೆಯಾಗುವುದಿಲ್ಲ
- ✓ ಹೊಸದಾಗಿ ಆರಂಭಿಸುವುದಕ್ಕೆ ಇವರನ್ನು ಸೇರಿಸಿಕೊಳ್ಳುವುದಿಲ್ಲ

- ➢ ರಹಸ್ಯ ಪಾಲುದಾರರು
- ➢ ಸೀಮಿತ ಪಾಲುದಾರರು
- ➢ ಅರೆ ಪಾಲುದಾರರು
- ➢ ಲಾಭದಲ್ಲಿ ಮಾತ್ರ ಪಾಲುದಾರರು

**ಪಾಲುಗಾರಿಕೆಯ ಕರಾರು:–**

- ✓ ಕರಾರು ಪತ್ರ ಸಾಮಾನ್ಯವಾಗಿ ಬರಹದಲ್ಲಿರುತ್ತದೆ.
- ✓ ಕೆಲವು ಸಂದರ್ಭಗಳಲ್ಲಿ ಬಾಯಿಮಾತಿನಲ್ಲಿ ಕರಾರೂ ಇರುತ್ತದೆ.

RAMALINGAPPA L Asst Teacher

**ಈ ಕರಾರಿನಲ್ಲಿ ಅಡಕವಾಗಿರುವ ಅಂಶಗಳು:–**

1. ಸಂಸ್ಥೆಯ ಹೆಸರು
2. ಪಾಲುಗಾರರ ಹೆಸರು
3. ವಿಳಾಸ
4. ವ್ಯವಹಾರ ನಡೆಯುವ ಸ್ಥಳ
5. ವ್ಯವಹಾರ ಸ್ವರೂಪ
6. ಉಪಶಾಖೆಗಳೇನಾದರೂ ಇದ್ದರೆ ಅವುಗಳ ವಿಳಾಸ
7. ಪ್ರಾರಂಭವಾಗುವ ದಿನಾಂಕ
8. ಪ್ರತಿ ಪಾಲುದಾರರೂ ಹೂಡಿರುವ ಬಂಡವಾಳ
9. ಲಾಭನಷ್ಟಗಳನ್ನು ಹಂಚಿಕೊಳ್ಳುವ ಅನುದಾನ
10. ಪ್ರತಿ ಪಾಲುದಾರರ ಕರ್ತವ್ಯಗಳು
11. ಕೆಲಸಗಳ ಹಂಚಿಕೆ
12. ಹೊಸ ಪಾಲುಗಾರರನ್ನೇನಾದರೂ ಸೇರಿಸಿಕೊಳ್ಳಬೇಕಾದಲ್ಲಿ ಅನುಸರಿಸಬೇಕಾದ ನಿಯಮಗಳು
13. ಪಾಲುಗಾರರಲ್ಲಿ ಯಾಕದರೂ ಪ್ರವೃತ್ತಿ ಹೊಂದಿದರೆ/ಮರಣ ಹೊಂದಿದರೆ ಪುನರ್ ಮೌಲ್ಯ ನಿರ್ಧರಿಸುವ ವಿಧಾನ
14. ಪಾಲುಗಾರರಲ್ಲೇನಾದರೂ ಭಿನ್ನಾಭಿಪ್ರಾಯಗಳು ಬಂದಾಗ ಬಗೆಹರಿಸಿಕೊಳ್ಳಲು ಪಾಲಿಸಬೇಕಾದ ವಿಧಾನಗಳು

**ಪಾಲುಗಾರಿಕೆ ಸಂಸ್ಥೆಯ ಅನುಕೂಲಗಳು:–**

- ಸುಲಭ ರಚನೆ
- ಹೆಚ್ಚಿನ ಬಂಡವಾಳ
- ಹೆಚ್ಚಿನ ಪರಿಣತಿ
- ವಿಶ್ವಾಸಾರ್ಹತೆ
- ನಷ್ಟದ ಹಂಚಿಕೆ
- ವ್ಯವಹಾರದ ರಹಸ್ಯ
- ಸರಳ ವಿಸರ್ಜನೆ

**ದೋಷಗಳು:–**

- ಕೆಲವು ಸಂದರ್ಭಗಳಲ್ಲಿ ಪಾಲುಗಾರರ ನಡುವೆ ಒಮ್ಮತ ಇಲ್ಲದೆ ಹೋದಾಗ ಅವರವರಲ್ಲಿ ತಾರತಮ್ಯ ಉಂಟಾಗುತ್ತವೆ.
- ಪಾಲುಗಾರರ ಸಂಖ್ಯೆಯಲ್ಲಿ ಗರಿಷ್ಠ ಮಿತಿ ಇರುವುದರಿಂದ ಹೆಚ್ಚು ಬಂಡವಾಳದ ಹೂಡಿಕೆಗೆ ಸಾಧ್ಯವಾಗದೆ ಹೋಗುತ್ತದೆ.
- ನಷ್ಟದ ಹೊಣೆಗಾರಿಕೆ ಅಪರಿಮಿತವಾಗಿದ್ದು ಹೆಚ್ಚು ಜನ ಪಾಲುಗಾರರಾಗಲು ಇಷ್ಟಪಡುವುದಿಲ್ಲ
- ಕೆಲವು ಪಾಲುಗಾರರ ಅಜಾಗರೂಕತೆ/ಅವಿವೇಕತನದ ನಿರ್ಧಾರಗಳು ಸಂಸ್ಥೆಯ ಹಿನ್ನಡೆಗೆ ಕಾರಣವಾಗುತ್ತದೆ.
- ಪಾಲುದಾರಿಕೆ ಸಂಸ್ಥೆ ಸ್ಥಿರತೆಯ ಅಭಾವ ಹೊಂದಿರುತ್ತದೆ.
- ಯಾರಾದರೂ ಒಬ್ಬ ಪಾಲುಗಾರ ಮರಣ ಹೊಂದಿದರೆ/ದಿವಾಳಿಯಾದರೆ ಸಂಸ್ಥೆಯನ್ನು ವಿಸರ್ಜಿಸಬೇಕಾಗುತ್ತದೆ.
- ಪಾಲುಗಾರರು ತಮ್ಮ ಪಾಲನ್ನು ಬೇರೆಯವರಿಗೆ ಸುಲಭವಾಗಿ ವರ್ಗಾಯಿಸಲು ಸಾಧ್ಯವಿಲ್ಲ
- ಸರ್ಕಾರದ ಹಿಡಿತ ಹೆಚ್ಚಾಗಿಲ್ಲದೆ ಇರುವುದರಿಂದ ಹಾಗೂ ಲೆಕ್ಕ ಪತ್ರಗಳನ್ನು ಪ್ರಕಟಪಡಿಸಬೇಕಾಗಿಲ್ಲದೆ ಇರುವುದರಿಂದ ಸಾರ್ವಜನಿಕರಿಂದ ಬೆಂಬಲ ಸಿಗುವುದಿಲ್ಲ
- ಎರಡು/ಹೆಚ್ಚು ಪಾಲುಗಾರರು ಇರುವುದರಿಂದ ವ್ಯವಹಾರ ಗೌಪ್ಯತೆ ನಿರ್ವಹಣೆ ಕಷ್ಟಸಾಧ್ಯ.

**ಪಾಲುಗಾರಿಕೆ ಸಂಸ್ಥೆಗಳ ನೋಂದಣಿಯಿಂದಾಗುವ ಉಪಯೋಗಗಳು:–**

- ನೋಂದಣಿ ಹೊಂದಿರುವ ಸಂಸ್ಥೆಯು ಒಂದು ನೂರು ರೂಪಾಯಿಗಳನ್ನು ಮೀರಿದ ಸಾಲದ ವಸೂಲಾತಿಗಾಗಿ 3ನೇ ವ್ಯಕ್ತಿಗಳ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದು.
- ನೋಂದಣಿಯಾಗಿರುವ ಸಂಸ್ಥೆಗಳು ಸಾಲಗಳ ವಸೂಲಿಗಾಗಿ ಇತರೆ ಪಾಲುಗಾರನ ವಿರುದ್ಧವೂ ದಾವೆ ಹೂಡಬಹುದು
- ನೋಂದಣಿಯಾಗದ ಸಂಸ್ಥೆಯ ವಿರುದ್ಧ/ಅದರ ಪಾಲುಗಾರರ ವಿರುದ್ಧ 3ನೇ ವ್ಯಕ್ತಿ ದಾವೆ ಹೂಡಬಹುದು.
- ನೋಂದಣಿಯಾಗದ ಸಂಸ್ಥೆ/ಅದರ ಪಾಲುಗಾರರ ವಿರುದ್ಧ ಯಾವುದೇ ಪಾಲುಗಾರನಾಗಲಿ ಸಂಸ್ಥೆಯ ವಿಸರ್ಜನೆಗೆ/ಲೆಕ್ಕಪತ್ರಗಳ ಇತ್ಯರ್ಥಕ್ಕಾಗಿ ನ್ಯಾಯಾಲಯದಲ್ಲಿ ದಾವೆ ಹೂಡಬಹುದು

**ಹಿಂದೂ ಅವಿಭಕ್ತ ಕುಟುಂಬ ವ್ಯವಹಾರ ಸಂಸ್ಥೆಗಳು:–**

RAMALINGAPPA L Asst. Teacher

- ✓ ಇವು ಭಾರತದಲ್ಲಿ ಮಾತ್ರ ಅಸ್ತಿತ್ವದಲ್ಲಿವೆ
- ✓ ಇವು ಹಿಂದೂ ಕಾನೂನಿನ ಅನ್ವಯ ಜಾರಿಗೆ ಬರುತ್ತವೆ.
- ✓ ಇವು ಹಿಂದೂ ಕುಟುಂಬದ ಎಲ್ಲಾ ಗಂಡಸರಿಂದ ಕೂಡಿದ ಸಂಸ್ಥೆ
- ✓ ನಿತಂರವಾಗಿ 3 ತಲೆಮಾರುಗಳ ಗಂಡು ಸದಸ್ಯರು ಈ ವ್ಯವಹಾರ ಸಂಸ್ಥೆಗಳ ಸದಸ್ಯರು
- ✓ ಅವಿಭಕ್ತ ಕುಟುಂಬದ ಅತ್ಯಂತ ಹಿರಿಯ ಗಂಡು ಸದಸ್ಯ ವ್ಯವಹಾರದ ಮೇಲ್ವಿಚಾರಣೆ ನೋಡಿಕೊಳ್ಳುತ್ತಾನೆ.
- ✓ ಅವನನ್ನು ಕರ್ತ ಎನ್ನುವರು
- ✓ ಮಾಲೀಕತ್ವವು ಎಲ್ಲ ಸದಸ್ಯರದಾಗಿದ್ದರೂ ಆಡಳಿತವನ್ನು ಕರ್ತನು ನಿರ್ವಹಿಸುತ್ತಾನೆ
- ✓ ಕರ್ತನ ಹೊಣೆಗಾರಿಕೆ ಅಪರಿಮಿತವಾಗಿರುತ್ತದೆ.
- ✓ ಇತರೆ ಸದಸ್ಯರ ಹೋಣೆಗಾರಿಕೆ ಅವರು ಹೂಡಿರುವ ಬಂಡವಾಳದ ಪ್ರಮಾಣಕ್ಕೆ ಸೀಮಿತವಾಗಿರುತ್ತದೆ.

RAMALINGAPPA L Asst. Teacher